ಕರ್ನಾಟಕ ರಾಜ್ಯ
ಸಹಕಾರ ಪತ್ತಿನ ಸಂಘಗಳ
ಮಹಾಮಂಡಳದ ಪ್ರಕಟಣೆ

ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಕನ್ನಡ ಮಾಸಪತ್ರಿಕೆ

# ಸಹಕಾರ

ಮಾಸಪತ್ರಿಕೆ

ಸಂಪುಟ : 5 । ಸಂಚಿಕೆ : 4 । ಏಪ್ರಿಲ್ - 2023 । ಪುಟಗಳು : 40 । ಬೆಲೆ : 25/-

## ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು

## ನೂತನ ಆಡಳಿತ ಕಚೇರಿ ಉದ್ಘಾಟನೆ



**ಎಸ್.ಟಿ. ಸೋಮಶೇಖರ್**
ಸಹಕಾರ ಸಚಿವರು
ಕರ್ನಾಟಕ ಸರ್ಕಾರ



**ಕೆ. ಗೋಪಾಲಯ್ಯ**
ಅಬಕಾರಿ ಸಚಿವರು
ಕರ್ನಾಟಕ ಸರ್ಕಾರ



**ಡಿ.ವಿ. ಸದಾನಂದಗೌಡ**
ಲೋಕಸಭಾ ಸದಸ್ಯರು



**ಎಸ್. ರವಿ**
ಶಾಸಕರು (ವಿಧಾನ ಪರಿಷತ್ತು)



**ಜಿ.ಟಿ. ದೇವೇಗೌಡ**
ಶಾಸಕರು ಹಾಗೂ ಅಧ್ಯಕ್ಷರು
ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ



**ಕೆ. ಲಲಿತ ಜಿ.ಟಿ. ದೇವೇಗೌಡ**
ಅಧ್ಯಕ್ಷರು
ಕರ್ನಾಟಕ ರಾಜ್ಯ ಸಹಕಾರ
ಪತ್ತಿನ ಸಂಘಗಳ ಮಹಾಮಂಡಳ



**ಕೆ.ಕೆ. ಮಹೇಂದ್ರ ಪ್ರಸಾದ್‌ಗೌಡ**
ಉಪಾಧ್ಯಕ್ಷರು
ಕರ್ನಾಟಕ ರಾಜ್ಯ ಸಹಕಾರ
ಪತ್ತಿನ ಸಂಘಗಳ ಮಹಾಮಂಡಳ



# ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು

## ಅಧ್ಯಕ್ಷರುಗಳು



ಶ್ರೀ ಬಿ.ಎಲ್.ಲಕ್ಕೇಗೌಡ
2004–2014



ಶ್ರೀ ಎಸ್.ಚಂದ್ರಶೇಖರ್
2014–2016



ಶ್ರೀ ಸಿ.ಎಂ.ಮಾರೇಗೌಡ
2016–2019



ಶ್ರೀಮತಿ ಕೆ.ಲಲಿತ ಜಿ.ಟಿ.ದೇವೇಗೌಡ
2019ರಿಂದ ಇಲ್ಲಿಯವರೆಗೆ

## ಉಪಾಧ್ಯಕ್ಷರುಗಳು



ಶ್ರೀ ವಿ.ರಾಜು
2004–2009



ಶ್ರೀ ಮುರಿಗೆಪ್ಪ ಕಾಶಪ್ಪ ನಾರಾ
2009–2012




ಶ್ರೀ ಶಿವರಾಜ್ ಬಿ ಪಾಟೀಲ್
2012–2014



ಶ್ರೀ ಬಿ.ಡಿ.ಭೂಕಾಂತ
2014–2017, 2019–2021



ಡಾ॥ ಸಂಜಯ ಪಿ. ಹೊಸಮಠ
2017–2019



ಶ್ರೀ ಕೆ.ಕೆ. ಮಹೇಂದ್ರಪ್ರಸಾದ್‌ಗೌಡ
18.02.2022 ರಿಂದ ಇಲ್ಲಿಯವರೆಗೆ

## ಸಂಪಾದಕೀಯ



ಶ್ರೀಮತಿ ಕೆ. ಲಲಿತ ಟಿ.ಬಿ. ದೇವೇಗೌಡ
ಅಧ್ಯಕ್ಷರು

ಕಟ್ಟಡ ನಿರ್ಮಾಣ ಕಾರ್ಯಕ್ಕೆ ಆರ್ಥಿಕ ನೆರವು ಪ್ರೋತ್ಸಾಹ ನೀಡಿದ ಸಹಕಾರಿ ಮುಖಂಡರು ಮತ್ತು ಸಹಕಾರಿ ಸಂಸ್ಥೆಗಳನ್ನು ನಾನು ಆಡಳಿಮಂಡಳಿಯ ಪರವಾಗಿ ತುಂಬು ಹೃದಯದ ಕೃತಜ್ಞತೆಗಳನ್ನು ಸಲ್ಲಿಸುತ್ತಿದ್ದೇನೆ. ಪತ್ತಿನ ಸಹಕಾರ ವಲಯವನ್ನು ಬಲಪಡಿಸುವುದು, ವಲಯದ ಸಮಸ್ಯೆಗಳಿಗೆ ಶಾಶ್ವತ ಪರಿಹಾರವನ್ನು ಕಂಡುಕೊಳ್ಳುವುದು, ವಾಜ್ಯಗಳ ಇತ್ಯರ್ಥಕ್ಕೆ ಸಹಕಾರ ನ್ಯಾಯಾಲಯ ಸ್ಥಾಪನೆ, ಹೀಗೆ ಹಲವು ವಿಷಯಗಳನ್ನು ಮುಂಬರುವ ದಿನಗಳಲ್ಲಿ ಪತ್ತಿನ ಸಹಕಾರ ಮಹಾಮಂಡಳವು ಹೊಸ ಹುಮ್ಮಸ್ಸಿನ ಜೊತೆಗೆ ಕ್ರಿಯಾಶೀಲ ಸದಸ್ಯ ಶಿಕ್ಷಣ ತರಬೇತಿ ಮೂಲಕ ಚಳುವಳಿಯನ್ನು ಬಲಪಡಿಸಲು ಯೋಜನೆಗಳನ್ನು ಹಮ್ಮಿಕೊಂಡಿದೆ.

# ಪತ್ತಿನ ಮಹಾಮಂಡಳದ ನೂತನ ಕಟ್ಟಡ ನಿರ್ಮಾಣ ಪೂರ್ಣ – ಸಾಧಿಸಬೇಕಾದುದು ಬಹಳಷ್ಟಿದೆ

ಕಳೆದ 19 ವರ್ಷಗಳಲ್ಲಿ ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳವು ತನ್ನ ಧ್ಯೇಯೋದ್ದೇಶಗಳನ್ನು ಈಡೇರಿಸುತ್ತಾ ಸದಸ್ಯ ಸೇವೆಗಳಲ್ಲಿ ನಿರತವಾಗಿದೆ. ಪತ್ತಿನ ಸಹಕಾರ ಮಹಾಮಂಡಳವು ಸ್ವಂತ ಕಟ್ಟಡ ಹೊಂದಬೇಕೆಂಬ ಅಭಿಲಾಷೆಯನ್ನು ಈ ಹಿಂದೆಯೇ ಹೊಂದಿತ್ತು.


"ಸಹಕಾರದಿಂದ ಸಮೃದ್ಧಿ" ಎನ್ನುವಂತೆ ಆಡಳಿತಮಂಡಳಿ ಸದಸ್ಯರ ಸಹಕಾರ, ಮಾರ್ಗದರ್ಶನ, ಸಹಕಾರ ಸಚಿವರು, ಸಹಕಾರ ಇಲಾಖೆ, ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ಸೇರಿದಂತೆ ಸಹಕಾರಿ ಮುಖಂಡರು ಮತ್ತು ಸಹಕಾರಿ ಸಂಸ್ಥೆಗಳ ಬೆಂಬಲ, ಪ್ರೋತ್ಸಾಹದೊಂದಿಗೆ ಬೆಂಗಳೂರಿನ ನಂದಿನಿ ಬಡಾವಣೆಯಲ್ಲಿ ಮೂರು ಮಹಡಿಗಳ ಸುಸಜ್ಜಿತ ಆಡಳಿತ ಕಚೇರಿ ಕಟ್ಟಡ ನಿರ್ಮಾಣ ಮಾಡಲಾಗಿದೆ.

ಕಟ್ಟಡ ನಿರ್ಮಾಣ ಕಾರ್ಯಕ್ಕೆ ಆರ್ಥಿಕ ನೆರವು, ಪ್ರೋತ್ಸಾಹ ನೀಡಿದ ಸಹಕಾರಿ ಮುಖಂಡರು ಮತ್ತು ಸಹಕಾರಿ ಸಂಸ್ಥೆಗಳನ್ನು ನಾನು ಆಡಳಿತ ಮಂಡಳಿಯ ಪರವಾಗಿ ತುಂಬು ಹೃದಯದ ಕೃತಜ್ಞತೆಗಳನ್ನು ಸಲ್ಲಿಸುತ್ತಿದ್ದೇನೆ. ಪತ್ತಿನ ಸಹಕಾರ ವಲಯವನ್ನು ಬಲಪಡಿಸುವುದು, ವಲಯದ ಸಮಸ್ಯೆಗಳಿಗೆ ಶಾಶ್ವತ ಪರಿಹಾರವನ್ನು ಕಂಡುಕೊಳ್ಳುವುದು, ವಾಜ್ಯಗಳ ಇತ್ಯರ್ಥಕ್ಕೆ ಸಹಕಾರ ನ್ಯಾಯಾಲಯ ಸ್ಥಾಪನೆ, ಹೀಗೆ ಹಲವು ವಿಷಯಗಳನ್ನು ಮುಂಬರುವ ದಿನಗಳಲ್ಲಿ ಪತ್ತಿನ ಸಹಕಾರ ಮಹಾಮಂಡಳವು ಹೊಸ ಹುಮ್ಮಸ್ಸಿನ ಜೊತೆಗೆ ಕ್ರಿಯಾಶೀಲ ಸದಸ್ಯ ಶಿಕ್ಷಣ, ತರಬೇತಿ ನೀಡುವ ಮೂಲಕ ಚಳುವಳಿಯನ್ನು ಬಲಪಡಿಸಲು ಯೋಜನೆಗಳನ್ನು ಹಮ್ಮಿಕೊಂಡಿದೆ. ಸಂಸ್ಥೆಯ ಬೆಳವಣಿಗೆಗೆ ಎಲ್ಲಾ ಸಹಕಾರಿ ಮುಖಂಡರು, ಸಹಕಾರ ಸಂಸ್ಥೆಗಳು ಭವಿಷ್ಯದಲ್ಲಿ ಕೈಜೋಡಿಸಬಲ್ಲವು ಎಂಬ ಆಶಾಭಾವನೆಯನ್ನು ಇರಿಸಿಕೊಂಡಿದ್ದೇವೆ.

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ಮತ್ತೊಮ್ಮೆ ತಮಗೆಲ್ಲರಿಗೂ ಹೃದಯಪೂರ್ವಕ ಶುಭಾಷಯಗಳನ್ನು ಸಲ್ಲಿಸುತ್ತದೆ.







"ಆರ್ಥಿಕ ಸ್ವಾತಂತ್ರ್ಯಕ್ಕೆ
ಸಹಕಾರವೇ ಹೆಬ್ಬಾಗಿಲು"
ಮಹಾತ್ಮ ಗಾಂಧೀಜಿ

ಸಿದ್ದನಗೌಡ ಸಂಣರಾಮನಗೌಡ ಪಾಟೀಲ
ಸಹಕಾರಿ ಪಿತಾಮಹ
ರಾಷ್ಟ್ರದ ಪ್ರಥಮ ಕೃಷಿ ಪತ್ತಿನ ಸಹಕಾರ ಸಂಘದ
ಸಂಸ್ಥಾಪಕರು

"ಗ್ರಾಮಕ್ಕೊಂದು ಶಾಲೆ, ಪಂಚಾಯಿತಿ
ಹಾಗೂ ಸಹಕಾರಿ ಸಂಘ ಇದ್ದಲ್ಲಿ
ಗ್ರಾಮಾಭಿವೃದ್ಧಿ ಸಾಧ್ಯ"
– ಜವಾಹರಲಾಲ್ ನೆಹರು


ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ
ಅಭಿವೃದ್ಧಿಗೆ ಮೀಸಲಾದ ಏಕಮಾತ್ರ ಕನ್ನಡ ಮಾಸಪತ್ರಿಕೆ

# ಸಹಕಾರ

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಪ್ರಕಟಣೆ



**ಕರ್ನಾಟಕ ರಾಜ್ಯ ಸಹಕಾರ ಪತ್ತಿನ
ಸಂಘಗಳ ಮಹಾಮಂಡಳ ನಿ., ಬೆಂಗಳೂರು**

ನಂ. 16, 1ನೇ ಮಹಡಿ, 1ನೇ ಅಡ್ಡರಸ್ತೆ, ಲಿಂಕ್‌ರಸ್ತೆ,
ಮಲ್ಲೇಶ್ವರಂ, ಬೆಂಗಳೂರು – 560003
ದೂರವಾಣಿ ಸಂಖ್ಯೆ :
080–23564444 / 23464033 / 23464034
ಇ–ಮೇಲ್ : info@ksccsf.org
ksccsfltd@gmail.com, ವೆಬ್ : www.ksccsf.org



**ಸಂಪಾದಕ ಮಂಡಳಿ**

ಅಧ್ಯಕ್ಷರು / ಪ್ರಧಾನ ಸಂಪಾದಕರು :
**ಶ್ರೀಮತಿ ಕೆ. ಲಲಿತ ಜಿ.ಟಿ. ದೇವೇಗೌಡ**

ಕಾರ್ಯನಿರ್ವಾಹಕ ಸಂಪಾದಕರು:
**ಶ್ರೀ ಕೆ.ಕೆ. ಮಹೇಂದ್ರ ಪ್ರಸಾದ್ ಗೌಡ**

ಸದಸ್ಯರು :
**ಶ್ರೀ ಕೆ. ಕೃಷ್ಣಮೂರ್ತಿ, ಶ್ರೀ ಜಿ. ಮಲ್ಲಿಕಾರ್ಜುನಯ್ಯ
ಶ್ರೀ ಹೆಚ್.ಟಿ. ನಾಗೇಶ್, ಶ್ರೀ ಚಿತ್ತರಂಜನ್ ಬೋಳಾರ್**

ಸಂಪಾದಕರು :
**ಶ್ರೀಮತಿ ಪಿ. ಆಶಾಲತಾ**
ಮುಖ್ಯಕಾರ್ಯನಿರ್ವಹಣಾಧಿಕಾರಿ (ಪ್ರಭಾರ)


**ಸುಭಾಷಿತ :** ಟೀಕೆಗಳು ಸಾಯುತ್ತವೆ. ಕೆಲಸಗಳು ಉಳಿಯುತ್ತವೆ. ಬಹುಜನರು ಹೇಳಿದ ಮಾತ್ರಕ್ಕೆ ಸುಳ್ಳು ನಿಜವಾಗುವುದಿಲ್ಲ. – ಕುವೆಂಪು


ಸಹಕಾರ ವಾರ್ತಾ ಪತ್ರಿಕೆ ಚಂದಾದಾರರಾಗ ಬಯಸುವವರು
ಚಂದಾ ಹಣವನ್ನು "ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ.,
ಬೆಂಗಳೂರು" ಇವರ ಹೆಸರಿಗೆ ಚೆಕ್ ಅಥವಾ ಡಿಡಿಯನ್ನು ಬರೆದು
ಕಳುಹಿಸಬೇಕಾಗಿ ವಿನಂತಿ. - ಸಿ.ಇ.ಒ.
ಐದು ವರ್ಷಗಳ ಚಂದಾ: ರೂ : 1500/-



**ಸೂಚನೆ :**
ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅನಿಸಿಕೆ,
ಅಭಿಪ್ರಾಯಗಳು ಆಯಾ ಬರಹಗಾರರದೇ ಆಗಿರುತ್ತದೆ ವಿನಃ
ಪತ್ರಿಕೆ / ಮಹಾಮಂಡಳದ ವಿಚಾರಗಳಾಗಿರುವುದಿಲ್ಲ.
- ಸಂಪಾದಕರು,
ಸಹಕಾರ ವಾರ್ತಾ ಪತ್ರಿಕೆ.

# ಶುಭ ಸಂದೇಶ



ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳವು ಕಳೆದ 18 ವರ್ಷಗಳಿಂದ ಪತ್ತಿನ ಸಹಕಾರ ಸಂಘಗಳ ಬೆಳವಣಿಗೆಗೆ ಹಲವಾರು ಮಾರ್ಗದರ್ಶನಗಳನ್ನು ನೀಡಿ ಕಾರ್ಯನಿರ್ವಹಿಸುತ್ತಿರುವುದು ನನಗೆ ಅತೀವ ಸಂತಸ ತಂದಿದೆ.

ಈ ಮಹಾಮಂಡಳವು ಪತ್ತಿನ ಸಹಕಾರ ಸಂಘಗಳ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ಹಾಗೂ ಆ ಸಂಘಗಳ ಪದಾಧಿಕಾರಿಗಳ, ನಿರ್ದೇಶಕರ ಮತ್ತು ನೌಕರ ವರ್ಗದವರಿಗೆ ಸಹಕಾರ ಸಂಘಗಳ ಅಧಿನಿಯಮ 1959 ಮತ್ತು ನಿಯಮಗಳು 1960ರ ಕುರಿತಂತೆ ತರಬೇತಿ ಕಾರ್ಯಕ್ರಮಗಳನ್ನು ನೀಡುವುದಲ್ಲದೇ, ತನ್ನ ಸದಸ್ಯರಿಗೆ ಅಗತ್ಯವಿರುವ ಬ್ಯಾಂಕಿಂಗ್ ವ್ಯವಹಾರ ಠೇವಣಿ ಮತ್ತು ಉಳಿತಾಯ ಖಾತೆಗಳನ್ನು ನಿರ್ವಹಿಸುವ ಸಂಘಗಳಿಗೆ ಈ ಮಹಾಮಂಡಳವು ಸೂಕ್ತ ಮಾಹಿತಿ ಒದಗಿಸುತ್ತಿದ್ದು, ಪತ್ತಿನ ಸಹಕಾರ ಸಂಘಗಳ ಅಭಿವೃದ್ಧಿ ಮಹಾಮಂಡಳದ ಪ್ರಮುಖ ಉದ್ದೇಶವಾಗಿರುವುದು ಹೆಮ್ಮೆಯ ವಿಷಯ.

ಪತ್ತಿನ ಸಹಕಾರ ಸಂಘಗಳನ್ನು ಸಂಘಟಿಸಿ ಅವುಗಳ ಅಭಿವೃದ್ಧಿಗೆ ಪ್ರೋತ್ಸಾಹಿಸುತ್ತಾ ಅವುಗಳ ಕಾರ್ಯವೈಖರಿ ಕುರಿತು ಮಾರ್ಗದರ್ಶನ ನೀಡಿ, ರಾಜ್ಯದಲ್ಲಿ ಮಾದರಿ ಸಂಸ್ಥೆಯಾಗಿ ಕಾರ್ಯನಿರ್ವಹಿಸಲಿ ಎಂದು ಹಾರೈಸುತ್ತಾ ಮಹಾಮಂಡಳದ ಹೆಮ್ಮೆಯ ಪ್ರಕಟಣೆಯಾದ ಸಹಕಾರ ವಾರ್ತಾಪತ್ರಿಕೆಯನ್ನು ಹೊರತರುತ್ತಿರುವ ಈ ಸಂದರ್ಭದಲ್ಲಿ ಈ ಮಹಾಮಂಡಳಕ್ಕೆ ಶುಭವಾಗಲೆಂದು ಹಾರೈಸುತ್ತೇನೆ.

**ಎಸ್.ಟಿ. ಸೋಮಶೇಖರ್**
**ಸಹಕಾರ ಮತ್ತು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರು,**
**ಕರ್ನಾಟಕ ಸರ್ಕಾರ**

# ಶುಭ ಸಂದೇಶ



ಭಾರತದ ಸಹಕಾರ ಚಳವಳಿ ಕರ್ನಾಟಕ ರಾಜ್ಯದಲ್ಲಿ ಪ್ರಾರಂಭಗೊಂಡು ದೇಶದಲ್ಲಿ 8.5 ಲಕ್ಷ ಸಹಕಾರ ಸಂಸ್ಥೆಗಳನ್ನು ಒಳಗೊಂಡ ಬೃಹದಾಕಾರದ ಆರ್ಥಿಕ, ಸಾಮಾಜಿಕ ಆಂದೋಲನವಾಗಿದೆ. ಕರ್ನಾಟಕದಲ್ಲಿ 46 ಸಾವಿರಕ್ಕೂ ಹೆಚ್ಚಿನ ಸಂಖ್ಯೆಯ ವಿವಿಧ ರೀತಿಯ ಸಹಕಾರ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿದ್ದು, ವಿಶೇಷವಾಗಿ 5 ಸಾವಿರಕ್ಕೂ ಅಧಿಕ ಪತ್ತಿನ ಸಹಕಾರ ಸಂಘಗಳು ಸದಸ್ಯ ಸೇವೆಗಳಲ್ಲಿ ತೊಡಗಿಸಿಕೊಂಡಿರುವುದು ಸಂತಸದ ವಿಚಾರವಾಗಿದೆ.


ಪತ್ತಿನ ಸಹಕಾರ ಸಂಘಗಳ ಬೆಳವಣಿಗೆಗೆ ಪೂರಕವಾಗಿ ಮಾರ್ಗದರ್ಶಕ ಸಂಸ್ಥೆಯಾಗಿ ಕರ್ನಾಟಕ ರಾಜ್ಯ ಪತ್ತಿನ ಸಹಕಾರ ಮಹಾಮಂಡಳವು ಎಲ್ಲಾ ರೀತಿಯ ನೆರವು ದೊರಕಿಸಿಕೊಡುವುದರ ಮೂಲಕ ಚಳವಳಿಯನ್ನು ಮತ್ತಷ್ಟು ಬಲಪಡಿಸುವ ಕಾರ್ಯಮಾಡುತ್ತಿದೆ.

ಕಳೆದ 2 ದಶಕಗಳಲ್ಲಿ ಪತ್ತಿನ ಮಹಾಮಂಡಳವು ತನ್ನ ಪರಿಣಾಮಕಾರಿ ಸೇವೆಯ ಮೂಲಕ ಇಂದು ಬೆಂಗಳೂರಿನ ನಂದಿನಿ ಬಡಾವಣೆಯಲ್ಲಿ ಸ್ವಂತ ನಿವೇಶನದಲ್ಲಿ ಸುಸಜ್ಜಿತ ಆಡಳಿತ ಕಚೇರಿ ನಿರ್ಮಾಣ ಮಾಡಿ ಪ್ರಾರಂಭೋತ್ಸವ ಏರ್ಪಡಿಸಿರುವುದು ಶ್ಲಾಘನೀಯ ವಿಚಾರವಾಗಿದೆ. ಸಾಮಾನ್ಯ ಜನರ ಆರ್ಥಿಕ ಸ್ವಾವಲಂಬನೆಗೆ ಕಾರಣವಾಗಿರುವ ಪತ್ತಿನ ಸಹಕಾರ ಚಳವಳಿ ಮುಂಬರುವ ದಿನಗಳಲ್ಲಿ ಗಾತ್ರದಲ್ಲಿ ಹೆಚ್ಚಳಗೊಂಡು ಸೇವೆಯನ್ನು ವಿಸ್ತರಿಸುವ ಮೂಲಕ ಜನರಿಗೆ ಹತ್ತಿರವಾಗುವ ಕೆಲಸ ಮುಂದುವರೆಸಬೇಕಾಗಿದೆ.

ಪತ್ತಿನ ಸಹಕಾರ ಮಹಾಮಂಡಳದ ನೂತನ ಆಡಳಿತ ಕಚೇರಿ ಉದ್ಘಾಟನಾ ಸಮಾರಂಭದ ಸಂದರ್ಭದಲ್ಲಿ ಈ ಸಂಸ್ಥೆಯ ಬೆಳವಣಿಗೆಗೆ ಕಾರಣಕರ್ತರಾದ ಎಲ್ಲಾ ಸಹಕಾರಿ ಬಂಧುಗಳನ್ನು ಸ್ಮರಿಸುವುದರ ಜೊತೆಗೆ ಪ್ರಸ್ತುತ ಆಡಳಿತ ಮಂಡಳಿಯ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರುಗಳು ಹಾಗೂ ಅಧಿಕಾರಿ ವರ್ಗದವರನ್ನು ಅಭಿನಂದಿಸುತ್ತಾ, ಮಹಾಮಂಡಳವು ತನ್ನ ಕಾರ್ಯೋದ್ದೇಶಗಳನ್ನು ಸಾಕಾರಗೊಳಿಸಲಿ ಎಂದು ಆಶಿಸುತ್ತಾ, ಇದೇ ಸಂದರ್ಭದಲ್ಲಿ ಹೊರತರುತ್ತಿರುವ ಸಹಕಾರ ಮಾಸಿಕ ವಾರ್ತಾ ಪತ್ರಿಕೆ ಗುಣಮಟ್ಟದ ಬರಹಗಳೊಂದಿಗೆ ಉತ್ತಮವಾಗಿ ಮೂಡಿಬರಲಿ ಎಂದು ಶುಭಕೋರುತ್ತೇನೆ.

**ಕೆ. ಗೋಪಾಲಯ್ಯ**
**ಅಬಕಾರಿ ಮತ್ತು ಹಾಸನ ಜಿಲ್ಲಾ ಉಸ್ತುವಾರಿ ಸಚಿವರು,**
**ಕರ್ನಾಟಕ ಸರ್ಕಾರ**

# ಶುಭ ಸಂದೇಶ



ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳವು ಕಳೆದ 19 ವರ್ಷಗಳಿಂದ ಕೃಷಿಯೇತರ ಪತ್ತಿನ ಸಹಕಾರ ಸಂಘಗಳ ಅಭಿವೃದ್ಧಿಗಾಗಿ ಶ್ರಮಿಸುತ್ತಿದ್ದು, ಇದರ 19ನೇ ವರ್ಷದ ಪಾದಾರ್ಪಣೆಯ ಈ ಸುಸಂದರ್ಭದಲ್ಲಿ ನನ್ನ ಮತಕ್ಷೇತ್ರದ ನಂದಿನಿ ಬಡಾವಣೆಯಲ್ಲಿ ನೂತನವಾಗಿ ಸುಸಜ್ಜಿತ ಆಡಳಿತ ಕಚೇರಿ ಕಟ್ಟಡವನ್ನು ನಿರ್ಮಿಸಿ ಉದ್ಘಾಟನೆಗೊಳ್ಳುತ್ತಿರುವುದಕ್ಕೆ ನನ್ನ ಶುಭಾಷಯಗಳನ್ನು ತಿಳಿಸುತ್ತೇನೆ.

ಈ ಸಂಸ್ಥೆಯಿಂದ ತರಬೇತಿಗೆ ಸಂಬಂಧಿಸಿದಂತೆ ಪದಾಧಿಕಾರಿಗಳಿಗೆ, ನಿರ್ದೇಶಕರುಗಳಿಗೆ, ಸದಸ್ಯರುಗಳಿಗೆ, ಸಿಬ್ಬಂದಿಗಳಿಗೆ, ಸಹಕಾರ ಕಾಯ್ದೆ, ನಿಯಮ, ಠೇವಣಿ ಸಂಗ್ರಹಣೆ, ನಿಧಿಗಳ ನಿರ್ವಹಣೆ, ಎನ್.ಪಿ.ಎ ಸುಸ್ತಿ ಸಾಲ ವಸೂಲಾತಿ, ಲೆಕ್ಕಪತ್ರಗಳ ನಿರ್ವಹಣೆ ಹಾಗೂ ಲೆಕ್ಕಪರಿಶೋಧನೆಗೆ ಸಂಬಂಧಪಟ್ಟ ಸೂಕ್ತ ಸಲಹೆ, ಸೂಚನೆ, ಮಾರ್ಗದರ್ಶನ ನೀಡುವುದಲ್ಲದೇ, ಸಂಘಗಳ ಅಭಿವೃದ್ಧಿಗೆ ಚಿಂತನೆ ನಡೆಸಿ ತರಬೇತಿ ನೀಡುತ್ತಾ ಬಂದಿರುವುದು ಇತರೆ ಸಹಕಾರ ಸಂಸ್ಥೆಗಳಿಗೆ ಮಾದರಿಯಾಗಿದೆ.

ಪತ್ತಿನ ಸಹಕಾರ ಸಂಘಗಳು ಬಂಡವಾಳವನ್ನು ವಿಸ್ತರಿಸುವುದರ ಜೊತೆಗೆ ಸಾಮಾಜಿಕ ಕಳಕಳಿಯನ್ನು ಹೊಂದಿವೆ. ಸಮಾಜದ ಒಳಿತಿಗಾಗಿ ದುಡಿಯುವ ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳವು ಹೊಸ ಭರವಸೆಗಳೊಂದಿಗೆ ಹೊರಹೊಮ್ಮಲೆಂದು ಶುಭ ಕೋರುತ್ತೇನೆ. ಈ ಸಂದರ್ಭದಲ್ಲಿ ಹೊರತರುತ್ತಿರುವ ಸಹಕಾರ ಮಾಸಪತ್ರಿಕೆ ವಿಶೇಷ ಸಂಚಿಕೆಯು ಸಾರ್ವಜನಿಕರಿಗೆ ಮತ್ತು ಗ್ರಾಹಕರಿಗೆ ಅನುಕೂಲವಾಗುವ ರೀತಿಯಲ್ಲಿ ಹಾಗೂ ಆರ್ಥಿಕ ಕ್ಷೇತ್ರದ ಕೈಗನ್ನಡಿಯ ಹೊತ್ತಿಗೆಯಾಗಿ ಮೂಡಿ ಬರಲೆಂದು ಶುಭ ಹಾರೈಸುತ್ತೇನೆ.

**ಡಿ.ವಿ. ಸದಾನಂದಗೌಡ**
**ಬೆಂಗಳೂರು ಉತ್ತರ ಲೋಕಸಭಾ ಸದಸ್ಯರು**
**ಮಾಜಿ ಮುಖ್ಯಮಂತ್ರಿಗಳು, ಕರ್ನಾಟಕ ಹಾಗೂ**
**ಮಾಜಿ ಕೇಂದ್ರ ಸಚಿವರು**

# ಶುಭ ಸಂದೇಶ



ಭಾರತದ ಸಹಕಾರ ಚಳವಳಿ ಗಾತ್ರದಲ್ಲಿ, ಸಂಖ್ಯೆಯಲ್ಲಿ ವಿಶ್ವದಲ್ಲೆ ಬೃಹತ್ತಾದುದು, ಮಹತ್ತಾದುದೂ ಆಗಿದೆ. ಸಮಾಜದ ಎಲ್ಲ ವರ್ಗದ ಜನರಿಗೂ ಅನಿವಾರ್ಯ ವ್ಯವಸ್ಥೆ ಎನಿಸಿದೆ. ರಾಷ್ಟ್ರದಲ್ಲಿ ಬಡತನ ನಿವಾರಣೆ, ಉದ್ಯೋಗಸೃಷ್ಠಿ, ಶೋಷಣೆ ನಿರ್ಮೂಲನೆ, ಸಮ ಸಮಾಜ ನಿರ್ಮಾಣದಲ್ಲಿ ವೈಶಿಷ್ಟ್ಯಪೂರ್ಣ ಪಾತ್ರವನ್ನು ವಹಿಸುತ್ತಿದೆ.

ಸಹಕಾರ ವ್ಯವಸ್ಥೆಯಲ್ಲಿ ತೃಪ್ತಿಕರ ಸಾಧನೆ ಗಳಿಸಿರುವ ರಾಜ್ಯಗಳಲ್ಲಿ ಕರ್ನಾಟಕ ಪ್ರಮುಖ ಸ್ಥಾನದಲ್ಲಿದೆ.

ಕರ್ನಾಟಕದಲ್ಲಿ ಪತ್ತಿನ ಸಹಕಾರ ಸಂಘಗಳು ಸಮಾಜದ ಅಬಲ, ಮಧ್ಯಮ ವರ್ಗದ ಕುಟುಂಬಗಳ ಆರ್ಥಿಕ ಚೇತರಿಕೆಗೆ ದೊಡ್ಡ ಕೊಡುಗೆ ನೀಡುತ್ತಾ ಬಂದಿವೆ. ಪತ್ತಿನ ಸಹಕಾರ ಸಂಘಗಳ ಯಶಸ್ವೀ ಕಾರ್ಯಕ್ಕೆ ಕರ್ನಾಟಕ ರಾಜ್ಯ ಪತ್ತಿನ ಸಹಕಾರ ಸಂಘಗಳ ಮಹಾಮಂಡಳ ಪರಿಣಾಮಕಾರಿ ಮಾರ್ಗದರ್ಶನ ಮಾಡುತ್ತಿದೆ.

ಪತ್ತಿನ ಸಹಕಾರ ಸಂಘಗಳ ಆಡಳಿತ ಮಂಡಳಿ ಸದಸ್ಯರಿಗೆ, ಸಿಬ್ಬಂದಿಗೆ, ಅಗತ್ಯ ಶಿಕ್ಷಣ, ತರಬೇತಿ ನೀಡುವ ಮೂಲಕ ಆ ಸಂಘಗಳು ಯಶಸ್ವಿಯಾಗಿ ಕೆಲಸ ಮಾಡಲು ಪತ್ತಿನ ಸಹಕಾರ ಮಹಾಮಂಡಳ ಹೊಸ ಹೊಸ ಯೋಜನೆಗಳನ್ನು ರೂಪಿಸಿ ಕಾರ್ಯಗತ ಮಾಡುತ್ತಿದೆ.

ಇದೀಗ ಪತ್ತಿನ ಸಹಕಾರ ಸಂಘಗಳ ಮಹಾಮಂಡಳ ತನ್ನದೇ ಆದ ನೂತನ ಸುಂದರ ಕಟ್ಟಡವನ್ನು ನಿರ್ಮಿಸಿ ದಕ್ಷ ಸುಗಮ ಆಡಳಿತಕ್ಕೆ ಸಜ್ಜಾಗಿದೆ. ಮಹಾಮಂಡಳಕ್ಕೆ, ಆಡಳಿತ ಮಂಡಳಿ ಸದಸ್ಯರಿಗೆ, ಸದಸ್ಯರಿಗೆ ಮತ್ತು ಸಿಬ್ಬಂದಿ ವರ್ಗಕ್ಕೆ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ನೂತನ ಕಟ್ಟಡ ಉದ್ಘಾಟನೆ ಸಂದರ್ಭದಲ್ಲಿ ಸ್ಮರಣ ಸಂಚಿಕೆಯನ್ನು ಪ್ರಕಟಿಸುತ್ತಿರುವುದು ಶ್ಲಾಘನೀಯವಾದುದು. ಸ್ಮರಣ ಸಂಚಿಕೆಯಲ್ಲಿ ಉತ್ತಮ ಲೇಖನಗಳು, ಮಾಹಿತಿ ಇರುತ್ತವೆಂದು ಭಾವಿಸುತ್ತೇನೆ.

ಈ ಶುಭ ಸಂದರ್ಭದಲ್ಲಿ ಪತ್ತಿನ ಸಹಕಾರ ಸಂಘಗಳ ಮಹಾಮಂಡಳಕ್ಕೆ ಶುಭವನ್ನು ಕೋರುತ್ತೇನೆ.

**ಜಿ.ಟಿ. ದೇವೇಗೌಡ**
**ಶಾಸಕರು ಹಾಗೂ ಅಧ್ಯಕ್ಷರು,**
**ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಬೆಂಗಳೂರು.**

# ಶುಭ ಸಂದೇಶ



ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು ಸಂಸ್ಥೆಯು ಕಳೆದ 2 ದಶಕಗಳ ಅವಧಿಯಲ್ಲಿ ಸಾಧಿಸಿರುವ ಬೆಳವಣಿಗೆ ಶ್ಲಾಘನೀಯವಾದುದು. ಸ್ವಂತ, ಸುಸಜ್ಜಿತ ಆಡಳಿತ ಕಚೇರಿ ಕಟ್ಟಡ ನಿರ್ಮಾಣ ಮಾಡಿರುವುದು ಸಂತಸದ ವಿಚಾರವಾಗಿದೆ.

ಕರ್ನಾಟಕ ರಾಜ್ಯದ ಸಹಕಾರ ಚಳುವಳಿಯಲ್ಲಿ ಪತ್ತಿನ ಸಹಕಾರ ಸಂಘಗಳು ಸದಸ್ಯರ ಆರ್ಥಿಕ ಸ್ವಾವಲಂಬನೆಗೆ ನೆರವಾಗುತ್ತಿದ್ದು, ಈ ಪತ್ತಿನ ಸಂಸ್ಥೆಗಳ ಮಾರ್ಗದರ್ಶಕ ಸಂಸ್ಥೆಯಾಗಿರುವ "ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳವು ಮುಂಬರುವ ದಿನಗಳಲ್ಲಿ ಚಳವಳಿಗೆ ಕೋಡು ಮೂಡಿಸುವ ಕೆಲಸ ಮಾಡಲಿ ಎಂದು ಆಶಿಸುತ್ತಾ ಈ ಸಂದರ್ಭದಲ್ಲಿ ಹೊರತರಲಾಗುತ್ತಿರುವ ಸಹಕಾರ ವಾರ್ತಾ ಮಾಸಿಕ ಪತ್ರಿಕೆ ಗುಣಮಟ್ಟದ ಲೇಖನಗಳಿಂದ ಕೂಡಿರಲಿ, ನೂತನ ಕಟ್ಟಡ ಉದ್ಘಾಟನಾ ಸಮಾರಂಭವು ಯಶಸ್ವಿಯಾಗಲಿ ಎಂದು ಶುಭ ಕೋರುತ್ತೇನೆ.

**ಕ್ಯಾಪ್ಟನ್ ಡಾ. ಕೆ.ರಾಜೇಂದ್ರ, ಭಾಆಸೇ**

**ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ ರಾಜ್ಯ**

# ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ನೂತನ ಕಟ್ಟಡ ಉದ್ಘಾಟನಾ ಸಮಾರಂಭ

## ಸಹಕಾರ ಸಂಸ್ಥೆಗಳ ಬೆಳವಣಿಗೆಗೆ ಬದ್ಧತೆ ಅಗತ್ಯ : ಜಿ.ಟಿ. ದೇವೇಗೌಡ



**ಬೆಂಗಳೂರು** : ಸಹಕಾರ ಸಂಸ್ಥೆಗಳು ಸೇವಾ ಸಂಸ್ಥೆಗಳಾಗಿದ್ದು, ಈ ಸಂಸ್ಥೆಗಳ ಬೆಳವಣಿಗೆಗೆ ಸಹಕಾರಿಗಳಲ್ಲಿ ಬದ್ಧತೆ ಹಾಗೂ ಸೇವಾ ಮನೋಭಾವನೆ ಇರಬೇಕು. ಸಹಕಾರ ತತ್ವಗಳ ಬದ್ಧತೆಯುಳ್ಳ ಪಾಲನೆಯಿಂದ ಸಹಕಾರ ಸಂಸ್ಥೆಗಳು ಉನ್ನತ ಮಟ್ಟಕ್ಕೆ ಬೆಳೆಯಲು ಸಾಧ್ಯವಿದೆ ಎಂದು ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಅಧ್ಯಕ್ಷರು ಹಾಗೂ ಶಾಸಕರಾದ ಜಿ.ಟಿ. ದೇವೇಗೌಡ ಅವರು ಅಭಿಪ್ರಾಯಪಟ್ಟರು.

ಅವರು, ಮಾರ್ಚ್ 24 ರಂದು ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳವು ಬೆಂಗಳೂರಿನಲ್ಲಿ ನಿರ್ಮಾಣ ಮಾಡಿರುವ ನೂತನ ಕಟ್ಟಡದ ಉದ್ಘಾಟನೆಯನ್ನು ನೆರವೇರಿಸಿ ಮಾತನಾಡಿದರು. ಮುಂದುವರೆದು ಮಾತನಾಡಿದ ಅವರು ಕರ್ನಾಟಕದ ಸಹಕಾರ ಚಳವಳಿಯಲ್ಲಿ ಶಿದ್ದನಗೌಡ ಸಂಣರಾಮನಗೌಡ ಪಾಟೀಲರು ಹಾಗೂ ಬಿ.ಎಲ್. ಲಕ್ಕೇಗೌಡರ ಹೆಸರು ಅಜರಾಮರ. ಇವರು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಸಹಕಾರ ಸಂಸ್ಥೆಗಳು ಉನ್ನತ ಮಟ್ಟಕ್ಕೆ ಬೆಳೆಯಲು ಸಾಧ್ಯವಾಗಿದೆ. ಲಕ್ಕೇಗೌಡರ ಪರಿಶ್ರಮದಿಂದ ಪತ್ತಿನ ಸಹಕಾರ ಸಂಘಗಳ ಮಹಾಮಂಡಳ ಇಂದು ತನ್ನದೇ ಆದ ಸ್ವಂತ ಕಟ್ಟಡವನ್ನು ನಿರ್ಮಾಣ ಮಾಡಿ ಪತ್ತಿನ ಸಹಕಾರ ಸಂಘಗಳ ಬಲವರ್ಧನೆಗೆ ಶ್ರಮಿಸುತ್ತಿದೆ ಎಂದರು.

ಭಾರತದೇಶಕ್ಕೆ ಸಹಕಾರ ಕ್ಷೇತ್ರವೇ ಹೆಬ್ಬಾಗಿಲು, ಸಹಕಾರಕ್ಷೇತ್ರದ ಬಲವರ್ಧನೆಯಿಂದಾಗಿ ದೇಶ ಆರ್ಥಿಕವಾಗಿ ಸದೃಢವಾಗುತ್ತದೆ ಎಂದು ಗಾಂಧೀಜಿ ಅಭಿಪ್ರಾಯಪಟ್ಟಿದ್ದರು. ಹಾಗೆಯೇ ಸಹಕಾರ ಸಂಘ ಗ್ರಾಮ ಪಂಚಾಯಿತಿ ಹಾಗೂ ಶಾಲೆ ಇದ್ದಾಗ ಈ ಸಮಾಜ ರಾಮರಾಜ್ಯವಾಗುತ್ತದೆ ಎಂದು ನೆಹರೂ ಅವರ ಆಶಯವಾಗಿತ್ತು. ಹಾಗೆಯೇ ಇಂದು ಅನೇಕ ರಾಜಕೀಯ ನಾಯಕರುಗಳು ಸಹಕಾರಕ್ಷೇತ್ರದ ಮೂಲಕ ಬಂದಿದ್ದು, ಸಹಕಾರ ಕ್ಷೇತ್ರಕ್ಕೆ ನಾಯಕತ್ವವನ್ನು ಬೆಳೆಸುವ ಗುಣವಿದೆ ಎಂಬುದು ಸಾಬೀತಾಗಿದೆ. ಆದ್ದರಿಂದ ಸಹಕಾರ ಸಂಸ್ಥೆಗಳಲ್ಲಿ ಕೆಲಸ ಮಾಡುವ ಪ್ರತಿಯೊಬ್ಬ ಸಹಕಾರಿಯು ಸಹಕಾರ ಕ್ಷೇತ್ರವನ್ನು ಬಿಂಬಿಸಬೇಕು.ಈ ಮೂಲಕ ಚಳುವಳಿಯ ಬೆಳವಣಿಗೆಗೆ ಸಹಕಾರ ನೀಡಬೇಕು ಎಂದು ಅವರು ತಿಳಿಸಿದರು.

ಇನ್ನು ಪತ್ತಿನ ಸಹಕಾರ ಮಹಾಮಂಡಳದ ಆಡಳಿತ ಮಂಡಳಿಯವರು ತಮ್ಮ ಪರಿಶ್ರಮದ ಮೂಲಕ ಸುಸಜ್ಜಿತವಾದ ಕಟ್ಟಡವನ್ನು ನಿರ್ಮಾಣ ಮಾಡಿರುವುದು ಪತ್ತಿನ ಸಹಕಾರ ಸಂಘಗಳ ಬೆಳವಣಿಗೆಗೆ ಪೂರಕವಾಗಿದೆ ಎಂದು ಶ್ಲಾಘಿಸಿದ ಅವರು ಮುಂದಿನ ದಿನಗಳಲ್ಲಿ ಮಹಾಮಂಡಳ ಪತ್ತಿನ ಸಹಕಾರ ಚಳವಳಿಯ ಎಲ್ಲಾ ಸಮಸ್ಯೆಗಳನ್ನು ನಿವಾರಿಸಿಕೊಂಡು ಉತ್ತಮವಾದ ಸೇವೆಯನ್ನು ನೀಡಲಿ ಎಂದು ಆಶಿಸಿದರು.

ಸಮಾರಂಭದ ಉದ್ಘಾಟನೆ ಮತ್ತು ಬಿ.ಎಲ್. ಲಕ್ಕೇಗೌಡರ ಪುತ್ಥಳಿ ಲೋಕಾರ್ಪಣೆಯನ್ನು ಸಹಕಾರ ಸಚಿವರಾದ ಎಸ್.ಟಿ. ಸೋಮಶೇಖರ್‌ರವರು ನೆರವೇರಿಸಿದರು. ಅಧ್ಯಕ್ಷರ ಕೊಠಡಿ ಮತ್ತು ಇ–ಸ್ಟಾಂಪಿಂಗ್ ಕೇಂದ್ರದ ಉದ್ಘಾಟನೆಯನ್ನು ಅಬಕಾರಿ ಸಚಿವರಾದ



ಕೆ.ಗೋಪಾಲಯ್ಯ ಅವರು ನೆರವೇರಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಪತ್ತಿನ ಸಹಕಾರ ಸಂಘಗಳ ಮಹಾಮಂಡಳದ ಅಧ್ಯಕ್ಷರಾದ ಕೆ. ಲಲಿತ ಜಿ.ಟಿ. ದೇವೇಗೌಡ ಅವರು ಮಾತನಾಡಿ, ಪತ್ತಿನ ಸಹಕಾರ ಮಹಾಮಂಡಳ ಇಂದು ಉತ್ತಮವಾದ ಕಟ್ಟಡವನ್ನು ನಿರ್ಮಾಣ ಮಾಡಲು ಸಹಕರಿಸಿದ ಆಡಳಿತ ಮಂಡಳಿ ಸದಸ್ಯರು ಹಾಗೂ ಕಟ್ಟಡ ನಿರ್ಮಾಣಕ್ಕೆ ದೇಣಿಗೆಯನ್ನು ನೀಡಿದ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಆಡಳಿತ ಮಂಡಳಿ ಸದಸ್ಯರುಗಳಿಗೆ ಜೊತೆಗೆ ದೇಣಿಗೆ, ಪ್ರೋತ್ಸಾಹ ಹಾಗೂ ಪ್ರೇರಣೆಯನ್ನು ನೀಡಿದ ಪ್ರತಿಯೊಂದು ಪತ್ತಿನ ಸಹಕಾರ ಸಂಘಗಳ ಆಡಳಿತ ಮಂಡಳಿಯವರಿಗೆ ಕೃತಜ್ಞತೆಗಳನ್ನು ಸಲ್ಲಿಸಿದರು.

ಪತ್ತಿನ ಸಹಕಾರ ಸಂಘಗಳ ಮಹಾಮಂಡಳದ ನಿರ್ದೇಶಕರಾದ ರವೀಂದ್ರ ಪ್ರಲ್ಹಾದ ಕಲಬುರಗಿ ಇವರು ಮಾತನಾಡಿ ಪತ್ತಿನ ಸಹಕಾರ ಸಂಘಗಳ ಬೆಳವಣಿಗೆಗೆ ಅಗತ್ಯವಾದ ಶಿಕ್ಷಣ ಹಾಗೂ ತರಬೇತಿಯನ್ನು ನೀಡುವುದು ಈ ನಮ್ಮ ಸಂಸ್ಥೆಯ ಪ್ರಮುಖ ಧ್ಯೇಯೋದ್ದೇಶವಾಗಿದ್ದು, ಈ ಒಂದು ಕಟ್ಟಡ ನಿರ್ಮಾಣದಲ್ಲಿ ಶ್ರಮವಹಿಸಿದಂತಹ ಪತ್ತಿನ ಮಹಾಮಂಡಳದ ಅಧ್ಯಕ್ಷರಾದ ಲಲಿತ ಜಿ.ಟಿ. ದೇವೇಗೌಡ ಹಾಗೂ ಉಪಾಧ್ಯಕ್ಷರಾದ ಕೆ.ಕೆ. ಮಹೇಂದ್ರಪ್ರಸಾದ್‌ಗೌಡ ಇವರ ಪರಿಶ್ರಮದಿಂದ ನಾವಿಂದು ಸುಸಜ್ಜಿತವಾದ ಕಟ್ಟಡವನ್ನು ನಿಮಾಣ ಮಾಡಲು ಸಾಧ್ಯವಾಗಿದೆ. ಇದರ ಜೊತೆಗೆ ಆಡಳಿತ ಮಂಡಳಿ ಸದಸ್ಯರು ಸಹಕಾರ, ಪ್ರೋತ್ಸಾಹವನ್ನು ನೀಡಿದ್ದು, ಮುಂದಿನ ದಿನಗಳಲ್ಲಿ ಪತ್ತಿನ ಸಹಕಾರ ಸಂಘಕ್ಕೆ ಅಗತ್ಯವಿರುವ ಕಾನೂನು ನಿಯಮಗಳನ್ನು ರೂಪಿಸಿಕೊಳ್ಳಲು ಎಲ್ಲಾ ಸಹಕಾರಿಗಳ ಸಹಕಾರವನ್ನು ಕೋರುತ್ತೇವೆ ಎಂದರು. ಇಂದು ಕಟ್ಟಡ ನಿರ್ಮಾಣ ಮಾಡಲು ನೆರವಾದ ಎಲ್ಲಾ ಸಹಕಾರಿ ಬಂಧುಗಳಿಗೂ ಸಹ ಮಹಾಮಂಡಳದ ಪರವಾಗಿ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸಿದರು.

ಕಾರ್ಯಕ್ರಮದಲ್ಲಿ ಪತ್ತಿನ ಸಹಕಾರ ಸಂಘಗಳ ಉಪಾಧ್ಯಕ್ಷರಾದ ಕೆ.ಕೆ.ಮಹೇಂದ್ರಪ್ರಸಾದ್‌ಗೌಡ ಅವರು ಮಾತನಾಡಿ ನಾನೊಬ್ಬನೇ ಸಂತೃಪ್ತನಾದರೆ ಸಾಲದು, ತನ್ನ ಸುತ್ತಮುತ್ತಲಿನ ಸಮಾಜ ಹಾಗೂ ಜನರು ಸಹ ಸಂತೃಪ್ತರಾಗಬೇಕೆಂಬ ಆಶಯವನ್ನು ಹೊಂದಿದ್ದಾಗ ಮಾತ್ರ ಏನಾದರು ಸಾಧಿಸಲು ಸಾಧ್ಯ. ಈ ಮನೋಭಾವನೆಯಿಂದ ನಮ್ಮ ಮಹಾಮಂಡಳದ ಅಧ್ಯಕ್ಷರು ಹಾಗೂ ಆಡಳಿತ ಮಂಡಳಿ ಸದಸ್ಯರ ಸಹಕಾರ ನಮ್ಮ ಈ ಭವ್ಯ ಕಟ್ಟಡ ನಿರ್ಮಾಣಕ್ಕೆ ದಾರಿದೀಪವಾಯಿತು. ಇದಕ್ಕೆ ಸಹಕರಿಸಿದ ಎಲ್ಲಾ ಸಹಕಾರಿಗಳಿಗೂ ಧನ್ಯವಾದಗಳು ಎಂದರು.

ಕಾರ್ಯಕ್ರಮದಲ್ಲಿ ಪತ್ತಿನ ಸಹಕಾರ ಸಂಘಗಳ ಮಹಾಮಂಡಳದ ನಿರ್ದೇಶಕರಾದ ಕೆ.ಕೃಷ್ಣಮೂರ್ತಿ ಅವರು ಪ್ರಾಸ್ತಾವಿಕವಾಗಿ ಮಾಡಿದರು. ನಿರ್ದೇಶಕರಾದ ಶೇಖರಗೌಡ ಮಾಲಿಪಾಟೀಲರು ಎಲ್ಲರನ್ನು ಸ್ವಾಗತಿಸಿದರು.

ಸಮಾರಂಭದಲ್ಲಿ ಪತ್ತಿನ ಸಹಕಾರ ಸಂಘಗಳ ಮಹಾಮಂಡಳದ ನಿದೇಶಕರುಗಳಾದ ಸಿ.ಎಂ.ಮಾರೇಗೌಡ, ಬಿ.ಡಿ.ಭೂಕಾಂತ ಶ್ರೀ ವಿ.ರಾಜು, ಶ್ರೀ ಸಂಜಯ ಪಿ ಹೊಸಮಠ, ಶ್ರೀ ಎಂ.ಜೆ.ನರೇಂದ್ರಕುಮಾರ, ಶ್ರೀ ಡಿ.ಚನ್ನಯ್ಯ, ಶ್ರೀ ಕೆ.ಕೃಷ್ಣಮೂರ್ತಿ, ಶ್ರೀ ಜಿ.ಮಲ್ಲಿಕಾರ್ಜುನಯ್ಯ, ಶ್ರೀ ತಮ್ಮಣ್ಣ ಬಾಲಪ್ಪ ಕೆಂಚರಡ್ಡಿ, ಶ್ರೀ ಧರೇಪ್ಪ ಎಂ. ಆಲಗೂರ, ಶ್ರೀ ಗುರುಪಾದಪ್ಪಗೌಡ ಬ ಪಾಟೀಲ, ಶ್ರೀ ಹೊನ್ನಯ್ಯ ವೀ ಹಿರೇಮಠ, ಶ್ರೀ ಪಿ.ಕೆ.ಜಯಕೃಷ್ಣೇಗೌಡ, ಶ್ರೀ ಶೇಖರಗೌಡ ಮಾಲಿ ಪಾಟೀಲ ಶ್ರೀ ಹೆಚ್.ಟಿ.ನಾಗೇಶ್, ಶ್ರೀ ಡಿ.ಆರ್.ನಾಗೇಶಪ್ಪ. ಶ್ರೀ ಉಮೇಶ್ ಶಿ ಬಾಳಿ, ಶ್ರೀ ರವೀಂದ್ರ ಪ್ರಲ್ಹಾದ ಕಲಬುರ್ಗಿ ಶ್ರೀ ಚಿತ್ತರಂಜನ್ ಬೋಳಾರ್‌ರವರು ಹಾಗೂ ಸಹಕಾರ ಸಂಘಗಳ ನಿಬಂಧಕರಾದ ಕ್ಯಾಪ್ಟನ್ ಡಾ.ಕೆ.ರಾಜೇಂದ್ರ ಮತ್ತಿತರರು ಉಪಸ್ಥಿತರಿದ್ದು, ಶುಭ ಹಾರೈಸಿದರು.

ಹಾಜರಿದ್ದ ಮಹಾಮಂಡಳದ ಮಾಜಿ ನಿರ್ದೇಶಕರುಗಳಿಗೆ, ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ ಹಾಗೂ ಕಟ್ಟಡ ನಿರ್ಮಾಣಕ್ಕೆ ದೇಣಿಗೆ ನೀಡಿದ ಸದಸ್ಯ ಸಹಕಾರ ಸಂಘಗಳ ಪ್ರತಿನಿಧಿಗಳನ್ನು ಸನ್ಮಾನಿಸಲಾಯಿತು.


**ಪತ್ತಿನ ಸಹಕಾರ ಸಂಸ್ಥೆಗಳ ಪ್ರಗತಿಗೆ ಶಿಕ್ಷಣ-ತರಬೇತಿ-ಪ್ರಚಾರ ಪ್ರೇರಕ-ಪೋಷಕ**

# ರಾಜ್ಯದ ಪತ್ತಿನ ಸಹಕಾರ ಚಳವಳಿ, ಬೆಳವಣಿಗೆಯ ಅವಿರತ ಪ್ರಯತ್ನ ಕುರಿತು ಹಿರಿಯ ಸಹಕಾರಿ ಮುಖಂಡರಾದ ಕೆ. ಲಲಿತಾ ಜಿ.ಟಿ. ದೇವೇಗೌಡ ಅಭಿಮತ

ಸಹಕಾರ ಚಳವಳಿಯ ಬೆಳವಣಿಗೆಯಲ್ಲಿ ಕರ್ನಾಟಕ ವಿಶಿಷ್ಟ ಸ್ಥಾನವನ್ನು ಪಡೆದಿದೆ. ತನ್ನ ಸಾಧನೆಯ ಮೂಲಕ ರಾಷ್ಟ್ರದ ಗಮನವನ್ನು ಸೆಳೆದಿದೆ. ರಾಜ್ಯದಲ್ಲಿ ಪತ್ತಿನ ಸಹಕಾರ ಸಂಘಗಳನ್ನು ಪರಿಣಾಮಕಾರಿಯಾಗಿ ಮುನ್ನಡೆಸಲು ಸಹಕಾರ ರತ್ನ ಪುರಸ್ಕೃತರಾದ ಟಿ.ಎಲ್. ಲಕ್ಕೇಗೌಡ ಅವರ ದೂರದೃಷ್ಟಿ ಚಿಂತನೆಗಳಿಂದ ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳವು ಕಳೆದ 19 ವರ್ಷಗಳ ಹಿಂದೆ ಅಸ್ತಿತ್ವಕ್ಕೆ ಬಂದಿತು. ಪ್ರಸ್ತುತ ಪತ್ತಿನ ಮಹಾಮಂಡಳವನ್ನು ಸಹಕಾರಿ ಮುಖಂಡರಾದ ಕೆ. ಲಲಿತಾ ಜಿ.ಟಿ. ದೇವೇಗೌಡ ಅವರು ಹಿರಿಯ ಸಹಕಾರಿಗಳ ಹಾದಿಯಲ್ಲಿಯೇ ಅವಿರತ ಪ್ರಯತ್ನದಿಂದ ಮುಂದುವರೆದು ಪತ್ತಿನ ಸಹಕಾರ ಮಹಾಮಂಡಳದ ಕಾರ್ಯ ಚಟುವಟಿಕೆಗಳಿಗೆ ಮಾರ್ಗದರ್ಶನ ನೀಡುವ ಮೂಲಕ ಕಾರ್ಯಕ್ರಮಗಳು ಪರಿಣಾಮಕಾರಿಯಾಗುವಂತೆ ಮಾಡುವಲ್ಲಿ ವಿಶೇಷ ಶ್ರಮವನ್ನು ವಹಿಸುತ್ತಾ ಬಂದಿದ್ದಾರೆ. ರಾಜ್ಯದ ಸಹಕಾರ ಚಳವಳಿಗೆ ಮಹತ್ವದ ನಾಯಕತ್ವವನ್ನು ನೀಡಿದ್ದಾರೆ.

ದೇಶದ ಪ್ರಥಮ ಪ್ರಧಾನಿಯಾದ ಜವಾಹರಲಾಲ್ ನೆಹರೂರವರು ಸಹಕಾರ ಚಳವಳಿಯ ಅಭಿವೃದ್ಧಿಗಾಗಿ ವಿಶೇಷ ಒತ್ತು ನೀಡಿದ್ದರು. ಮಹಾತ್ಮ ಗಾಂಧಿ ಅವರು ಆರ್ಥಿಕ ಸ್ವಾತಂತ್ರ್ಯಕ್ಕೆ ಸಹಕಾರವೇ ಹೆಬ್ಬಾಗಿಲು ಎಂದು ಹೇಳಿದ್ದರು. ಹಾಗೆಯೇ, ಇದಕ್ಕೆ ಪೂರಕವಾಗಿ ಸಹಕಾರ ಚಳವಳಿಯಲ್ಲಿ 2 ದಶಕಗಳಿಂದ ಸೇವೆ ಸಲ್ಲಿಸುತ್ತಿರುವ ಕೆ. ಲಲಿತಾ ಜಿ.ಟಿ. ದೇವೇಗೌಡರು ಸಹಕಾರ ಕ್ಷೇತ್ರದ ಮಹಿಳೆಯರ ಆಶಾಕಿರಣರಾಗಿದ್ದಾರೆ. ಇವರ ಸೇವೆಯನ್ನು ಪರಿಗಣಿಸಿ ರಾಜ್ಯ ಸರ್ಕಾರ "ಸಹಕಾರ ರತ್ನ" ಪ್ರಶಸ್ತಿ ನೀಡಿ ಗೌರವಿಸಿರುವುದು ಅವರ ಸೇವೆಗೆ ಸಂದ ಗೌರವವಾಗಿದೆ.

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಕಾರ್ಯಚಟುವಟಿಕೆಗಳಿಗೆ ಪೂರಕವಾಗಿ ಬೆಂಗಳೂರಿನ ನಂದಿನಿ ಬಡಾವಣೆಯಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ 3 ಸಾವಿರ ಅಡಿಗಳ ವಿಸ್ತೀರ್ಣದ ನಿವೇಶನ ಖರೀದಿ ಮಾಡಲಾಗಿತ್ತು. ಶ್ರೀಯುತರು ಅಧ್ಯಕ್ಷರಾದ ನಂತರ ಸುಸಜ್ಜಿತವಾದ 3 ಮಹಡಿಗಳ ಆಡಳಿತ ಕಚೇರಿ ಕಟ್ಟಡವನ್ನು ಆಡಳಿತ ಮಂಡಳಿಯ ಸಹಕಾರದೊಂದಿಗೆ ನಿರ್ಮಾಣ ಮಾಡಿರುವುದರ ಹಿಂದೆ ಅವರ ಅವಿರತ ಶ್ರಮ ಅಡಗಿದೆ. ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ಸೇರಿದಂತೆ ವಿವಿಧ ಸಂಘ ಸಂಸ್ಥೆಗಳಿಂದ ಕಟ್ಟಡ ನಿರ್ಮಾಣಕ್ಕೆ ದೇಣಿಗೆ ಸಂಗ್ರಹಿಸುವಲ್ಲಿಯೂ ಇವರ ಪಾತ್ರ ಶ್ಲಾಘನೀಯವಾದುದಾಗಿದೆ.



ಇದಕ್ಕೂ ಮೊದಲು 2008ರಲ್ಲಿ ಹುಣಸೂರಿನಲ್ಲಿ ಲಕ್ಷ್ಮಿ ವಿವಿದೋದ್ದೇಶ ಮಹಿಳಾ ಸಹಕಾರ ಸಂಘದ ಸಂಸ್ಥಾಪಕ ಅಧ್ಯಕ್ಷರಾಗಿ ಸಹಕಾರ ಕ್ಷೇತ್ರವನ್ನು ಪ್ರವೇಶಿಸುತ್ತಾರೆ. ಸಹಕಾರ ಕ್ಷೇತ್ರದ ಬಗ್ಗೆ ಅಪಾರ ಜ್ಞಾನವುಳ್ಳವರಾಗಿ, ನಿರರ್ಗಳ ಮಾತುಗಾರರಾಗಿ, ಪ್ರೀತಿ, ವಿಶ್ವಾಸ, ಗೌರವಗಳ ಸಂಕೇತವಾಗಿ, ಅಬಲರ, ಸಹಕಾರಿಗಳ ಗೌರವಕ್ಕೆ ಪಾತ್ರರಾಗಿದ್ದಾರೆ.

2023ರ ಮಾರ್ಚ್ 24 ರಂದು ಪತ್ತಿನ ಸಹಕಾರ ಮಹಾಮಂಡಳವು ನಿರ್ಮಾಣ ಮಾಡಿರುವ ಸುಸಜ್ಜಿತ ಆಡಳಿತ ಕಚೇರಿ ಕಟ್ಟಡ ಸಚಿವರು, ಸಹಕಾರಿ ಮುಖಂಡರ ಸಮ್ಮುಖದಲ್ಲಿ ಉದ್ಘಾಟನೆಗೊಳ್ಳಲಿದ್ದು, ಈ ಸಂದರ್ಭದಲ್ಲಿ ಲಲಿತಾ ಜಿ.ಟಿ. ದೇವೇಗೌಡ ಅವರು "ಸಹಕಾರ" ಮಾಸಿಕ ವಾರ್ತಾ ಪತ್ರಿಕೆಗೆ ನೀಡಿದ ಸಂದರ್ಶನದ ವಿಸ್ತೃತ ಭಾಗ.




- **ಸಹಕಾರಿ ಮುಖಂಡರಾಗಿ, ಪತ್ತಿನ ಸಹಕಾರ ಮಹಾಮಂಡಳದ ಅಧ್ಯಕ್ಷರಾಗಿ ಚಳವಳಿಯ ಸಮಗ್ರ ಬಲವರ್ಧನೆ ಬಗ್ಗೆ...**

ಸಹಕಾರ ವ್ಯವಸ್ಥೆಯಲ್ಲಿ ರಾಷ್ಟ್ರದಲ್ಲೇ ಕರ್ನಾಟಕ ಅಗ್ರಗಣ್ಯ ಸ್ಥಾನದಲ್ಲಿದೆ ಎಂಬುದಕ್ಕೆ ಸಂತಸವಾಗುತ್ತದೆ. ಕೃಷಿ ಸಾಲ, ಪತ್ತು, ಪಟ್ಟಣ ಸಹಕಾರ ಬ್ಯಾಂಕಿಂಗ್, ಹೈನೋದ್ಯಮದಲ್ಲಿ ಉತ್ತಮ ಸಾಧನೆ ಮಾಡುತ್ತಾ ಬಂದಿದೆ. ರಾಜ್ಯದಲ್ಲಿ 46 ಸಾವಿರಕ್ಕೂ ಹೆಚ್ಚು ಸಹಕಾರ ಸಂಘಗಳು, 2.30 ಕೋಟಿಗೂ ಹೆಚ್ಚು ಸದಸ್ಯರಿಂದ ಕೂಡಿರುವ ನಮ್ಮ ರಾಜ್ಯದ ಸಹಕಾರಿ ವ್ಯವಸ್ಥೆಯನ್ನು ಹೊಂದುವುದರ ಮೂಲಕ ಸದೃಢ ಚಳವಳಿಯಾಗಿ ಮುನ್ನಡೆಯುತ್ತಿದೆ.

1991ರಲ್ಲಿ ಜಾರಿಗೆ ಬಂದ ಆರ್ಥಿಕ, ಜಾಗತೀಕರಣ, ಉದಾರೀಕರಣ ನೀತಿಯಿಂದಾಗಿ ಸಹಕಾರ ಕ್ಷೇತ್ರದ ಗ್ರಾಹಕ, ಮಾರಾಟ, ಬ್ಯಾಂಕಿಂಗ್ ವಲಯಗಳು ಸ್ಪರ್ಧೆಯನ್ನು ಎದುರಿಸಬೇಕಾದ ಪರಿಸ್ಥಿತಿ ಉಂಟಾಯಿತು. ಆದರೂ ಸಹಕಾರ ಸಂಸ್ಥೆಗಳು ದಿಟ್ಟತನದಿಂದ ಸದೃಢವಾಗಿ ಬೆಳೆದು ಬಂದವು ಎಂಬುದು ಸಮಾಧಾನಕರ ಸಂಗತಿ. ಕಳೆದ 3 ವರ್ಷಗಳಲ್ಲಿ ಕೊರೋನಾ ಮಹಾಮಾರಿಯಿಂದ ಇಡೀ ವಿಶ್ವವೇ ತಲ್ಲಣಗೊಂಡಿತ್ತು. ಅಂತಹ ಪರಿಸ್ಥಿತಿಯಲ್ಲಿಯೂ ಸಹಕಾರ ಸಂಸ್ಥೆಗಳು ಸದೃಢವಾಗಿ ಸದಸ್ಯ ಸೇವೆಗಳಲ್ಲಿ ಪರಿಣಾಮಕಾರಿಯಾಗಿ ತೊಡಗಿಸಿಕೊಂಡು ಮುನ್ನಡೆಯುತ್ತಿರುವುದು ಸಂತಸ ತಂದಿದೆ.

ಚಳವಳಿಯ ಸಮಗ್ರ ಬೆಳವಣಿಗೆಗೆ ಅಗತ್ಯವಾದುದೇನು ಎಂಬ ಬಗ್ಗೆ ಚಿಂತಿಸಲು ಹಿರಿಯ ಸಹಕಾರಿಗಳ ಸಭೆ ಕರೆದು ಅವರ ಸಲಹೆಗಳನ್ನು ಪಡೆದುಕೊಳ್ಳಬೇಕು. ಸಹಕಾರ ಕಾನೂನಿನಲ್ಲಿ ಉಪಯುಕ್ತ ತಿದ್ದುಪಡಿಗಳಾದ ಹಾಗೂ ತಿದ್ದುಪಡಿಗಳಾಗಬೇಕಾದ ವಿಷಯಗಳ ಬಗ್ಗೆ ಚಿಂತನ–ಮಂಥನ ನಡೆಸಬೇಕು. ರಾಜ್ಯದ ಪ್ರತಿಯೊಬ್ಬರಿಗೂ ಸಹಕಾರ ವ್ಯವಸ್ಥೆಯ ಪ್ರಯೋಜನಗಳು ತಲುಪುವಂತಿರಬೇಕು. ಆರ್ಥಿಕವಾಗಿ ಅಬಲರಾದವರ, ರೈತರ ಸಮಸ್ಯೆಗಳಿಗೆ ಆದ್ಯತೆ ನೀಡಬೇಕು ಎಂಬುದು ನಮ್ಮ ಆಶಯವಾಗಿದೆ. ಈ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಮಹಾಮಂಡಳವು ಸದಸ್ಯ ಪತ್ತಿನ ಸಂಘಗಳ ಬೆಳವಣಿಗೆಗೆ ಪರಿಣಾಮಕಾರಿ ಸಹಕಾರ ಶಿಕ್ಷಣ, ತರಬೇತಿ ಮತ್ತು ಪ್ರಚಾರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾ ಬಂದಿದ್ದು, ಈ ಕಾರ್ಯಕ್ರಮಗಳನ್ನು ಮತ್ತಷ್ಟು ಪರಿಣಾಮಕಾರಿಗೊಳಿಸಲು ಪತ್ತಿನ ಮಹಾಮಂಡಳವು ನೂತನ ಯೋಜನೆಗಳನ್ನು ರೂಪಿಸುತ್ತಿದೆ.

ಸಹಕಾರ ಚಳವಳಿ ಜನರ ಚಳುವಳಿಯಾಗಿದ್ದು, ಸಮಾಜದ ಸರ್ವತೋಮುಖ ಅಭಿವೃದ್ಧಿ ಸಹಕಾರ ಕ್ಷೇತ್ರದಿಂದ ಮಾತ್ರವೇ ಸಾಧ್ಯ. ಈ ದಿಸೆಯಲ್ಲಿ ಸಹಕಾರ ಕ್ಷೇತ್ರ ಸ್ವಾಯತ್ತತೆಯಿಂದ ಕಾರ್ಯ ನಿರ್ವಹಿಸಲು ಸಹಕಾರಿಗಳು, ಜನಪ್ರತಿನಿಧಿಗಳು, ಅಧಿಕಾರಿಗಳು ಬದ್ಧತೆಯಿಂದ ಕೆಲಸ ಮಾಡಬೇಕಾದ ಅಗತ್ಯವಿದೆ ಹಾಗೂ ಸಹಕಾರಾಭಿವೃದ್ಧಿಗೆ ಸರ್ಕಾರದ ನೆರವು ಅಗತ್ಯ. ಆದರೆ, ಚಳವಳಿಯಲ್ಲಿ ಸರ್ಕಾರ ಅಥವಾ ಯಾವುದೇ ಹೊರಗಿನ ಹಸ್ತಕ್ಷೇಪ ಇರಬಾರದೆಂದು ಭಾವಿಸುತ್ತೇನೆ.

- **ಕೇಂದ್ರ ಸರ್ಕಾರದಲ್ಲಿ ನೂತನವಾಗಿ ರಚನೆಯಾಗಿರುವ ಸಹಕಾರ ಸಚಿವಾಲಯ ಕುರಿತು...**

ದೇಶದ ಸಹಕಾರಿ ವ್ಯವಸ್ಥೆಯನ್ನು ಮತ್ತಷ್ಟು ಸದೃಢಗೊಳಿಸುವುದು, ಚಳವಳಿಯನ್ನು ಬಲಪಡಿಸಲು ಉತ್ತೇಜನ ನೀಡಿ ಸ್ಪರ್ಧಾತ್ಮಕವಾದ ಪರಿಸರ ಸೃಷ್ಟಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರವು ನೂತನವಾಗಿ ಸಹಕಾರ ಸಚಿವಾಲಯವನ್ನು ಆರಂಭಿಸಿದೆ. ಸಹಕಾರಿ ಮುಖಂಡರೂ ಆಗಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಸಹಕಾರ ಸಚಿವರಾಗಿ ಮಾರ್ಗದರ್ಶನ ಮಾಡುತ್ತಿದ್ದಾರೆ. ಇದೊಂದು ಸ್ವಾಗರ್ತಹವಾದ ಬೆಳವಣಿಗೆ. ಹಾಗೆಯೇ, ಶೀಘ್ರದಲ್ಲಿಯೇ ಹೊಸ ರಾಷ್ಟ್ರೀಯ ಸಹಕಾರ ನೀತಿಯನ್ನು ಪ್ರಕಟಿಸುವುದಾಗಿ ಕೇಂದ್ರ ಸಹಕಾರ ಸಚಿವರಾದ ಅಮಿತ್ ಶಾ ಅವರು ಹೇಳಿದ್ದಾರೆ. ಇದನ್ನು ಒಬ್ಬ ಸಹಕಾರಿಯಾಗಿ ಸಂತೋಷದಿಂದ ಸ್ವಾಗತಿಸುತ್ತೇನೆ. ಈ ಎಲ್ಲಾ ಅಂಶಗಳು ಸಹ ಮುಂದಿನ ದಿನಗಳಲ್ಲಿ ಸಹಕಾರಿ ವಲಯದ ಸಮಗ್ರ ಬೆಳವಣಿಗೆಗೆ ಪೋಷಕವಾಗಬಹುದೆಂಬ ಆಶಯವನ್ನು ಇರಿಸಿಕೊಂಡಿದ್ದೇನೆ.

- **ಸಹಕಾರಾಭಿವೃದ್ಧಿಗೆ ಅಗತ್ಯವಾದ ಸಹಕಾರಿ ಶಿಕ್ಷಣ–ತರಬೇತಿ–ಪ್ರಚಾರದ ಬಗ್ಗೆ ತಮ್ಮ ಸಲಹೆಗಳು...**

ಸಹಕಾರ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಸಹಕಾರ ಶಿಕ್ಷಣ–ತರಬೇತಿ ಅತ್ಯಂತ ಅವಶ್ಯವೆಂದು ಭಾವಿಸಿ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳವನ್ನು ಸ್ಥಾಪಿಸಿದ್ದು, ಮಹಾಮಂಡಳವು ತನ್ನ ಧ್ಯೇಯೋದ್ದೇಶಗಳನ್ನು ನಿರಂತರವಾಗಿ, ಪರಿಣಾಮಕಾರಿಯಾಗಿ ಈಡೇರಿಸುತ್ತಾ ಬಂದಿದೆ. ಹಾಗೆಯೇ ಕರ್ನಾಟಕದಲ್ಲಿ ಪತ್ತಿನ ಸಹಕಾರ

ಸಂಘಗಳನ್ನು ಬಲಪಡಿಸಲು ಅಗತ್ಯ ಮಾರ್ಗದರ್ಶಕ ಸಂಸ್ಥೆಯಾಗಿ ಕಳೆದ 19 ವರ್ಷಗಳ ಹಿಂದೆ ಸಮಾನ ಮನಸ್ಕ ಸಹಕಾರಿಗಳ ಒಮ್ಮತದಿಂದ ಹಿರಿಯ ಸಹಕಾರಿ ಬಿ.ಎಲ್. ಲಕ್ಕೇಗೌಡ ಅವರ ನೇತೃತ್ವದಲ್ಲಿ ಸಮಾನ ಮನಸ್ಕ ಸಹಕಾರಿಗಳಿಂದ ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳವು ಕಾರ್ಯಾರಂಭಿಸಿ, ನಿರಂತರವಾಗಿ ಬದ್ಧತೆಯುಳ್ಳ ಸೇವೆಯನ್ನು ನೀಡುತ್ತ ಬಂದಿದೆ. ಪತ್ತಿನ ಮಹಾಮಂಡಳದ ಸದಸ್ಯ ಸಂಸ್ಥೆಗಳು ಪತ್ತೇತರ ಆದಾಯವನ್ನು ಗಳಿಸುವ ಉದ್ದೇಶದಿಂದ ಇ–ಸ್ಟಾಂಪಿಂಗ್‌ನ ರಾಜ್ಯ ನೋಡಲ್ ಏಜೆನ್ಸಿಯಾಗಿ ಮಹಾಮಂಡಳವು ಕಾರ್ಯನಿರ್ವಹಿಸುವ ಮೂಲಕ ಸಂಘಗಳ ಅಧಿಕ ಆದಾಯ ವೃದ್ಧಿಗೆ ನೆರವಾಗುತ್ತಿದೆ. ಸಹಕಾರಿ ಚಳವಳಿ ಜನರ ಚಳವಳಿಯಾಗಿದ್ದು, ಈ ವ್ಯವಸ್ಥೆಯಲ್ಲಿನ ವ್ಯವಹಾರ, ಸಾಧನೆ ಬಗ್ಗೆ ಸಾರ್ವಜನಿಕರಿಗೆ ಮಾಹಿತಿ ಮುಟ್ಟಿಸಲು ಸಹಕಾರ ತತ್ವ ಆಚರಣೆ ಬಗ್ಗೆ ಜಾಗೃತಿ ಮೂಡಿಸಲು ಸಹಕಾರ ಮಾಸಿಕ ವಾರ್ತಾಪತ್ರಿಕೆಯ ಮೂಲಕ, ಇತರ ಪ್ರಕಟಣೆಗಳ ಮೂಲಕ ಪ್ರಚಾರ ಕೆಲಸಗಳನ್ನು ನಮ್ಮ ಪತ್ತಿನ ಮಹಾಮಂಡಳ ಮಾಡುತ್ತಾ ಬಂದಿದೆ. ಪತ್ತಿನ ಸಹಕಾರ ಮಹಾಮಂಡಳವು ಪತ್ತಿನ ಸಹಕಾರ ಸಂಘಗಳಲ್ಲಿ ಸಿಬ್ಬಂದಿಗಳು ಕಾರ್ಯದಕ್ಷತೆಯಿಂದ ಕಾರ್ಯನಿರ್ವಹಿಸಲು ಅನುಕೂಲವಾಗುವಂತೆ ರಾಜ್ಯಾದ್ಯಂತ ವಿಭಾಗವಾರು ಕಾರ್ಯಕ್ರಮಗಳನ್ನು ಏರ್ಪಡಿಸಿ, ತಜ್ಞ ಉಪನ್ಯಾಸಕರುಗಳಿಂದ ಪ್ರಚಲಿತ ಸಹಕಾರಿ ವಿದ್ಯಾಮಾನಗಳು ಮತ್ತು ಸಹಕಾರ ಕಾಯಿದೆ, ನಿಯಮಗಳ ಕುರಿತು ಜಾಗೃತಿ ಮೂಡಿಸುವ ಕೆಲಸಗಳನ್ನು ಮಾಡುತ್ತಾ ಪತ್ತಿನ ಸಂಘಗಳ ಮಾರ್ಗದರ್ಶಕ ಸಂಸ್ಥೆಯಾಗಿ ಅವರುಗಳ ಬಲವರ್ಧನೆಗೆ ಕಾರ್ಯನಿರ್ವಹಿಸುತ್ತಿದೆ.

- **ಯುವಜನರು, ಮಹಿಳೆಯರು ಅಧಿಕ ಸಂಖ್ಯೆಯಲ್ಲಿ ಸಹಕಾರಿ ವ್ಯವಸ್ಥೆಯಡಿ ಬರಲು ಅಗತ್ಯ ಕಾರ್ಯಕ್ರಮಗಳು...**

ಸಹಕಾರಾಭಿವೃದ್ಧಿಗೆ ಮಹಿಳೆಯರು, ಯುವಜನರು ಮಹತ್ವದ ಕೊಡುಗೆ ನೀಡಬಲ್ಲರು ಎಂಬುದು ನನ್ನ ಅಭಿಪ್ರಾಯ. ಇತ್ತೀಚಿನ ದಿನಗಳಲ್ಲಿ ಮಹಿಳೆಯರು ವಿಶೇಷವಾಗಿ ಪತ್ತಿನ ಸಹಕಾರ ಸಂಘಗಳಲ್ಲಿ, ಹಾಲು ಉತ್ಪಾದಕರ ಸಹಕಾರ ಸಂಘಗಳಲ್ಲಿ ಸಕ್ರಿಯರಾಗಿದ್ದಾರೆ. ಮಹಿಳೆಯರು ಸಹಕಾರ ಸಂಸ್ಥೆಗಳ ಮೂಲಕ ಆರ್ಥಿಕ ನೆರವು ಪಡೆದು ಹೈನುಗಾರಿಕೆ, ಗುಡಿ ಕೈಗಾರಿಕೆ, ಕಿರು ಉದ್ಯಮಗಳು ಸೇರಿದಂತೆ ಸ್ವಾವಲಂಬಿ ಬದುಕು ಕಟ್ಟಿಕೊಳ್ಳುವ ಮೂಲಕ ಕುಟುಂಬದ ಮಕ್ಕಳ ಶಿಕ್ಷಣ, ಕುಟುಂಬ ನಿರ್ವಹಣೆ, ವ್ಯವಸಾಯದ ಖರ್ಚುಗಳನ್ನು ಭರಿಸುವ ಶಕ್ತಿಯನ್ನು ಹೊಂದಿದ್ದಾರೆ. ಮಹಿಳೆಯರು ಸ್ವಸಹಾಯ ಗುಂಪುಗಳಲ್ಲಿ ತೊಡಗಿಸಿಕೊಳ್ಳುವುದರ ಮೂಲಕವು ರಾಜ್ಯದಲ್ಲಿ ಕ್ರಾಂತಿಯನ್ನು ಮಾಡಿದ್ದಾರೆ. ಇದೊಂದು ದಾಖಲೆಯು ಹೌದು.

ಹಾಗೆಯೇ ರಾಜ್ಯದಲ್ಲಿ ಮಹಿಳಾ ಪತ್ತಿನ ಸಹಕಾರ ಸಂಘಗಳು ಮತ್ತು ಪಟ್ಟಣ ಸಹಕಾರ ಬ್ಯಾಂಕುಗಳನ್ನು ಯಶಸ್ವಿಯಾಗಿ ನಡೆಸುತ್ತಿರುವ ಶ್ರೇಯಸ್ಸು ಮಹಿಳೆಯರಿಗೆ ಸಲ್ಲುತ್ತದೆ. ಇನ್ನೂ ಹೆಚ್ಚಿನ ರೀತಿಯಲ್ಲಿ ಮಹಿಳೆಯರನ್ನು ಸಹಕಾರ ಸಂಘ ಸಂಸ್ಥೆಗಳಲ್ಲಿ, ಸ್ವಸಹಾಯ ಗುಂಪುಗಳಲ್ಲಿ ತೊಡಗಿಸಿಕೊಳ್ಳಲು ಪ್ರೇರೇಪಿಸಿ ಅವರನ್ನು ಆರ್ಥಿಕವಾಗಿ ಮತ್ತಷ್ಟು ಸ್ವಾವಲಂಬನೆ ಸಾಧಿಸುವಂತೆ ಮಾಡಬೇಕಾಗಿದೆ. ಈ ದಿಸೆಯಲ್ಲಿ ಪತ್ತಿನ ಮಹಾಮಂಡಳದ ವತಿಯಿಂದ ಪತ್ತಿನ ಸಂಘಗಳ ಆಡಳಿತ ಮಂಡಳಿ ಸದಸ್ಯರಿಗೆ ಮತ್ತು ಸಿಬ್ಬಂದಿ ವರ್ಗದವರಿಗೆ ಪರಿಣಾಮಕಾರಿ ಶಿಕ್ಷಣ, ತರಬೇತಿ ಕಾರ್ಯಕ್ರಮಗಳನ್ನು ರೂಪಿಸಲಾಗುವುದು.

- **ಸಹಕಾರ ಸಂಸ್ಥೆಗಳ ಬೆಳವಣಿಗೆ ಕುರಿತು ಸಂಶೋಧನೆ ಮತ್ತು ಮೌಲ್ಯಮಾಪನ ಅಗತ್ಯದ ಬಗ್ಗೆ...**

ದೇಶದ ಸಹಕಾರ ಚಳವಳಿಗೆ 118 ವರ್ಷಗಳ ಇತಿಹಾಸವಿದೆ. ದೇಶದಲ್ಲಿ 8.5 ಲಕ್ಷಕ್ಕೂ ಅಧಿಕ ಸಹಕಾರ ಸಂಘ ಸಂಸ್ಥೆಗಳಿವೆ. ಅದರಲ್ಲಿ 60 ಸಾವಿರಕ್ಕೂ ಅಧಿಕ ಪತ್ತಿನ ಸಹಕಾರ ಸಂಘಗಳು ಇರುವುದು ಹೆಮ್ಮೆಯ ವಿಚಾರವಾಗಿದೆ. ಕರ್ನಾಟಕದಲ್ಲಿ 5 ಸಾವಿರಕ್ಕೂ ಅಧಿಕ ಪತ್ತಿನ ಸಹಕಾರ ಸಂಘಗಳು ನೌಕರರ ಪತ್ತಿನ ಸಂಘಗಳು ಸೇರಿದಂತೆ ಅಂದಾಜು 46 ಸಾವಿರಕ್ಕೂ ಅಧಿಕ ಸಹಕಾರ ಸಂಘ ಸಂಸ್ಥೆಗಳಿವೆ. ಈ ಸಂಸ್ಥೆಗಳಲ್ಲಿ ಬಹುಪಾಲು ಲಾಭದಾಯಕವಾಗಿವೆ. ಉಳಿದ ಸಂಸ್ಥೆಗಳು ಹಲವು ಕಾರಣಗಳಿಂದ ಹಿಂದುಳಿದಿವೆ. ಇಂತಹ ಸಂಸ್ಥೆಗಳನ್ನು ಪುನಃಶ್ಚೇತನಗೊಳಿಸಿ, ಲಾಭದಲ್ಲಿ ಮುನ್ನಡೆಸುವುದರ ಜೊತೆಗೆ ಸಹಕಾರಿಗಳಿಗೆ ಈ ಸಂಸ್ಥೆಗಳಲ್ಲಿ ದೊರೆಯುವ ಪ್ರಯೋಜನಗಳು ಸಹಕಾರಿಗಳಿಗೆ ಲಭ್ಯವಾಗುವಂತಾಗಬೇಕು. ಸಹಕಾರಿ ವ್ಯವಸ್ಥೆ ಸದೃಢವಾಗಿ ಬೆಳೆಯಬೇಕು. ಈ ಕಾರಣಗಳಿಂದ ಸಹಕಾರಿ ವ್ಯವಸ್ಥೆಯಲ್ಲಿ ಸಂಶೋಧನೆ ಮತ್ತು ಮೌಲ್ಯಮಾಪನ ಆಗಾಗ್ಗೆ ನಡೆಯುತ್ತಿರಬೇಕು. ಪತ್ತಿನ ಸಹಕಾರ ಮಹಾಮಂಡಳವು ಮುಂಬರುವ ದಿನಗಳಲ್ಲಿ ಈ ಬಗ್ಗೆ ಹೆಚ್ಚಿನ ಒತ್ತು ನೀಡಲಾಗುವುದು.





● **ಪತ್ತಿನ ಮಹಾಮಂಡಳವು ನೂತನ ಕಟ್ಟಡ ನಿರ್ಮಾಣ ಮಾಡಿದೆ. ಈ ಸಂದರ್ಭದಲ್ಲಿ ಸಹಕಾರಿಗಳಿಗೆ ತಮ್ಮ ಸಂದೇಶ...**

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳವು ಕಳೆದ 19 ವರ್ಷಗಳಲ್ಲಿ ಹಂತ ಹಂತವಾಗಿ ಸದಸ್ಯ ಸಂಸ್ಥೆಗಳ ಪೂರಕ ಬೆಳವಣಿಗೆಗೆ ಶಿಕ್ಷಣ, ತರಬೇತಿ ಮತ್ತು ಇ-ಸ್ಟಾಂಪಿಂಗ್ ಸೌಲಭ್ಯಗಳನ್ನು ಒದಗಿಸುವುದರ ಮೂಲಕ ಕ್ರಿಯಾಶೀಲ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತಿದೆ. ಈ ಹಿಂದಿನ ಅಧ್ಯಕ್ಷರುಗಳಾದ ಬಿ.ಎಲ್. ಲಕ್ಕೇಗೌಡರು, ಎಸ್. ಚಂದ್ರಶೇಖರ್, ಸಿ.ಎಂ. ಮಾರೇಗೌಡ ಅವರುಗಳ ನೇತೃತ್ವದ ಆಡಳಿತ ಮಂಡಳಿಗಳು ಹಾಗೂ ಮುಖ್ಯಕಾರ್ಯನಿರ್ವಹಣಾಧಿಕಾರಿಗಳಾಗಿ ಸೇವೆ ಸಲ್ಲಿಸಿರುವ ಅಧಿಕಾರಿಗಳು ಸಹ ಸಂಸ್ಥೆಯ ಬೆಳವಣಿಗೆಗೆ ಕಾರಣಕರ್ತರಾಗಿದ್ದು ಅವರೆಲ್ಲರನ್ನು ಈ ಸಂದರ್ಭದಲ್ಲಿ ಸ್ಮರಿಸುತ್ತೇನೆ. ಕಳೆದ 3 ವರ್ಷಗಳಲ್ಲಿ ಪತ್ತಿನ ಸಹಕಾರ ಮಹಾಮಂಡಳವು ಸ್ವಂತ ಆಡಳಿತ ಕಚೇರಿ ಹೊಂದುವ ಉದ್ದೇಶವಿತ್ತು. ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಆಡಳಿತ ಮಂಡಳಿಯ ಆರ್ಥಿಕ ನೆರವು ಮತ್ತು ಮಾರ್ಗದರ್ಶನ ಹಾಗೂ ವಿವಿಧ ಪತ್ತಿನ ಸಹಕಾರ ಸಂಘ ಸಂಸ್ಥೆಗಳ ಆರ್ಥಿಕ ನೆರವಿನೊಂದಿಗೆ 3 ಮಹಡಿಗಳ ಸುಸಜ್ಜಿತ ಕಟ್ಟಡವನ್ನು ನಿರ್ಮಾಣ ಮಾಡಲಾಗಿದೆ.

ಈ ಸಂದರ್ಭದಲ್ಲಿ ಪತ್ತಿನ ಮಹಾಮಂಡಳಕ್ಕೆ ನೆರವು ನೀಡಿದ ಎಲ್ಲಾ ಸಹಕಾರಿಗಳು ಮತ್ತು ಸಹಕಾರ ಸಂಸ್ಥೆಗಳನ್ನು ಸ್ಮರಿಸುತ್ತಾ, ಮಹಾಮಂಡಳದ ಆಡಳಿತ ಮಂಡಳಿಯ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.



# ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ನೂತನ ಆಡಳಿತ ಕಚೇರಿ ಉದ್ಘಾಟನೆ




ಭಾರತದ ಸಹಕಾರಿ ಆಂದೋಲನ 1904 ರಲ್ಲಿ ಸಹಕಾರ ಸಂಘಗಳ ಕಾಯ್ದೆ ಅಸ್ತಿತ್ವಕ್ಕೆ ಬರುವುದರ ಮೂಲಕ ಆರಂಭಗೊಂಡು 1905 ರಲ್ಲಿ ರಾಷ್ಟ್ರದ ಪ್ರಥಮ ಕೃಷಿ ಪತ್ತಿನ ಸಹಕಾರ ಸಂಘ ಇಂದಿನ ಗದಗ ಜಿಲ್ಲೆಯ ಕಣಗಿನಹಾಳ ಗ್ರಾಮದಲ್ಲಿ ಪ್ರಾರಂಭಗೊಂಡಿತು. ನಂತರ ಆಮೆ ವೇಗದಲ್ಲಿ ಸಾಗಿದ್ದ ಇಡೀ ಚಳವಳಿ ಸ್ವಾತಂತ್ರ್ಯ ನಂತರ ಬೃಹದಾಕಾರವಾಗಿ ಬೆಳೆದಿದೆ. ಇಂದು ರಾಷ್ಟ್ರದಲ್ಲಿ 8.5 ಲಕ್ಷಕ್ಕೂ ಅಧಿಕ ವಿವಿಧ ರೀತಿಯ ಸಹಕಾರ ಸಂಘಗಳು ನೋಂದಣಿಯಾಗಿದ್ದು, ಬಹುತೇಕ ಸಂಘಗಳು ಕ್ರಿಯಾಶೀಲವಾಗಿ ಕಾರ್ಯನಿರ್ವಹಿಸುತ್ತಿವೆ. ಈ ಮೂಲಕ ದೇಶದ 30 ಕೋಟಿಗೂ ಅಧಿಕ ಜನರು ಸಹಕಾರ ಚಳವಳಿಯ ಮೂಲಕ ವಿವಿಧ ರೀತಿಯ ನೆರವುಗಳನ್ನು, ಸೇವೆಗಳನ್ನು ಪಡೆಯುತ್ತಿದ್ದಾರೆ.

ಪತ್ತಿನ ಸಹಕಾರ ಸಂಘಗಳು ಸದಸ್ಯರ ಆರ್ಥಿಕ ಸ್ವಾವಲಂಬನೆಗೆ ಪೂರಕ, ಪ್ರೇರಕ ಶಕ್ತಿ ಕೇಂದ್ರಗಳಾಗಿವೆ. ಇಂದು ದೇಶಾದ್ಯಂತ 60 ಸಾವಿರಕ್ಕೂ ಅಧಿಕ ಪತ್ತಿನ ಸಹಕಾರ ಸಂಘಗಳು ಸದಸ್ಯ ಸೇವೆಗಳಲ್ಲಿ ತೊಡಗಿಸಿಕೊಂಡಿದ್ದು, ಕರ್ನಾಟಕದಲ್ಲಿ ಅಂದಾಜು 5 ಸಾವಿರಕ್ಕೂ ಅಧಿಕ ಪತ್ತಿನ ಸಹಕಾರ ಸಂಘಗಳು ಬ್ಯಾಂಕಿಂಗ್ ಚಟುವಟಿಕೆಗಳನ್ನು ತನ್ನ ಗ್ರಾಹಕರಿಗೆ ನೀಡುವ ಮೂಲಕ ಕರ್ನಾಟಕದ ಸಹಕಾರಿ ಆಂದೋಲನದಲ್ಲಿ ತಮ್ಮದೇ ಆದ ಸ್ಥಾನವನ್ನು ಹೊಂದಿವೆ.

ಗ್ರಾಮೀಣ ಮತ್ತು ನಗರ ಪ್ರದೇಶಗಳ ಆರ್ಥಿಕವಾಗಿ ಅಬಲರಾಗಿರುವ ಜನರನ್ನು ಸಹಕಾರಿ ಕಕ್ಷೆಗೆ ಸೇರ್ಪಡೆ ಮಾಡಿಕೊಂಡು ಸೇವೆಗಳ ವಿಸ್ತರಣೆಯ ಮೂಲಕ ಪತ್ತಿನ ಸಹಕಾರ ಸಂಘಗಳು ಮಹತ್ವದ ಪಾತ್ರವನ್ನು ನಿರ್ವಹಿಸಿಕೊಂಡು ಬರುತ್ತಿವೆ. ಸಾರ್ವಜನಿಕರ ಹಿತಾಸಕ್ತಿಗಾಗಿ ಅವರ ಆರ್ಥಿಕ ಸ್ವಾವಲಂಬನೆಯ ಯಶಸ್ಸಿನೊಂದಿಗೆ ಸಮಾಜದ ಪ್ರಗತಿಯೂ ಸಹ ಈ ಸಂಸ್ಥೆಗಳ ಉದ್ದೇಶವಾಗಿದೆ. ಆರ್ಥಿಕ ಸಬಲೀಕರಣದ ಮೂಲಕ ಆರ್ಥಿಕ ಮತ್ತು ಸಾಮಾಜಿಕ ಪರಿವರ್ತನೆ ಮಾಡುವುದು ಸಹಕಾರದ ಮೂಲ ಉದ್ದೇಶವಾಗದ್ದು, ಪ್ರಜಾಪ್ರಭುತ್ವದ ಮಾದರಿಯಲ್ಲಿ ಜನರ ಸಾಮಾಜಿಕ ಪರಿವರ್ತನೆಗೆ ಪೂರಕ ಅನಿಸಿದೆ.

ಸಾರ್ವಜನಿಕ ವಲಯ ಮತ್ತು ಖಾಸಗಿ ಕ್ಷೇತ್ರಗಳ ನಡುವೆ ಸಹಕಾರಿ ಕ್ಷೇತ್ರ ಪೈಪೋಟಿಯನ್ನು ನೀಡುವಷ್ಟು ಪ್ರಬಲವಾಗಿ ಬೆಳೆಯುತ್ತಿರುವುದು ಆಶಾದಾಯಕ ಬೆಳವಣಿಗೆಯಾಗಿದೆ. ಇದರಿಂದ ಅತಿ ಸಣ್ಣ ಹಿಡುವಳಿದಾರರು, ಸಣ್ಣ ವ್ಯಾಪಾರಿಗಳು, ಚಿಲ್ಲರೆ ಮಾರಾಟಗಾರರು, ನೌಕರ ವರ್ಗದವರು ಮತ್ತು ಸಾರ್ವಜನಿಕರು ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ, ಔದ್ಯೋಗಿಕವಾಗಿ ಮುಂದುವರೆಯಲು ಸಾಧ್ಯವಾಗುವಂತೆ ಈ ಪತ್ತಿನ ಸಹಕಾರ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ.

ಇಂತಹ ಸಹಕಾರ ಸಂಸ್ಥೆಗಳ ಬಲವರ್ಧನೆಗಾಗಿಯೇ ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳವು ಅಸ್ತಿತ್ವಕ್ಕೆ ಬಂದಿದೆ. ಇದರ ಮುಖ್ಯ ಉದ್ದೇಶ ಪತ್ತಿನ ಸಹಕಾರ ಸಂಘಗಳ ಅಭಿವೃದ್ಧಿಗಾಗಿ ಶಿಕ್ಷಣ, ತರಬೇತಿ ಹಾಗೂ ಪ್ರಚಾರ ಕಾರ್ಯಗಳನ್ನು ಏರ್ಪಡಿಸುವುದು ಹಾಗೂ ಪತ್ತಿನ ಸಂಘಗಳ ವಲಯದ ಮಾರ್ಗದರ್ಶಕ ಸಂಸ್ಥೆಯಾಗಿ ಕಾರ್ಯನಿರ್ವಹಿಸುವುದಾಗಿದೆ. ಪತ್ತಿನ ಸಂಘಗಳ ಸಹಕಾರ ಮಹಾಮಂಡಳವು ಸಹಕಾರಿ ಮುಖಂಡ, ಸಹಕಾರ ರತ್ನ ಪುರಸ್ಕೃತ ಬಿ.ಎಲ್. ಲಕ್ಕೇಗೌಡರ ಕನಸಿನ ಕೂಸು. 2004 ರಲ್ಲಿ ಸಮಾನ ಮನಸ್ಕ ಸಹಕಾರಿಗಳು ಹಾಗೂ ಪತ್ತಿನ ಸಹಕಾರ ಸಂಸ್ಥೆಗಳಿಂದ ಪ್ರಾರಂಭವಾದ

ಸಂಸ್ಥೆಯು ಈ ಸಂಸ್ಥೆಯು ಪತ್ತಿನ ಸಹಕಾರ ಸಂಸ್ಥೆಗಳ ಬಲವರ್ಧನೆಗಾಗಿ ಕಳೆದ 19 ವರ್ಷಗಳಿಂದ ಪರಿಣಾಮಕಾರಿ ಸೇವೆ ಸಲ್ಲಿಸುತ್ತಾ ಬಂದಿದೆ. ಬಿ.ಎಲ್. ಲಕ್ಕೇಗೌಡರು ಸಂಸ್ಥಾಪಕ ಅಧ್ಯಕ್ಷರಾಗಿ, ನಂತರ ಎಸ್. ಚಂದ್ರಶೇಖರ್, ಸಿ.ಎಂ. ಮಾರೇಗೌಡ ಅವರುಗಳು ಅಧ್ಯಕ್ಷರಾಗಿ ಮಹಾಮಂಡಳದ ಬೆಳವಣಿಗೆಗೆ ಕಾರಣಕರ್ತರಾಗಿದ್ದಾರೆ. ಪ್ರಸ್ತುತ ಸಂಸ್ಥೆಯ ಅಧ್ಯಕ್ಷರಾಗಿ ಕೆ. ಲಲಿತಾ ಜಿ.ಟಿ. ದೇವೇಗೌಡರು ಬದ್ಧತೆಯುಳ್ಳ ಮಾರ್ಗದರ್ಶನ ಮಾಡುತ್ತಿರುವುದು ಶ್ಲಾಘನೀಯ ವಿಚಾರವಾಗಿದೆ.

ಕೆ. ಲಲಿತಾ ಜಿ.ಟಿ. ದೇವೇಗೌಡರು ಮತ್ತು ಪತ್ತಿನ ಮಹಾಮಂಡಳದ ಉಪಾಧ್ಯಕ್ಷರು ಹಾಗೂ ಆಡಳಿತ ಮಂಡಳಿ ನಿರ್ದೇಶಕರುಗಳ ಬದ್ಧತೆಯುಳ್ಳ ಮಾರ್ಗದರ್ಶನದಲ್ಲಿ ಇಂದು ಸಂಸ್ಥೆಯು ತನ್ನದೇ ಆದ ಸ್ವಂತ ನಿವೇಶನದಲ್ಲಿ 3 ಅಂತಸ್ತುಗಳ ಸುಸಜ್ಜಿತ ಆಡಳಿತ ಕಚೇರಿ ಕಟ್ಟಡ ನಿರ್ಮಾಣ ಮಾಡಿರುವುದು ದಾಖಲರ್ಹ ವಿಚಾರವಾಗಿದೆ.

ನೂತನ ಕಟ್ಟಡದ ಉದ್ಘಾಟನಾ ಸಮಾರಂಭವು ಮಾರ್ಚ್ 24 ರಂದು ರಾಜ್ಯದ ಸಹಕಾರ ಸಚಿವರಾದ ಎಸ್.ಟಿ. ಸೋಮಶೇಖರ್ ಅವರ ಅಮೃತ ಹಸ್ತದಿಂದ ನೆರವೇರಲಿದೆ. ಸ್ಥಳೀಯ ಶಾಸಕರು ಹಾಗೂ ಅಬಕಾರಿ ಸಚಿವರಾದ ಕೆ. ಗೋಪಾಲಯ್ಯ, ಕರ್ನಾಟಕ ರಾಜ್ಯದ ಮಾಜಿ ಮುಖ್ಯಮಂತ್ರಿಗಳು ಹಾಗೂ ಸಂಸದರಾದ ಡಿ.ವಿ. ಸದಾನಂದಗೌಡರು, ಸಹಕಾರ ಮಹಾಮಂಡಳದ ಅಧ್ಯಕ್ಷರು ಹಾಗೂ ಶಾಸಕರಾದ ಜಿ.ಟಿ. ದೇವೇಗೌಡರು, ಪತ್ತಿನ ಮಹಾಮಂಡಳದ ಉಪಾಧ್ಯಕ್ಷರಾದ ಕೆ.ಕೆ. ಮಹೇಂದ್ರಪ್ರಸಾದ್ ಗೌಡ ಮತ್ತು ಆಡಳಿತ ಮಂಡಳಿ ಎಲ್ಲಾ ನಿರ್ದೇಶಕರುಗಳು ಹಾಗೂ ಸಹಕಾರ ಸಂಘಗಳ ನಿಬಂಧಕರಾದ ಕ್ಯಾಪ್ಟನ್ ಡಾ. ಕೆ. ರಾಜೇಂದ್ರ ಅವರುಗಳು ಕಾರ್ಯಕ್ರಮದಲ್ಲಿ ಭಾಗವಹಿಸಿ, ಕಾರ್ಯಕ್ರಮಕ್ಕೆ ಶುಭ ಕೋರಲಿದ್ದಾರೆ.

**ಸ್ಥಾಪನೆ ಹಿನ್ನೆಲೆ :** ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳವು ಕೃಷಿಯೇತರ ಪತ್ತಿನ ಸಹಕಾರ ಸಂಘಗಳ ಅಭಿವೃದ್ಧಿಗಾಗಿ, ಇತರೆ ಮಹಾಮಂಡಳಗಳಂತೆ ಒಂದು ಪ್ರತ್ಯೇಕ ಮಹಾಮಂಡಳವನ್ನು ಸ್ಥಾಪಿಸಲು 1996ರಲ್ಲಿ ಸಹಕಾರಿ ಧುರೀಣರು ಚಿಂತನೆ ಮಾಡಿದರು. ಅಂತಿಮವಾಗಿ ಬಿ.ಎಲ್. ಲಕ್ಕೇಗೌಡ ಮುಖ್ಯಪ್ರವರ್ತಕರು ಹಾಗೂ 12 ಪ್ರವರ್ತಕರು ಸೇರಿ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗಿ, ಪತ್ತಿನ ಸಂಘಗಳ ನಿಬಂಧಕರು ದಿನಾಂಕ: 06.11.2004 ರಂದು ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳವನ್ನು ನೋಂದಣಿ ಮಾಡಿದರು. ಅಂದಿನಿಂದ ಈ ಮಹಾಮಂಡಳವು ಜಯನಗರ, 3ನೇ ವಿಭಾಗ, ಬೆಂಗಳೂರು ಇಲ್ಲಿ ಕಾರ್ಯನಿರ್ವಹಿಸುತ್ತಿತ್ತು. ಸಂಸ್ಥೆಯ ವ್ಯವಹಾರವು ಅಭಿವೃದ್ಧಿ ಹೊಂದಿದ್ದು, ನೌಕರರು ಹಾಗೂ ಆಡಳಿತಮಂಡಳಿತ ಕಾರ್ಯಕಲಾಪಗಳಿಗೆ ಸ್ಥಳದ ಕೊರತೆಯಿದ್ದ ಕಾರಣ ಕಾರ್ಯಾಲಯವನ್ನು ಮಲ್ಲೇಶ್ವರಂಗೆ ಸ್ಥಳಾಂತರಿಸಲಾಯಿತು. ಈ ಸಂಸ್ಥೆ 18 ವರ್ಷಗಳನ್ನು ಪೂರೈಸಿ 19ನೇ ವರ್ಷಕ್ಕೆ ಕಾಲಿರಿಸಿ ಮುನ್ನಡೆಯುತ್ತಿದೆ.

**ಕಾರ್ಯಕ್ಷೇತ್ರ :** ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಕಾರ್ಯಕ್ಷೇತ್ರವು ಕರ್ನಾಟಕ ರಾಜ್ಯದ ಎಲ್ಲಾ ಪ್ರದೇಶಗಳಿಗೆ ಸೀಮಿತವಾಗಿರುತ್ತದೆ.

**ಉದ್ದೇಶ :** ಪತ್ತಿನ ಸಹಕಾರ ಸಂಘಗಳ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ಹಾಗೂ ಆ ಸಂಘಗಳ ಪದಾಧಿಕಾರಿಗಳ, ನಿರ್ದೇಶಕರ ಮತ್ತು ನೌಕರ ವರ್ಗದವರಿಗೆ, ಸಹಕಾರ ಕಾಯ್ದೆ, ನಿಯಮಗಳು ಕುರಿತಂತೆ ತರಬೇತಿ ಕಾರ್ಯಕ್ರಮಗಳನ್ನು ನೀಡುವುದಲ್ಲದೇ, ತನ್ನ ಸದಸ್ಯರಿಗೆ ಅಗತ್ಯವಿರುವ ಬ್ಯಾಂಕಿಂಗ್ ವ್ಯವಹಾರ ಠೇವಣಿ ಮತ್ತು ಉಳಿತಾಯ ಖಾತೆಗಳನ್ನು ನಿರ್ವಹಿಸುವ ಸಂಘಗಳಿಗೆ ಈ ಮಹಾಮಂಡಳವು ಸೂಕ್ತ ಮಾಹಿತಿ ಒದಗಿಸುತ್ತಿದೆ. ಒಟ್ಟಿನಲ್ಲಿ, ಪತ್ತಿನ ಸಹಕಾರ ಸಂಘಗಳ ಅಭಿವೃದ್ಧಿ ಮಹಾಮಂಡಳದ ಪ್ರಮುಖ ಉದ್ದೇವಾಗಿರುತ್ತದೆ.

**ಸದಸ್ಯತ್ವ :** ಮಹಾಮಂಡಳದ ಉಪನಿಯಮದ ರೀತ್ಯ ಪ್ರಾಥಮಿಕ ಕೃಷಿಯೇತರ ಪತ್ತಿನ ಸಹಕಾರ ಸಂಘಗಳು, ನೌಕರರ ಪತ್ತಿನ ಸಹಕಾರ ಸಂಘಗಳು ಮಹಾಮಂಡಳದಲ್ಲಿ ಆಜೀವ ಸದಸ್ಯತ್ವ/ ಅಜೀವ ಸಹಸದಸ್ಯ/ ನಾಮಮಾತ್ರ ಸದಸ್ಯತ್ವ ಪಡೆದುಕೊಳ್ಳಲು ಅವಕಾಶವಿದೆ. ಅದರಂತೆ 2084 ಸಂಘಗಳು ಸದಸ್ಯತ್ವ ಪಡೆದಿರುತ್ತವೆ.

**ಇ–ಸ್ಟಾಂಪಿಂಗ್ ವ್ಯವಹಾರ :** ಸದಸ್ಯ ಸಂಘಗಳಿಗೆ ಬಡ್ಡಿಯೇತರ ಆದಾಯವನ್ನು ಕಲ್ಪಿಸಿಕೊಡುವ ಸಲುವಾಗಿ, ಮಹಾಮಂಡಳವು ಸ್ಟಾಕ್ ಹೋಲ್ಡಿಂಗ್ ಕಾರ್ಪೋರೇಷನ್ ಆಫ್ ಇಂಡಿಯಾ ಜೊತೆ ಒಪ್ಪಂದ ಮಾಡಿಕೊಂಡು, ರಾಜ್ಯಾದ್ಯಂತ 1775 ಇ–ಸ್ಟಾಂಪಿಂಗ್ ಕೇಂದ್ರಗಳಿಗೆ ಛಾಪಾ ಕಾಗದಗಳನ್ನು ಮುದ್ರಿಸಲು ಪರವಾನಗಿಗಳನ್ನು ಮಂಜೂರು ಮಾಡಿಸಿಕೊಟ್ಟಿದೆ.

**ಶಿಕ್ಷಣ ತರಬೇತಿ :** ಮಹಾಮಂಡಳವು ರಾಜ್ಯದಲ್ಲಿನ ಸದಸ್ಯ ಸಂಘಗಳ ಆಡಳಿತಮಂಡಳಿ ಪದಾಧಿಕಾರಿಗಳಿಗೆ, ನಿರ್ದೇಶಕರುಗಳಿಗೆ, ಸದಸ್ಯರುಗಳಿಗೆ, ಸಿಬ್ಬಂದಿಗಳಿಗೆ, ಸಹಕಾರ ಕಾಯ್ದೆ, ನಿಯಮ, ಠೇವಣಿ ಸಂಗ್ರಹಣೆ, ನಿಧಿಗಳ ನಿರ್ವಹಣೆ, ಎನ್.ಪಿ.ಎ ಸುಸ್ತಿ ಸಾಲ ವಸೂಲಾತಿ, ಲೆಕ್ಕಪತ್ರಗಳ ನಿರ್ವಹಣೆ ಹಾಗೂ ಲೆಕ್ಕಪರಿಶೋಧನೆಗೆ ಸಂಬಂಧಪಟ್ಟ ಸೂಕ್ತ ಸಲಹೆ, ಸೂಚನೆ, ಮಾರ್ಗದರ್ಶನ ನೀಡುವುದಲ್ಲದೇ, ಸಂಘಗಳ ಅಭಿವೃದ್ಧಿಗೆ ಚಿಂತನೆ ನಡೆಸಿ ತರಬೇತಿ ನೀಡುತ್ತಾ ಬಂದಿದೆ.

**ಸಹಕಾರ ವಾರ್ತಾಪತ್ರಿಕೆ :** ಮಹಾಮಂಡಳದ ವತಿಯಿಂದ ಪ್ರತಿ ಮಾಹೆಯ ಸಹಕಾರ ವಾರ್ತಾಪತ್ರಿಕೆಯನ್ನು ಮುದ್ರಿಸಿ ಚಂದಾದಾರರಾಗಿರುವ ಎಲ್ಲಾ ಸದಸ್ಯ ಸಹಕಾರ ಸಂಘಗಳ ಅನುಕೂಲಕ್ಕಾಗಿ ಸಹಕಾರ ಸಂಘಗಳು ಅನುಸರಿಸಬೇಕಾದ ಮಾಹಿತಿಗಳ ಜೊತೆಗೆ ರಾಜ್ಯ ಸರ್ಕಾರ ಹಾಗೂ ಸಹಕಾರ ಇಲಾಖೆಯು ಆಗಿಂದ್ದಾಗೆ ಹೊರಡಿಸುವ ಸುತ್ತೋಲೆಗಳನ್ನು, ಆದೇಶಗಳನ್ನು, ಕಾಯ್ದೆಯ ತಿದ್ದುಪಡಿಗಳನ್ನು ಆದಾಯ ತೆರಿಗೆ ಕುರಿತು, ನುರಿತ ಸಹಕಾರ ತಜ್ಞರಿಂದ ಲೇಖನಗಳನ್ನು ಪಡೆದು ಪ್ರಕಟಿಸಿ ಪ್ರಸಾರ ಮಾಡಲಾಗುತ್ತಿದೆ. ವೆಬ್ ಸೈಟ್/ಅಂತರಜಾಲ ನಿಘಂಟು ಮಹಾಮಂಡಳವು ಸದಸ್ಯ ಸಹಕಾರ ಸಂಘಗಳ ಅನುಕೂಲಕ್ಕಾಗಿ ತನ್ನದೇ ಆದ ವೆಬ್‌ಸೈಟ್ ಅನ್ನು ಸಿದ್ದಪಡಿಸಿದ್ದು, (www.ksccsf.org) ಲಭ್ಯ ಮಾಹಿತಿಗಳನ್ನು ಈ ವೆಬ್‌ಸೈಟ್‌ನಲ್ಲಿ ವೀಕ್ಷಿಸಬಹುದಾಗಿದೆ. ಒಟ್ಟಾರೆ ಪತ್ತಿನ ಸಹಕಾರ ಮಹಾಮಂಡಳವು ಕ್ರಿಯಾಶೀಲ ಆಡಳಿತ ಮಂಡಳಿ ಮತ್ತು ನೌಕರ ವರ್ಗದ ಸಮನ್ವಯತೆಯೊಂದಿಗೆ ಕಾರ್ಯನಿರ್ವಹಿಸುವುದರ ಮೂಲಕ ಚಳವಳಿಯ ಬಲವರ್ಧನೆಗೆ ವಿಶೇಷ ಒತ್ತು ನೀಡುತ್ತಿದೆ.

## ಸಹಕಾರ ವಲಯ ಬಲವರ್ಧನೆಗೆ
## ಪತ್ತಿನ ಸಹಕಾರ ಸಂಘಗಳ ಕೊಡುಗೆ ಪ್ರಶಂಸನೀಯ
# ಸಹಕಾರ ಪತ್ತಿನ ಮಹಾಮಂಡಳದ ಉಪಾಧ್ಯಕ್ಷರಾದ
# ಕೆ.ಕೆ. ಮಹೇಂದ್ರ ಪ್ರಸಾದ್‌ಗೌಡ



ಯುವ ಸಹಕಾರಿ ಮುಖಂಡರು, ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಉಪಾಧ್ಯಕ್ಷರಾದ ಕೆ.ಕೆ. ಮಹೇಂದ್ರ ಪ್ರಸಾದ್‌ಗೌಡ ಅವರು ಸಹಕಾರ ಕ್ಷೇತ್ರದ ಭವಿಷ್ಯದ ಭರವಸೆಯ ಮುಖಂಡರಾಗಿದ್ದಾರೆ. ಶ್ರೀಯುತರು ಸಹಕಾರಿ ಕ್ಷೇತ್ರದಲ್ಲಿ ಪ್ರಾಥಮಿಕ ಹಂತದಿಂದ ರಾಜ್ಯಮಟ್ಟದವರೆಗೂ ಸಹಕಾರ ಕ್ಷೇತ್ರದ ಬೆಳವಣಿಗೆಗೆ ಶ್ರಮಿಸುತ್ತಿರುವುದರ ಜೊತೆಗೆ ಕ್ಷೇತ್ರದ ಅಭಿವೃದ್ಧಿಗೆ ಅಧ್ಯಯನಶೀಲರು ಆಗಿದ್ದಾರೆ. ಸಹಕಾರಾಭಿವೃದ್ಧಿಗೆ ತಮ್ಮದೇ ಆದ ಕೊಡುಗೆಯನ್ನು ನೀಡುತ್ತಿದ್ದಾರೆ. ಶ್ರೀಯುತರು ಪತ್ತಿನ ಸಹಕಾರ ಮಹಾಮಂಡಳದ ಉಪಾಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ನಂತರ ಕರ್ನಾಟಕ ರಾಜ್ಯದ ಪತ್ತಿನ ಸಹಕಾರ ಸಂಘಗಳ ಸಮಗ್ರ ಬೆಳವಣಿಗೆಗೆ ಸಹಕಾರ ಶಿಕ್ಷಣ, ತರಬೇತಿ ಮತ್ತು ಪ್ರಚಾರದ ಜೊತೆಗೆ ಪತ್ತಿನ ಸಂಘಗಳು ಎದುರಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಕೊಳ್ಳಲು ಶ್ರಮಿಸುತ್ತಿದ್ದಾರೆ.

ಸಹಕಾರಿಗಳು ಬದ್ಧತೆ, ದಕ್ಷತೆ ಹಾಗೂ ಪ್ರಾಮಾಣಿಕತೆಯಿಂದ ಸಹಕಾರ ರಂಗದಲ್ಲಿ ತೊಡಗಿಸಿಕೊಂಡು ಚಳುವಳಿಯನ್ನು ಬೆಳೆಸಿದರೆ ಕ್ಷೇತ್ರ ಆಲದ ಮರವಾಗಿ ಬೆಳೆದು ಕೋಟ್ಯಂತರ ಜನರಿಗೆ ನೆರಳು ನೀಡಬಲ್ಲದು ಎಂಬ ವಿಶ್ವಾಸವಿರಿಸಿಕೊಂಡಿದ್ದಾರೆ. ಸಹಕಾರ ಮಾಸಿಕ ವಾರ್ತಾಪತ್ರಿಕೆಗೆ ಸಂದರ್ಶನ ನೀಡಿರುವ ಅವರು ತಮ್ಮ ಮನದಾಳದ ಮಾತುಗಳನ್ನು ಹಂಚಿಕೊಂಡಿದ್ದಾರೆ.

● **ಸಹಕಾರ ಚಳವಳಿಯ ಬಗ್ಗೆ ತಮ್ಮ ಅಭಿಪ್ರಾಯ...**

ಸಹಕಾರ ಚಳವಳಿ ಆಲದ ಮರದಂತೆ ಬೆಳೆದು ನಿಂತಿದೆ. ರಾಷ್ಟ್ರದಲ್ಲಿ 8.5 ಲಕ್ಷಕ್ಕೂ ಅಧಿಕ ವಿವಿಧ ರೀತಿಯ ಸಹಕಾರ ಸಂಘಗಳು, 30 ಕೋಟಿಗೂ ಅಧಿಕ ಸದಸ್ಯ ಬಳಗವನ್ನು ನೋಡಿದಾಗ ಸಹಕಾರ ಕ್ಷೇತ್ರ ಆರ್ಥಿಕವಾಗಿ ಅಬಲರಾದವರನ್ನು ಸ್ವಾವಲಂಬಿಗಳನ್ನಾಗಿ ಮಾಡಲು ವಿಶೇಷ ಕೊಡುಗೆಯನ್ನು ನೀಡುತ್ತಾ ಬಂದಿದೆ. ದೇಶದಲ್ಲಿ ಲಕ್ಷಾಂತರ ಜನರಿಗೆ ಉದ್ಯೋಗ ಅವಕಾಶಗಳನ್ನು ಒದಗಿಸಿಕೊಡುವುದರ ಜೊತೆಗೆ ಅವಲಂಬಿತ ಕುಟುಂಬಗಳು ಉತ್ತಮ ಜೀವನ ನಡೆಸಲು ಸಹ ಸಹಕಾರಿಯಾಗಿದೆ. ಸಹಕಾರ ಚಳವಳಿಯ ತೊಟ್ಟಿಲು ಆಗಿರುವ ಕರ್ನಾಟಕ ರಾಜ್ಯ ಸಹಕಾರ ಚಳವಳಿಯ ಬೆಳವಣಿಗೆ ಬಗ್ಗೆ ಅಭಿಮಾನವಿದೆ. ಸಹಕಾರ ಕ್ಷೇತ್ರದಲ್ಲಿ ಹೆಚ್ಚಿನ ಸಂಖ್ಯೆಯ ಜನರು ತೊಡಗಿಸಿಕೊಳ್ಳುವ ಮೂಲಕ ತಮ್ಮ ಅಗತ್ಯಗಳನ್ನು ಪೂರೈಸಿಕೊಳ್ಳುವುದರ ಜೊತೆಗೆ "ಒಬ್ಬರು ಎಲ್ಲರಿಗಾಗಿ, ಎಲ್ಲರೂ ಒಬ್ಬರಿಗಾಗಿ" ಎಂಬ ತತ್ವವನ್ನು ಸಾರುತ್ತಾ ಜನರ ಬದುಕನ್ನು ಹಸನುಗೊಳಿಸಲು ಸಾಧ್ಯವಾಗಲಿದೆ. ಜನರ ಆರ್ಥಿಕ

ಅಭಿವೃದ್ಧಿಗೆ ಪ್ರೇರಣೆಯಾಗಿರುವ ಸಹಕಾರ ಕ್ಷೇತ್ರ ಮಹತ್ವದ ಪಾತ್ರ ವಹಿಸಿದೆ.



- **ಪತ್ತಿನ ಸಹಕಾರ ಸಂಘಗಳು ಸದೃಢಗೊಳ್ಳಲು ಷೇರು ಬಂಡವಾಳ, ಠೇವಣಿ ಸಂಗ್ರಹಣೆ ಅಗತ್ಯವಿದೆ. ಇದನ್ನು ಹೆಚ್ಚಿಸಲು ನಿಮ್ಮ ಅನಿಸಿಕೆ ಏನು?**

ಪತ್ತಿನ ಸಹಕಾರ ಸಂಘಗಳು ಆರ್ಥಿಕವಾಗಿ ಸ್ವಾವಲಂಬಿಗಳಾಗ ಬೇಕಾದರೆ, ಷೇರು ಹಣ ಮತ್ತು ಠೇವಣಿಗಳು ಪ್ರಮುಖವಾದುವು. ಸದಸ್ಯರ ನಂಬಿಕೆಯನ್ನು ಹೆಚ್ಚಳ ಮಾಡಿಕೊಂಡು ಸಂಘಗಳು ಉತ್ತಮ ಸೇವೆ ಒದಗಿಸಿದಲ್ಲಿ ಷೇರು ಬಂಡವಾಳ, ಠೇವಣಿ ಸಂಗ್ರಹಣೆ ವೃದ್ಧಿಯಾಗುವುದರಲ್ಲಿ ಯಾವುದೇ ಅನುಮಾನವಿರುವುದಿಲ್ಲ. ಸದಸ್ಯರಲ್ಲಿ ಜಾಗೃತಿ ಮೂಡಿಸುವುದರ ಜೊತೆಗೆ ಸಹಕಾರಿ ಸಂಪರ್ಕ ಸಭೆಗಳನ್ನು ಏರ್ಪಡಿಸಿ ಅವರಿಗೆ ಚಳವಳಿಯ ಬಗ್ಗೆ ಅಭಿಮಾನ ಮೂಡಿಸಿ ಸಹಕಾರ ತತ್ವಗಳ ಪಾಲನೆ ಹಾಗೂ ಬೆಳವಣಿಗೆ ಕುರಿತು ಮಾರ್ಗದರ್ಶನ ನೀಡಬೇಕಾದ ಅಗತ್ಯವಿದೆ.

- **ಪತ್ತಿನ ಸಂಘಗಳ ಬೆಳವಣಿಗೆಗೆ ಪತ್ತಿನ ಮಹಾಮಂಡಳವು ಹಮ್ಮಿಕೊಂಡಿರುವ ಇತರೆ ಯೋಜನೆಗಳೇನು?**

ಪತ್ತಿನ ಸಹಕಾರ ಮಹಾಮಂಡಳವು ಪತ್ತಿನ ಸಂಘಗಳ ಶೃಂಗ ಸಂಸ್ಥೆಯಾಗಿ ಸಮಗ್ರ ಬೆಳವಣಿಗೆಗೆ ಎಲ್ಲಾ ರೀತಿಯ ಮಾರ್ಗದರ್ಶನ ನೀಡುತ್ತಿದೆ. ಸಹಕಾರ ಇಲಾಖೆ ಮತ್ತು ಸಹಕಾರ ಸಚಿವಾಲಯ ಹಾಗೂ ರಾಜ್ಯ ಮತ್ತು ರಾಷ್ಟ್ರಮಟ್ಟದ ಸಂಸ್ಥೆಗಳೊಂದಿಗೆ ನಿಕಟ ಸಂಬಂಧವಿರಿಸಿಕೊಂಡು ಅಗತ್ಯ ಮಾರ್ಗದರ್ಶನ ಪಡೆಯುವುದರ ಮೂಲಕ ಸಂಘಗಳು ಎದುರಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರೋಪಾಯಗಳನ್ನು ಕಂಡುಕೊಳ್ಳುವುದರ ಜೊತೆಗೆ ಸದಸ್ಯರ ಸಂಸ್ಥೆಗಳು ಬಡ್ಡಿಯೇತರ ಆದಾಯವನ್ನು ಗಳಿಸುವ ಉದ್ದೇಶದಿಂದ ಇ-ಸ್ಟಾಂಪಿಂಗ್ ನೋಡಲ್ ಏಜೆನ್ಸಿಯಾಗಿ ಮಹಾಮಂಡಳ ಕ್ರಿಯಾಶೀಲವಾಗಿ ಕಾರ್ಯನಿರ್ವಹಿಸುತ್ತಿದೆ. ಮುಂಬರುವ ದಿನಗಳಲ್ಲಿ ಮತ್ತಷ್ಟು ಹೊಸ ಯೋಜನೆಗಳೊಂದಿಗೆ, ಹಿರಿಯ ಮಾರ್ಗದರ್ಶನದಲ್ಲಿ ಯೋಜನೆಗಳನ್ನು ರೂಪಿಸಿ, ಅನುಷ್ಠಾನಕ್ಕೆ ತರಲಾಗುವುದು.

- **ಪತ್ತಿನ ಮಹಾಮಂಡಳದ ಉಪಾಧ್ಯಕ್ಷರಾಗಿ ಕಾರ್ಯ ನಿರ್ವಹಿಸುವುದರಲ್ಲಿ ತೃಪ್ತಿ ಇದೆಯೇ?**

ಖಂಡಿತ ಇದೆ. ಪತ್ತಿನ ಮಹಾಮಂಡಳವು ಅನುಭವಿ ಆಡಳಿತ ಮಂಡಳಿ ಸದಸ್ಯರುಗಳನ್ನು ಹೊಂದಿರುವುದು ಹಾಗೂ ಹಿರಿಯ ಸಹಕಾರಿ ಶ್ರೀಮತಿ ಕೆ. ಲಲಿತಾ ಜಿ.ಟಿ. ದೇವೇಗೌಡರ ಮಾರ್ಗದರ್ಶನದಲ್ಲಿ ಕಾರ್ಯನಿರ್ವಹಿಸುತ್ತಿರುವುದು ಅತ್ಯಂತ ಸಂತಸದ ವಿಚಾರ. ನಮ್ಮ ಈ ಅವಧಿಯ ಆಡಳಿತ ಮಂಡಳಿ ಅಸ್ತಿತ್ವಕ್ಕೆ ಬಂದ ನಂತರ ಸುಸಜ್ಜಿತ ಸ್ವಂತ ಆಡಳಿತ ಕಚೇರಿ ಕಟ್ಟಡ ನಿರ್ಮಾಣ ಮಾಡುವಲ್ಲಿ ನಾವೆಲ್ಲರೂ ಹೆಚ್ಚಿನ ಜವಾಬ್ದಾರಿ, ಬದ್ಧತೆ, ಪ್ರಾಮಾಣಿಕತೆಯಿಂದ ಮಾರ್ಗದರ್ಶನ ಮಾಡಿ ಸ್ವಂತ ಕಟ್ಟಡವನ್ನು ಹೊಂದಿರುವುದು ಸಮಾಧಾನಕರ ವಿಷಯ. ಕಟ್ಟಡ ನಿರ್ಮಾಣ ಹಂತದಲ್ಲಿ ಆಡಳಿತ ಮಂಡಳಿ ಸದಸ್ಯರೊಂದಿಗೆ ಹೆಚ್ಚಿನ ಸಮಯವನ್ನು ಕಟ್ಟಡ ನಿರ್ಮಾಣಕ್ಕೆ ಮೀಸಲಿರಿಸಿದ್ದು ಸ್ಮರಣೀಯ ವಿಚಾರವಾಗಿದೆ. ಪತ್ತಿನ ಮಹಾಮಂಡಳದ ಬೆಳವಣಿಗೆಗೆ ಕಾರಣಕರ್ತರಾಗಿರುವ ಸಹಕಾರ ಸಚಿವರು, ಸಹಕಾರ ಮಹಾಮಂಡಳದ ಅಧ್ಯಕ್ಷರು ಹಾಗೂ ಆಡಳಿತ ಮಂಡಳಿ ಸದಸ್ಯರು ಹಾಗೂ ಸದಸ್ಯ ಸಂಘಗಳ ಆಡಳಿತ ಮಂಡಳಿ ನಿರ್ದೇಶಕರು ಹಾಗೂ ಅಧಿಕಾರಿ ವರ್ಗದವರ ಬೆಂಬಲ, ಪ್ರೋತ್ಸಾಹವನ್ನು ನಾನು ಸಂದರ್ಭದಲ್ಲಿ ಸ್ಮರಿಸುತ್ತಾ ಅವರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

- **ಸಹಕಾರ ಕ್ಷೇತ್ರದಲ್ಲಿ ಯುವಜನರ ಪಾಲ್ಗೊಳ್ಳುವಿಕೆ ಬಗ್ಗೆ ನಿಮ್ಮ ಅನಿಸಿಕೆ...**

118 ವರ್ಷಗಳ ಇತಿಹಾಸವಿರುವ ಭಾರತದ ಸಹಕಾರ ಚಳವಳಿ ನಿಂತ ನೀರಾಗದೆ ಕ್ರಿಯಾಶೀಲ ಚಳುವಳಿಯಾಗಿ ಆರ್ಥಿಕ ಅಗತ್ಯಗಳನ್ನು ಬಯಸಿ ಬರುವ ಸದಸ್ಯರುಗಳಿಗೆ ಎಲ್ಲಾ ರೀತಿಯ ನೆರವು ನೀಡಿ ಅವರನ್ನು ಆರ್ಥಿಕವಾಗಿ ಸ್ವಾವಲಂಬಿಗಳನ್ನಾಗಿ ಮಾಡುವಲ್ಲಿ ಸಹಕಾರ ಕ್ಷೇತ್ರ ಸದಾ ಮುಂದಿದೆ. ಜನತೆ ಸಹಕಾರ ತತ್ವಗಳಲ್ಲಿ ವಿಶ್ವಾಸ, ನಂಬಿಕೆ ಇರಿಸಿ ಬದ್ಧತೆಯಿಂದ ಕ್ಷೇತ್ರದಲ್ಲಿ ತೊಡಗಿಸಿಕೊಂಡರೆ, ಸಹಕಾರ ಚಳುವಳಿ ಹೆಮ್ಮರವಾಗಿ ಬೆಳೆದು ಕೋಟ್ಯಂತರ ಜನರಿಗೆ ನೆರವಾಗಲಿದೆ. ಹೆಚ್ಚಿನ ಸಂಖ್ಯೆಯ ಯುವಜನರು, ವಿಶೇಷವಾಗಿ ಮಹಿಳೆಯರು ತೊಡಗಿಸಿಕೊಳ್ಳಲು ಮನವಿ ಮಾಡುತ್ತೇನೆ.



# ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಮಹಾಮಂಡಳ ಕಟ್ಟಡ ನಿರ್ಮಾಣ ಹಂತದ ಆಡಳಿತ ಮಂಡಳಿಯ





ಪತ್ತಿನ ಸಹಕಾರ ಮಹಾಮಂಡಳದ ನೂತನ ಕಟ್ಟಡ ನಿರ್ಮಾಣಕ್ಕೆ ಭೂಮಿ ಪೂಜೆ










ನಿರ್ಮಾಣ ಹಂತದ ಕಟ್ಟಡ ವೀಕ್ಷಣೆ ಮಾಡುತ್ತಿರುವ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರು

# ಸಂಘಗಳ ಮಹಾಮಂಡಳ ನಿ., ಬೆಂಗಳೂರು ಹಲವು ಹೆಜ್ಜೆ ಗುರುತುಗಳು ದಕ್ಷ ಮಾರ್ಗದರ್ಶನ









ನೂತನ ಕಟ್ಟಡ ಪೂಜಾ ಕೈಕರ್ಯ



ಸಹಕಾರ ಸಚಿವರಿಗೆ ಸ್ವಾಗತ



ನೂತನ ಕಟ್ಟಡ ಉದ್ಘಾಟನೆ



ಸಂಸ್ಥಾಪಕ ಅಧ್ಯಕ್ಷರಾದ ಬಿ.ಎಲ್. ಲಕ್ಕೇಗೌಡರ ಪ್ರತಿಮೆಗೆ ಗಣ್ಯರಿಂದ ಪುಷ್ಪ ನಮನ





ಗಣ್ಯರಿಂದ ಜ್ಯೋತಿ ಬೆಳಗಿಸುವ ಮೂಲಕ ನೂತನ ಕಟ್ಟಡ ಉದ್ಘಾಟನಾ ಸಮಾರಂಭಕ್ಕೆ ಚಾಲನೆ






ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಸಹಕಾರ ವಿಶೇಷ ಸಂಚಿಕೆ ಬಿಡುಗಡೆ



ಗಣ್ಯರಿಗೆ ಸನ್ಮಾನ – ಗೌರವ ಅರ್ಪಣೆ



ನೂತನ ಕಟ್ಟಡ ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಂಡಿದ್ದ ಸಹಕಾರಿಗಳು

# ಸಹಕಾರಿ ಶಿಕ್ಷಣ ಮತ್ತು ತರಬೇತಿ : ಪರಿಣಾಮಕಾರಿ ಅನುಷ್ಠಾನಕ್ಕೆ ಕೆಲವು ಸೂತ್ರಗಳು



ಯಶವಂತ ಡೋಂಗ್ರೆ
ಉಪಕುಲಪತಿ,
ಚಾಣಕ್ಯ ವಿಶ್ವವಿದ್ಯಾಲಯ,
ಬೆಂಗಳೂರು



ಯಶವಂತ ಡೋಂಗ್ರೆ ಅವರು ಸಹಕಾರ ಕ್ಷೇತ್ರದ ಬೆಳವಣಿಗೆಯ ಚಿಂತಕರಲ್ಲಿ ಒಬ್ಬರಾಗಿದ್ದಾರೆ. ಮೈಸೂರು ವಿಶ್ವವಿದ್ಯಾಲಯ ಬೋಧನೆಯಲ್ಲಿ ಉನ್ನತ ಹುದ್ದೆಯಲ್ಲಿದ್ದು, ವಿಶ್ವವಿದ್ಯಾಲಯದ ಕುಲಸಚಿವರಾಗಿದ್ದವರು. ಪ್ರಸ್ತುತ ಚಾಣಕ್ಯ ವಿವಿ ಉಪಕುಲಪತಿಗಳಾಗಿದ್ದಾರೆ. ಡೋಂಗ್ರೆ ಅವರು ಸಹಕಾರ ವ್ಯವಸ್ಥೆ ಕುರಿತು ಹಲವಾರು ಸಭೆ, ಸಮ್ಮೇಳನಗಳಲ್ಲಿ ಪಾಲ್ಗೊಂಡು ಹಲವಾರು ಪ್ರಬಂಧಗಳನ್ನು ಮಂಡಿಸಿದ್ದಾರೆ. ಸಹಕಾರ ಶಿಕ್ಷಣ, ತರಬೇತಿ ಮತ್ತು ಪ್ರಚಾರ ಅವರ ಆಸ್ತೆ ವಿಷಯವಾಗಿದೆ.

ಸಹಕಾರ ವ್ಯವಸ್ಥೆ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಸಹಕಾರ ಶಿಕ್ಷಣ, ತರಬೇತಿ ಅಗತ್ಯ. ಕಾಲಕಾಲಕ್ಕೆ ಆಧುನಿಕ ತಂತ್ರಜ್ಞಾನ ವ್ಯವಸ್ಥೆ ಅಳವಡಿಕೆ ಜೊತೆಗೆ ಸಹಕಾರ ಸಂಘಗಳಲ್ಲಿ ತೊಡಗಿಸಿಕೊಂಡಿರುವವರು ವೃತ್ತಿಪರರಾಗಿ ಕಾರ್ಯನಿರ್ವಹಿಸಲು ಹಾಗೂ ಸಹಕಾರಿಗಳಲ್ಲಿ, ಸಿಬ್ಬಂದಿಗಳಲ್ಲಿ ಸಹಕಾರ ಜಾಗೃತಿ ಮೂಡಿಸಲು ಪ್ರಚಾರ ಮಾಧ್ಯಮವಾಗಿ ಸಹಕಾರ ನಿಯತಕಾಲಿಕೆಗಳು ಪೂರಕವಾಗಿವೆ ಹಾಗೂ ಪ್ರೇರಕವಾಗಿವೆ. ಸಹಕಾರ ಸಂಸ್ಥೆಗಳಲ್ಲಿ ತೊಡಗಿಸಿಕೊಂಡಿರುವ ಜನರು ಬದ್ಧತೆ, ದಕ್ಷತೆ, ವಿಶ್ವಾಸಾರ್ಹತೆಯ ಜೊತೆಗೆ ಪಾರದರ್ಶಕ ಆಡಳಿತ ನೀಡಿ ಚಳವಳಿಯನ್ನು ಬಲಪಡಿಸಿ ಸಹಕಾರ ವಲಯವನ್ನು ಸದೃಢಗೊಳಿಸಬೇಕಿದೆ.

ಶಿಕ್ಷಣ, ತರಬೇತಿ ಮತ್ತು ಮಾಹಿತಿ ಒಂದು ಪ್ರಮುಖ ಸಹಕಾರಿ ತತ್ವವಾಗಿರುವುದು ನಮಗೆಲ್ಲ ತಿಳಿದ ವಿಷಯ.ಈ ತತ್ವವು ಸಹಕಾರಿ ಚಳುವಳಿಯ ಆರಂಭದಲ್ಲಿ ರಾಕ್‌ಡೇಲ್ ಗುಂಪು ರಚಿಸಿದ ಪ್ರಾಥಮಿಕ ತತ್ವಗಳಲ್ಲಿ ಒಂದಾಗಿದ್ದು, ಇಂದಿಗೂ ಸಹಕಾರಿ ತತ್ವಗಳ ಭಾಗವಾಗಿ ಉಳಿದಿದೆ. "ಸಹಕಾರಿ ಸಂಸ್ಥೆಗಳು ತಮ್ಮ ಸದಸ್ಯರು, ಚುನಾಯಿತ ಪ್ರತಿನಿಧಿಗಳು, ವ್ಯವಸ್ಥಾಪಕರು ಮತ್ತು ಸಿಬ್ಬಂದಿಗಳಿಗೆ ಶಿಕ್ಷಣ ನೀಡುವುದರ ಮೂಲಕ ಅವರುಗಳು ಸಹಕಾರಿ ಮಾದರಿಯನ್ನು ಸರಿಯಾಗಿ ಅರಿಯಲು ಮತ್ತು ತನ್ಮೂಲಕ ತಮ್ಮ ಸಹಕಾರಿ ಸಂಘಗಳ ಉತ್ತಮ ಅಭಿವೃದ್ಧಿಗೆ ಪೂರಕವಾಗಿ ಮತ್ತು ಪರಿಣಾಮಕಾರಿಯಾಗಿ ಸಹಕಾರಿ ಸಂಘದ ಚಟುವಟಿಕೆಗಳಲ್ಲಿ ಭಾಗಿವಹಿಸುವಂತೆ ಮಾಡುತ್ತವೆ. ಸಾರ್ವಜನಿಕರಿಗೆ ಅದರಲ್ಲೂ ಯುವಜನತೆ ಮತ್ತು ಅಭಿಪ್ರಾಯ ನಿರೂಪಕ ವರ್ಗದವರಿಗೆ (ಒಪೀನಿಯನ್ ಮೇಕರ್ಸ್) ಸರಿಯಾದ ಮಾಹಿತಿಯನ್ನು ಕ್ಲುಪ್ತವಾಗಿ ನೀಡುವುದರ ಮೂಲಕ ಅವರುಗಳಿಗೆ ಸಹಕಾರಿ ಮಾದರಿಯ ಉಪಯೋಗಗಳನ್ನು ಪರಿಚಯಿಸುತ್ತವೆ" ಎಂದು ಅಂತಾರಾಷ್ಟ್ರೀಯ ಸಹಕಾರಿ ಒಕ್ಕೂಟವು ತನ್ನ ಸಹಕಾರಿ ತತ್ವಗಳ ಅನನ್ಯತೆಯ ನಿರೂಪಣೆಯಲ್ಲಿ (ಸ್ಟೇಟ್‌ಮೆಂಟ್ ಆಫ್ ಕೋಆಪರೇಟಿವ್ ಐಡೆಂಟಿಟಿ) ತಿಳಿಸಿರುವುದನ್ನು ಗಮನಿಸಬಹುದು. ಆದುದರಿಂದ ಸಹಕಾರಿ ಶಿಕ್ಷಣ, ತರಬೇತಿ ಮತ್ತು ಮಾಹಿತಿ ಹಂಚಿಕೆ ಸಹಕಾರಿ ಸಂಘಟನೆಗಳ ಪ್ರಮುಖ ಚಟುವಟಿಕೆಗಳಲ್ಲಿ ಒಂದಾಗಿದೆ.

ಶಿಕ್ಷಣವು ಹೆಚ್ಚಾಗಿ ಸದಸ್ಯರಿಗಾಗಿ ಮುಖ್ಯವಾಗಿದ್ದು ಇದರ ಒತ್ತು ಸಹಕಾರಿ ತತ್ವಗಳು ಮತ್ತು ಮೌಲ್ಯಗಳ ಬಗ್ಗೆ ಅರಿವು ಮೂಡಿಸುವುದು, ಸದಸ್ಯರ ಪಾತ್ರ ಮತ್ತು ಸಹಕಾರ ಸಂಘಗಳ ವಿವಿಧ ಕಾರ್ಯಚಟುವಟಿಕೆಗಳಲ್ಲಿ ಅವರು ಭಾಗವಹಿಸಲು ಅಗತ್ಯವಾದ ಜ್ಞಾನವನ್ನು ಒದಗಿಸುವುದು ಮತ್ತು ಕಾಲದಿಂದ ಕಾಲಕ್ಕೆ ಬದಲಾಗುವ

**ಅವಕಾಶವಿರುವಲ್ಲಿ ಸದಸ್ಯ ಚಟುವಟಿಕೆ ಕೊಠಡಿಗಳನ್ನು ಸಹಕಾರಿ ಸಂಘದ ಮಟ್ಟದಲ್ಲಿ ಹೊಂದುವುದು ಮತ್ತು ಸದಸ್ಯರು ತಮಗೆ ಸಮಯವಿದ್ದಾಗಲೆಲ್ಲ ಅಲ್ಲಿ ಕಲೆತು ಚರ್ಚಿಸಲು ಅನುವು ಮಾಡಿಕೊಡಬಹುದು ಮತ್ತು ಅಂತಹ ಕೊಠಡಿಗಳಲ್ಲಿ ಸಹಕಾರಿ ವಿಷಯಗಳ ಮಾಹಿತಿಗಳನ್ನು ನೀಡುವ ಪುಸ್ತಕಗಳು ಮತ್ತು ಇತರೆ ಬೋಧನಾ ವಸ್ತುಗಳನ್ನು ಇಡಬಹುದು.**

ಸಹಕಾರಿ ಆಂದೋಲನದ ಸಂರಚನೆ, ಜನರ ಅಗತ್ಯಗಳು, ಸರಕಾರದ ನೀತಿಗಳು, ಕಾನೂನುಗಳು ಇತ್ಯಾದಿಗಳ ಬಗ್ಗೆ ಆಯಾಕಾಲಕ್ಕೆ ಪ್ರಸ್ತುತವಾಗುವ ಮಾಹಿತಿಗಳನ್ನು ಒದಗಿಸುವುದಾಗಿರುತ್ತದೆ. ತರಬೇತಿಯು ಹೆಚ್ಚಾಗಿ ಚುನಾಯಿತ ಪ್ರತಿನಿಧಿಗಳು ಮತ್ತು ಸಿಬ್ಬಂದಿಗಳನ್ನು ಕೇಂದ್ರವಾಗಿಟ್ಟುಕೊಂಡಿರುತ್ತದೆ. ಚುನಾಯಿತ ಪ್ರತಿನಿಧಿಗಳು ಸಹಕಾರಿ ಸಂಘಗಳ ನಾಯಕತ್ವ ವಹಿಸುತ್ತಾರೆ. ಅವರುಗಳಿಗೆ ಸಂಘದ ವ್ಯವಸ್ಥಾಪನಕ್ಕೆ ಸಂಬಂಧಿಸಿದ ಜ್ಞಾನ ಮುಖ್ಯವಾಗುತ್ತದೆ.ಸಭೆಗಳನ್ನು ನಡೆಸುವುದು ಮತ್ತು ಅವುಗಳಲ್ಲಿ ಭಾಗವಹಿಸುವ ಕ್ರಮಗಳು, ನೀತಿಗಳನ್ನು ರಚಿಸುವ ಪ್ರಕ್ರಿಯೆ, ಸಂಘದ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಕಾರ್ಯಯೋಜನೆಗಳನ್ನು ರೂಪಿಸುವುದು ಮುಂತಾದುವುಗಳ ಬಗ್ಗೆ ತರಬೇತಿ ನೀಡಬೇಕಾಗುತ್ತದೆ. ಹಾಗೆಯೇ ಸಿಬ್ಬಂದಿ ವರ್ಗದವರು ತಳಹಂತದಲ್ಲಿ ಯೋಜನೆಗಳನ್ನು ಅನುಷ್ಠಾನಕ್ಕೆ ತರುವವರು ಮತ್ತು ಸದಸ್ಯರೊಂದಿಗೆ ನಿರಂತರ ಸಂಪರ್ಕದಲ್ಲಿರುವವರಾದುದರಿಂದ ಅವರುಗಳಿಗೆ ಸಹಕಾರಿ ವ್ಯವಹಾರ ಮತ್ತು ಇತರ ಚಟುವಟಿಕೆಗಳನ್ನು ಕುರಿತಂತೆ ತಾಂತ್ರಿಕ ಮತ್ತು ಕಾರ್ಯಾನುಷ್ಠಾನಕ್ಕೆ ಸಂಬಂಧಿಸಿದ ತರಬೇತಿ ಅಗತ್ಯವಾಗುತ್ತದೆ. ಉತ್ಪಾದನೆ, ವಿತರಣೆ, ಮಾರಾಟ, ಹಣಕಾಸು, ಲೆಕ್ಕ ಪತ್ರಗಳು ಹೀಗೆ ವಿವಿಧ ತಂತ್ರಜ್ಞಾನ ಮತ್ತು ಕಛೇರಿ ಕೆಲಸಗಳ ಕೌಶಲಗಳು ದೊರೆಯುವಂತಹ ತರಬೇತಿಗಳನ್ನು ಸಿಬ್ಬಂದಿಗೆ ನೀಡಬೇಕಾಗುತ್ತದೆ. ಇನ್ನು ಮಾಹಿತಿಯ ವಿನಿಮಯ ಮತ್ತು ವಿತರಣೆಯು ಹೆಚ್ಚಾಗಿ ಸಹಕಾರಿ ಸಂಘದ ಪರೋಕ್ಷ ಪಾಲುದಾರರನ್ನು ಕೇಂದ್ರೀಕರಿಸಿಕೊಂಡಿರುತ್ತದೆ. ಉದಾಹರಣೆಗೆ ಸರಕಾರದ ವಿವಿಧ ಅಂಗಗಳು, ಇತರೆ ಸಹಕಾರಿ ಸಂಘಗಳು ಅಥವ/ಮತ್ತು ಇತರೆ ವ್ಯವಹಾರ ಸಂಸ್ಥೆಗಳು ಹಾಗೂ ಸಾರ್ವಜನಿಕರು ಇವರುಗಳಿಗೆಲ್ಲ ಕಾಲದಿಂದ ಕಾಲಕ್ಕೆ ಸಹಕಾರಿ ಸಂಘದ ವಿವಿಧ ಚಟುವಟಿಕೆಗಳ ಬಗ್ಗೆ ಮಾಹಿತಿ ನೀಡುವ ಅಗತ್ಯವಿದೆ.ಇದು ಸಹಕಾರಿ ಪದ್ಧತಿಯಬಗ್ಗೆ ಸಾರ್ವಜನಿಕ ವಲಯದಲ್ಲಿ ಸರಿಯಾದ ತಿಳುವಳಿಕೆ ಮೂಡಿಸಲು ಮತ್ತು ಸಹಾನುಭೂತಿ ಮೂಡಿಸಲು ಕಾರಣವಾಗುವುದಲ್ಲದೆ, ಕಾಯಿದೆಗಳನ್ವಯ ವಿವಿಧ ಮೂಲಕಗಳಿಗೆ ನೀಡಬೇಕಾದ ಮಾಹಿತಿಗಳನ್ನು ಒದಗಿಸುತ್ತ, ಸಹಕಾರಿ ಸಂಘವು ಕಾಯಿದೆಗಳನ್ವಯ ಕಾರ್ಯನಿರ್ವಹಿಸುವಂತೆ ಮಾಡುವಲ್ಲಿ ಮುಖ್ಯವಾಗುತ್ತದೆ.

ಮೇಲಿನ ಅಗತ್ಯಗಳ ಹಿನ್ನೆಲೆಯಲ್ಲಿ ಗಮನಿಸಿದಾಗ ಸಹಕಾರಿ ಶಿಕ್ಷಣ, ತರಬೇತಿ ಮತ್ತು ಮಾಹಿತಿ ಹಂಚಿಕೆಗಳನ್ನು ನಿರಂತರವಾಗಿ ಮತ್ತು ಪರಿಣಾಮಕಾರಿಯಾಗಿ ನಿರ್ವಹಿಸಲು ಕಾರ್ಯಯೋಜನೆಯೊಂದು ಅಗತ್ಯವಾಗುತ್ತದೆ. ಈ ಕಾರ್ಯಯೋಜನೆಯನ್ನು ಅಲ್ಪಾವಧಿ, ಮಧ್ಯಮಾವಧಿ ಮತ್ತು ದೀರ್ಘಾವಧಿ ನೆಲೆಗಳಲ್ಲಿ ರಚಿಸಿಕೊಂಡು ಸಹಕಾರಿ ಸಂಘಟನೆಗಳು ಕಾರ್ಯನಿರ್ವಹಿಸಬೇಕಾಗುತ್ತದೆ. ಇಂತಹ ಕಾರ್ಯಯೋಜನೆಗೆ ಅನುವಾಗುವಂತೆ ಕೆಲವು ಸಾಧ್ಯತೆಗಳನ್ನು ಕೆಳಗಿನ ಪುಟಗಳಲ್ಲಿ ಹಂಚಿಕೊಳ್ಳಲಾಗಿದೆ.

**ಸದಸ್ಯರ ಹಂತದಲ್ಲಿ ಸಹಕಾರಿ ಶಿಕ್ಷಣ :** ಸಹಕಾರಿ ಶಿಕ್ಷಣವನ್ನು ಸದಸ್ಯರ ಶಿಕ್ಷಣ ಮತ್ತು ಸಾರ್ವಜನಿಕ ಶಿಕ್ಷಣ ಎಂದು ವಿಂಗಡಿಸಿ ಅನುಷ್ಠಾನಗೊಳಿಸುವ್ಯದರಿಂದ ಉತ್ತಮ ಫಲಿತಾಂಶ ನಿರೀಕ್ಷಿಸಿಬಹುದು. ಸದಸ್ಯರ ಶಿಕ್ಷಣವು ಈಗಾಗಲೇ ಸಂಘದ ಸದಸ್ಯರಾಗಿರುವವರಿಗಾಗಿದ್ದು, ಇದು ಸದಸ್ಯರಿಗೆ ಸಹಕಾರಿ ಆಂದೋಲನದ ಕುರಿತಂತೆ ಮತ್ತು ಸದಸ್ಯರ ನೆಲೆಯಲ್ಲಿ ತಮ್ಮ ಹಕ್ಕು ಮತ್ತು ಕರ್ತವ್ಯಗಳ ಬಗ್ಗೆ ತಿಳಿವಳಿಕೆ ನೀಡುವ ಮತ್ತು ಅವರನ್ನು ಸಕ್ರಿಯ ಸದಸ್ಯರನ್ನಾಗಿಸಲು ಪ್ರೋತ್ಸಾಹಿಸುವ ಪ್ರಕ್ರಿಯೆಯಾಗಿರಬೇಕು. ಆದುದರಿಂದ ಈ ಕೆಳಗಿನ ಅಂಶಗಳನ್ನು ಗಮನಿಸಬೇಕಾಗುತ್ತದೆ.

1. ಸಹಕಾರಿ ಶಿಕ್ಷಣವು ರಾಜ್ಯ (ಮಹಾಮಂಡಳ) ಅಥವ ಜಿಲ್ಲೆಯ (ಯೂನಿಯನ್) ಮಟ್ಟದಲ್ಲಿ ನಡೆದರೆ ಹೆಚ್ಚಿನ ಸದಸ್ಯರನ್ನು ತಲುಪುವುದು ಸಾಧ್ಯವಾಗುವುದಿಲ್ಲ. ಆದುದರಿಂದ ಸಾಧ್ಯವಾದಷ್ಟೂ ಸದಸ್ಯ ಶಿಕ್ಷಣವನ್ನು ಸ್ಥಳೀಯವಾಗಿ ಅಥವ ಪ್ರತಿ ಸಹಕಾರಿ ಸಂಘದ ಮಟ್ಟದಲ್ಲಿ ನಡೆಸುವುದು ಅಗತ್ಯ.
2. ಉಪನ್ಯಾಸಗಳು ಮತ್ತು ಕಾರ್ಯಾಗಾರ/ವಿಚಾರಸಂಕಿರಣಗಳ ಮಾದರಿಯಲ್ಲಿ ಸದಸ್ಯ ಶಿಕ್ಷಣವನ್ನು ನೀಡಬಹುದಾದರೂ, ಇವುಗಳ ಪರಿಣಾಮ ದೀರ್ಘಾವಧಿಯದಾಗಿರುವುದಿಲ್ಲ ಮತ್ತು ಎಲ್ಲ ಸದಸ್ಯರೂ ಈ ಮಾರ್ಗಗಳಿಂದ ಕಲಿಯುವುದು ಸಾಧ್ಯವಾಗುವುದಿಲ್ಲ. ಆದುದರಿಂದ ಸದಸ್ಯರ ಅಗತ್ಯಗಳ ಆಧಾರದಲ್ಲಿ ವಿವಿಧ ರೀತಿಯ ಕಾರ್ಯಕ್ರಮಗಳನ್ನು ಆಯೋಜಿಸಬೇಕಾಗುತ್ತದೆ.
3. ವರ್ಷದಲ್ಲಿ ಮೂರು ಅಥವ ನಾಲ್ಕು ಬಾರಿ ಸದಸ್ಯರು ಒಂದೆಡೆ ಸೇರುವಂತಹ ಕಾರ್ಯಕ್ರಮಗಳನ್ನು ಪ್ರತಿ ಸಹಕಾರಿ ಸಂಘದ ಮಟ್ಟದಲ್ಲಿ ಸಂಘಟಿಸುವುದರಿಂದ ಸದಸ್ಯ ಶಿಕ್ಷಣದ ಆಶಯಗಳನ್ನು ಸುಲಭವಾಗಿ ತಲುಪಬಹುದು.
4. ಸದಸ್ಯರ ಮಕ್ಕಳು ಮತ್ತು ಕುಟುಂಬದ ಸದಸ್ಯರು ಭಾಗವಹಿಸುವಂತಹ ಮನರಂಜನೆಯ ಅಥವ ಸ್ಪರ್ಧಾತ್ಮಕ ಕಾರ್ಯಕ್ರಮಗಳನ್ನು ಸಂಘಟಿಸಿ ಇಂತಹ ಕಾರ್ಯಕ್ರಮಗಳ ನಡುವೆ ಸದಸ್ಯರ ಜ್ಞಾನಾರ್ಜನೆಯು ಸಾಧ್ಯವಾಗುವಂತಹ ಅಂಶಗಳನ್ನು ಸೇರಿಸಿಕೊಳ್ಳುವುದು ಒಳ್ಳೆಯದು.
5. ಸಣ್ಣ ಸಣ್ಣ ಸಹಕಾರಿ ಸಂಘಗಳಾದರೆ ಎರಡು ಅಥವಾ ಮೂರು ಸಹಕಾರಿ ಸಂಘಗಳು ಒಟ್ಟಾಗಿ ತಮ್ಮ ಸದಸ್ಯರಿಗೆ ಶೈಕ್ಷಣಿಕ ಕಾರ್ಯಕ್ರಮಗಳನ್ನು ಏರ್ಪಡಿಸಬಹುದು.
6. ಪ್ರತಿ ಸಹಕಾರಿ ಸಂಘದಲ್ಲಿಯೂ ಸಹಕಾರಿ ತತ್ವ ಮತ್ತು ಮೌಲ್ಯಗಳನ್ನು ಬಿತ್ತರಿಸುವ ಬೋರ್ಡುಗಳು ಅಥವ ಫಲಕಗಳನ್ನು ಪ್ರದರ್ಶಿಸಬಹುದು.
7. ಅವಕಾಶವಿರುವಲ್ಲಿ ಸದಸ್ಯ ಚಟುವಟಿಕೆ ಕೊಠಡಿಗಳನ್ನು ಸಹಕಾರಿ ಸಂಘದ ಮಟ್ಟದಲ್ಲಿ ಹೊಂದುವುದು ಮತ್ತು ಸದಸ್ಯರು ತಮಗೆ ಸಮಯವಿದ್ದಾಗಲೆಲ್ಲ ಅಲ್ಲಿ ಕಲೆತು ಚರ್ಚಿಸಲು ಅನುವು ಮಾಡಿಕೊಡಬಹುದು ಮತ್ತು ಅಂತಹ ಕೊಠಡಿಗಳಲ್ಲಿ ಸಹಕಾರಿ ವಿಷಯಗಳ ಮಾಹಿತಿಗಳನ್ನು ನೀಡುವ ಪುಸ್ತಕಗಳು ಮತ್ತು ಇತರೆ ಬೋಧನಾ ವಸ್ತುಗಳನ್ನು ಇಡಬಹುದು.
8. ಇಂದಿನ ದಿನಗಳಲ್ಲಿ ಹೆಚ್ಚಿನವರು ಸ್ಮಾರ್ಟ್‌ಫೋನ್‌ಗಳನ್ನು ಹೊಂದಿರುವುದರಿಂದ ಮತ್ತು ಸಾಮಾಜಿಕ ಜಾಲತಾಣಗಳನ್ನು ಬಳಸುವುದರಿಂದ – ವಾಟ್ಸಪ್, ಫೇಸ್‌ಬುಕ್ ಮುಂತಾದುವುಗಳು

ಹಾಗೂ ಇಮೇಲ್‌ಗಳ ಮೂಲಕವೂ ಸದಸ್ಯರಿಗೆ ಆಗಿಂದಾಗ್ಗೆ ಉಪಯುಕ್ತ ಮಾಹಿತಿಗಳನ್ನು ನೀಡಬಹುದು.

9. ವಿವಿದೆಡೆಗಳಲ್ಲಿ ನಡೆಯುವ ಸಹಕಾರಿ ಆಂದೋಲನವನ್ನು ಕುರಿತ ಕಾರ್ಯಕ್ರಮಗಳಬಗ್ಗೆ ಮಾಹಿತಿಯನ್ನು ಸದಸ್ಯರಿಗೆ ನೀಡುತ್ತ ಅವರನ್ನು ಅಂತಹ ಕಾರ್ಯಕ್ರಮಗಳಲ್ಲಿ ಭಾಗವಹಿಸುವಂತೆ ಪ್ರೋತ್ಸಾಹಿಸಬಹುದು.

**ಸಾರ್ವಜನಿಕ ನೆಲೆಯ ಸಹಕಾರಿ ಶಿಕ್ಷಣ :** ಸದಸ್ಯರಿಗೆ ಶಿಕ್ಷಣ ನೀಡುವಂತೆಯೇ ಭಾವೀ ಸದಸ್ಯರಿಗೆ ಮತ್ತು ಸದಸ್ಯರಲ್ಲದ ಸಾರ್ವಜನಿಕರಿಗೆ ಕೂಡ ಸಹಕಾರಿ ಶಿಕ್ಷಣ ದೊರೆಯುವಂತೆ ಮಾಡುವುದು ಸಹಕಾರಿ ಆಂದೋಲನದ ಸುಸ್ಥಿರತೆಯ ದೃಷ್ಟಿಯಿಂದ ಮುಖ್ಯವಾಗುತ್ತದೆ. ಆದುದರಿಂದ ಈ ಕೆಳಗಿನ ಪ್ರಯತ್ನಗಳತ್ತ ಗಮನಹರಿಸಬಹುದು.

1. ಸಾರ್ವಜನಿಕ ನೆಲೆಯ ಸಹಕಾರಿ ಶಿಕ್ಷಣದ ಚಟುವಟಿಕೆಗಳನ್ನು ಬಹುತೇಕ ಮಹಾಮಂಡಳಗಳು ಮತ್ತು ಜಿಲ್ಲಾ ಮಟ್ಟದ ಯೂನಿಯನ್‌ಗಳು ನಡೆಸಬೇಕಾಗುತ್ತದೆ. ಈ ಕುರಿತಂತೆ ಒಂದು ನಿರ್ದಿಷ್ಟ ಕಾರ್ಯ ಯೋಜನೆಯನ್ನು ಮಹಾಮಂಡಳಗಳು ರಚಿಸಿಕೊಳ್ಳಬೇಕು.
2. ಆಗಾಗ್ಗೆ ಪತ್ರಿಕೆಗಳು ಮತ್ತು ಇತರೆ ಮಾಧ್ಯಮಗಳ ಮೂಲಕ ಸಹಕಾರಿ ಸಂಘಟನೆಗಳ ಬಗ್ಗೆ ಮಾಹಿತಿಗಳನ್ನು ಮತ್ತು ಶೈಕ್ಷಣಿಕ ಬರಹಗಳನ್ನು ಜನರಿಗೆ ತಲುಪಿಸಲು ಪ್ರಯತ್ನಿಸಬೇಕು.
3. ಟೆಲಿವಿಷನ್ ಒಂದು ಅತ್ಯಂತ ಪರಿಣಾಮಕಾರಿ ಮಾಧ್ಯಮ ವಾದುದರಿಂದ ಕಾಲಕಾಲಕ್ಕೆ ಸಹಕಾರಿ ಆಂದೋಲನದ ವಿಷಯಗಳು, ಸಹಕಾರಿ ಸಂಘಗಳ ಕುರಿತಂತೆ ಡಾಕ್ಯುಮೆಂಟರಿಗಳು, ಜಾಗತಿಕ ಸಹಕಾರಿ ಚಳುವಳಿಯ ವಿದ್ಯಮಾನಗಳು ಇವುಗಳನ್ನೊಳಗೊಂಡ ಕಾರ್ಯಕ್ರಮಗಳನ್ನು ಈ ಮಾಧ್ಯಮದ ಮೂಲಕ ಸಾರ್ವಜನಿಕರಿಗೆ ತಲುಪಿಸಲು ಪ್ರಯತ್ನಿಸಬೇಕು.
4. ವಿಶೇಷವಾಗಿ ಯುವಕರು ಮತ್ತು ಮಹಿಳೆಯರನ್ನು ಗಮನದಲ್ಲಿರಿಸಿ ಕೊಂಡು ವಿವಿಧ ಸಂಘ ಸಂಸ್ಥೆಗಳು ಮತ್ತು ಶಿಕ್ಷಣ ಸಂಸ್ಥೆಗಳ ಮಟ್ಟದಲ್ಲಿ ಸಹಕಾರಿ ವಿಷಯಗಳನ್ನು ಕೇಂದ್ರವಾಗಿಟ್ಟುಕೊಂಡು ಕಾರ್ಯಕ್ರಮಗಳನ್ನು ನಡೆಸಬೇಕು.
5. ಸಾಮಾನ್ಯ ಪಠ್ಯದಲ್ಲಿ ಸಹಕಾರಿ ವಿಷಯಗಳನ್ನು ಸೇರಿಸಲು ಶಿಕ್ಷಣ ಇಲಾಖೆ ಮತ್ತು ವಿಶ್ವವಿದ್ಯಾನಿಲಯಗಳೊಂದಿಗೆ ಸಂವಹನ ನಡೆಸಿ ಪ್ರಯತ್ನಿಸಬಹುದು. ಇದು ಸ್ವಲ್ಪ ಕಠಿಣವಾದ ಪ್ರಕ್ರಿಯೆಯಾಗಿದ್ದು ಸುಲಭವಾಗಿ ನೆರವೇರಲಾರದು. ಆದರೂ ನಿರಂತರ ಪ್ರಯತ್ನ ಅಗತ್ಯ.
6. ಶಾಲಾ ಕಾಲೇಜು ಮಟ್ಟದಲ್ಲಿ ಸಂಸ್ಥೆಯ ಎಲ್ಲ ಸದಸ್ಯರೂ, ಅಂದರೆ ವಿದ್ಯಾರ್ಥಿಗಳು, ಬೋಧಕ ವರ್ಗದವರು ಮತ್ತು ಬೋಧಕೇತರ ಸಿಬ್ಬಂದಿಗಳು ಸದಸ್ಯರಾಗಿರುವಂತಹ ವಿವಿಧೋದ್ದೇಶ ಸಹಕಾರಿ ಸಂಘಗಳನ್ನು ಸ್ಥಾಪಿಸುವುದರಿಂದ, ಎಲ್ಲರೂ ಭಾಗವಹಿಸುವ ಪ್ರಕ್ರಿಯೆಯ ಮೂಲಕ ಸಹಕಾರದ ಪ್ರಾಥಮಿಕ ಅಂಶಗಳನ್ನು ಅರಿಯುವುದು ಸಾಧ್ಯವಾಗುತ್ತದೆ.
7. ಸಾರ್ವಜನಿಕರ ಆಸಕ್ತಿಯ ವಿಷಯಗಳನ್ನು ಕುರಿತಂತೆ ಮತ್ತು ಸಾರ್ವಜನಿಕರ ಕುಂದು ಕೊರತೆಗಳನ್ನು ಕುರಿತಂತೆ ಸಹಕಾರಿ ಸಂಘಗಳು ಕಾಲದಿಂದ ಕಾಲಕ್ಕೆ ಸಹಾಯ ಮಾಡುವುದು ಮತ್ತು ಅಂತಹ ವಿಷಯಗಳನ್ನು ಮುನ್ನೆಲೆಗೆ ತಂದು ಸರಕಾರ ಮತ್ತು ಸಂಬಂಧಿತ ಸಂಸ್ಥೆಗಳ ಗಮನ ಸೆಳೆಯುವ ಕೆಲಸಗಳನ್ನು ಸಹಕಾರಿ ಮಹಾಮಂಡಳ/ಯೂನಿಯನ್‌ಗಳು ನಡೆಸಬಹುದು.

**ಚುನಾಯಿತ ಪ್ರತಿನಿಧಿಗಳಿಗೆ ಸಹಕಾರಿ ತರಬೇತಿ :** ಚುನಾಯಿತ ಪ್ರತಿನಿಧಿಗಳು ಸಹಕಾರ ಸಂಘದ ಆಡಳಿತ ಮಂಡಳಿಯ ಸದಸ್ಯರಾಗಿ, ಉಪಸಮಿತಿಗಳ ಅಧ್ಯಕ್ಷರು ಅಥವ ಸದಸ್ಯರಾಗಿ ಮತ್ತು ಕಾಲಕ್ರಮದಲ್ಲಿ ಸಂಘದ ಉಪಾಧ್ಯಕ್ಷ ಅಥವ ಅಧ್ಯಕ್ಷರಾಗಿ ಕೆಲಸ ನಿರ್ವಹಿಸಬೇಕಾದವರು. ಸಹಜವಾಗಿಯೇ ಇವರುಗಳಿಗೆ ಸಹಕಾರಿ ತತ್ವ, ಮೌಲ್ಯ ಮತ್ತಿತರ ವಿಷಯಗಳಷ್ಟೇ ಮುಖ್ಯವಾಗಿ ಆಡಳಿತಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ಜ್ಞಾನವಿರಬೇಕಾಗುತ್ತದೆ. ಆದುದರಿಂದ ಶಿಕ್ಷಣದಷ್ಟೇ ಮುಖ್ಯವಾಗಿ ತರಬೇತಿಯೂ ಇವರುಗಳಿಗೆ ಅಗತ್ಯವಾಗುತ್ತದೆ. ಚುನಾಯಿತ ಪ್ರತಿನಿಧಿಗಳ ತರಬೇತಿಯ ಕುರಿತಂತೆ ಈ ಕೆಳಗಿನ ಅಂಶಗಳನ್ನು ಅಳವಡಿಸಿಕೊಳ್ಳಬಹುದು.

1. ರಾಜ್ಯ ಮತು ಜಿಲ್ಲಾ ಮಟ್ಟದಲ್ಲಿ ಹಲವು ಸಹಕಾರಿ ಸಂಘಗಳ ಆಡಳಿತ ಮಂಡಳಿಯ ಸದಸ್ಯರನ್ನು ಒಟ್ಟುಗೂಡಿಸಿ ತರಬೇತಿ ಕಾರ್ಯಕ್ರಮಗಳನ್ನು ನಡೆಸಬಹುದು. ಈ ತರಬೇತಿಗಳು ಮುಖ್ಯವಾಗಿ ಮೊದಲಬಾರಿಗೆ ಆಡಳಿತ ಮಂಡಳಿಯ ಸದಸ್ಯರಾದವರನ್ನು ಗಮನದಲ್ಲಿರಿಸಿಕೊಂಡು ನಡೆಸಬೇಕು. ಆಡಳಿತ ಮಂಡಳಿಯ ಸದಸ್ಯರ ಹಕ್ಕುಗಳು ಮತ್ತು ಕರ್ತವ್ಯಗಳು, ಸಭೆಗಳಲ್ಲಿ ಭಾಗವಹಿಸುವ ಪ್ರಕ್ರಿಯೆ, ಕಾಯಿದೆಗಳ ಮುಖ್ಯ ಅಂಶಗಳು ಮುಂತಾದುಗಳು ಈ ತರಬೇತಿಗಳಲ್ಲಿ ಮುಖ್ಯ ವಿಷಯಗಳಾಗಬೇಕು.
2. ಸಹಕಾರಿ ಅನನ್ಯತೆಗೆ ಬದ್ಧರಾಗಿದ್ದುಕೊಂಡೇ ಸಂಘದ ವ್ಯವಹಾರವನ್ನು ನಡೆಸುವ ವಿಧಿವಿಧಾನಗಳ ಬಗ್ಗೆ ಈ ತರಬೇತಿಗಳಲ್ಲಿ ವಿಶೇಷ ಗಮನಹರಿಸಬೇಕು.
3. ಇಂತಹ ತರಬೇತಿಗಳಲ್ಲಿ ಸರಕಾರದ ಅಧಿಕಾರಿಗಳು ಮತ್ತು ಈಗಾಗಲೇ ಸಹಕಾರಿ ಸಂಸ್ಥೆಗಳ ಆಡಳಿತದಲ್ಲಿ ದೀರ್ಘ ಅನುಭವಹೊಂದಿರುವ ಸಹಕಾರಿ ನಾಯಕರುಗಳನ್ನು ಸಂಪನ್ಮೂಲ ವ್ಯಕ್ತಿಗಳನ್ನಾಗಿ ಆಹ್ವಾನಿಸುವುದು ಒಳ್ಳೆಯದು.
4. ಚುನಾಯಿತ ಪ್ರತಿನಿಧಿಗಳು ಆಗಿಂದಾಗ್ಗೆ ಕೆಲವು ಯಶಸ್ವಿ ಸಹಕಾರಿ ಸಂಘಗಳಿಗೆ ಭೇಟಿಕೊಟ್ಟು ಅಲ್ಲಿಯ ಆಡಳಿತದ ವಿವಿಧ ವಿಷಯಗಳನ್ನು ಖುದ್ದಾಗಿ ಗಮನಿಸುವ ಮೂಲಕ ಅಗತ್ಯ ಜ್ಞಾನ ಪಡೆಯುವಂತೆಯೂ ಕಾರ್ಯಕ್ರಮಗಳನ್ನು ಸಂರಚಿಸಬಹುದು.
5. ಕೆಲವು ಸಹಕಾರಿ ವ್ಯವಸ್ಥಾಪನ ಸಂಸ್ಥೆಗಳು ಮತ್ತು ಐಐಎಂ ನಂತಹ ಸಂಸ್ಥೆಗಳು ಕೂಡ ಆಗಾಗ್ಗೆ ವ್ಯವಹಾರ ಸಂಸ್ಥೆಗಳ ವ್ಯವಸ್ಥಾಪನವನ್ನು ಕುರಿತಂತೆ ಅಲ್ಪಾವಧಿ ಕಾರ್ಯಕ್ರಮಗಳನ್ನು ನಡೆಸುತ್ತಿರುತ್ತವೆ. ಇಂತಹ ಕಾರ್ಯಕ್ರಮಗಳಲ್ಲಿ ಭಾಗವಹಿಸುವಂತೆ ಚುನಾಯಿತ ಸದಸ್ಯರನ್ನು ಉತ್ತೇಜಿಸಿ ಆ ಮೂಲಕವೂ ಉತ್ತಮ ತರಬೇತಿ ದೊರೆಯುವಂತೆ ಮಾಡಬಹುದು.

**ಸಿಬ್ಬಂದಿಗಳಿಗೆ ತರಬೇತಿ :** ಸಿಬ್ಬಂದಿ ತರಬೇತಿ ಒಂದು ನಿರಂತರ ಪ್ರಕ್ರಿಯೆ.ಸಿಬ್ಬಂದಿಗಳು ಪ್ರತಿನಿತ್ಯ ನಡೆಸುವ ಹಲವು ಕೆಲಸಕಾರ್ಯಗಳಿಗೆ ಸಂಬಂಧಿಸಿದಂತೆ ಬದಲಾವಣೆಗಳು ಆಗುತ್ತಲೇ ಇರುತ್ತವೆ.

ಆದುದರಿಂದ ಅವರುಗಳಿಗೆ ಬೇರೆ ಬೇರೆ ಕೌಶಲಗಳ ಅಗತ್ಯವಿರುತ್ತದೆ. ಇದನ್ನು ಮನಗಂಡು ಬದಲಾಗುತ್ತಿರುವ ಪರಿಸ್ಥಿತಿಗೆ ಹೊಂದಿಕೊಳ್ಳಲು ಅನುವಾಗುವ ನಿಟ್ಟಿನಲ್ಲಿ ಸಿಬ್ಬಂದಿ ತರಬೇತಿಯನ್ನು ನಡೆಸುವ ಕುರಿತಂತೆ ಈ ಕೆಳಗಿನ ಮಾರ್ಗೋಪಾಯಗಳನ್ನು ಅಳವಡಿಸಿಕೊಳ್ಳಬಹುದು.

1. ಸಿಬ್ಬಂದಿ ತರಬೇತಿಯು ಮೂಲಭೂತವಾಗಿ ಸಹಕಾರಿ ಸಂಸ್ಥೆಯ ವ್ಯವಹಾರಗಳ ದೈನಂದಿನ ಕಾರ್ಯ ಚಟುವಟಿಕೆಗಳಿಗೆ ಸಂಬಂಧಿಸಿದ ಜ್ಞಾನ ಮತ್ತು ಕೌಶಲಗಳಿಗೆ ಸಂಬಂಧಿಸಿದುದಾಗಿರಬೇಕು.
2. ಹಾಗೆಯೇ ಸಹಕಾರಿ ಸಂಘಗಳು ಸಿಬ್ಬಂದಿಯು ಖಾಸಗಿ ಅಥವ ಸರಕಾರಿ ಸಂಸ್ಥೆಗಳ ಸಿಬ್ಬಂದಿಗಳಿಗಿಂತ ಹೇಗೆ ಭಿನ್ನ ಮತ್ತು ಅವರ ನಿರ್ದಿಷ್ಟ ಗುರಿ, ಹಕ್ಕು ಮತ್ತು ಬಾಧ್ಯತೆಗಳೇನು ಎನ್ನುವುದನ್ನು ತಿಳಿಸುವ ತರಬೇತಿಯೂ ಮುಖ್ಯವಾಗುತ್ತದೆ.
3. ಸಹಕಾರಿ ಸಂಸ್ಥೆಗಳು ವೃತ್ತಿಪರತೆಯನ್ನು ಸಾಧಿಸುವುದು ಬಹು ಮುಖ್ಯ. ಇದು ಸಾಧ್ಯವಾಗಬೇಕಾದರೆ ಸಿಬ್ಬಂದಿಗೆ ಆಯಾ ಕಾಲಘಟ್ಟದಲ್ಲಿ ಅನ್ವಯವಾಗುವ ಕೌಶಲಗಳಲ್ಲಿ ತರಬೇತಿ ಬಹು ಮುಖ್ಯ. ಈ ಹಿನ್ನೆಲೆಯಲ್ಲಿ ಗಮನಿಸಿದಾಗ ತಂತ್ರಜ್ಞಾನದ ಬಳಕೆ, ಕಾಯಿದೆ/ ಕಾನೂನುಗಳಲ್ಲಿನ ಬದಲಾವಣೆಗಳು, ವಿವಿಧ ವ್ಯವಹಾರಗಳಿಗೆ ಸಂಬಂಧಿಸದಂತೆ ಆಗುತ್ತಿರುವ ಬದಲಾವಣೆಗಳು, ಕಾಲದಿಂದ ಕಾಲಕ್ಕೆ ಬದಲಾಗುವ ಗ್ರಾಹಕರ/ಸದಸ್ಯರ ಅಗತ್ಯಗಳು ಮತ್ತು ಬೇಡಿಕೆಗಳು ಮುಂತಾದುವುಗಳ ಜೊತೆಗೆ ಸದಸ್ಯರೊಡನೆ ಸಂವಹನ ನಡೆಸುವ ಕುರಿತು ಕೂಡ ತರಬೇತಿ ಕಾರ್ಯಕ್ರಮಗಳು ಆಗತ್ಯ.
4. ಸಿಬ್ಬಂದಿ ತರಬೇತಿಯನ್ನು ನಿರ್ದಿಷ್ಟ ತರಬೇತಿ ಸಂಸ್ಥೆಗಳಲ್ಲಿ ನಡೆಸುವುದು ಹೆಚ್ಚು ಸೂಕ್ತ. ಸಿಬ್ಬಂದಿಗಳಿಗೆ ತರಬೇತಿ ಎನ್ನುವುದು ಕೇವಲ ಹೊಸತನ್ನು ಕಲಿಯುವ ಪ್ರಕ್ರಿಯೆ ಮಾತ್ರವಲ್ಲದೆ ತಮ್ಮ ದಿನನಿತ್ಯದ ಕೆಲಗಳ ಏಕತಾನತೆ ಮತ್ತು ಶ್ರಮದಿಂದ ಸ್ವಲ್ಪ ಕಾಲ ಬಿಡುಗಡೆ ಹೊಂದುವ ಮತ್ತು ಆ ಮೂಲಕ ಹೆಚ್ಚಿನ ಉತ್ತೇಜನ ಪಡೆಯುವ ಪ್ರಕ್ರಿಯೆ ಕೂಡ ಎನ್ನುವುದನ್ನು ನೆನಪಿಡಬೇಕು.
5. ಅಗತ್ಯದ ಸಂದರ್ಭಗಳಲ್ಲಿ ತರಬೇತುದಾರರನ್ನು / ಸಂಪನ್ಮೂಲ ವ್ಯಕ್ತಿಗಳನ್ನು ಸಂಘಕ್ಕೆ ಆಹ್ವಾನಿಸಿ ಕೆಲಸದ ವಾತಾವರಣದಲ್ಲಿಯೇ ಪ್ರಾಯೋಗಿಕ ತರಬೇತಿ ನೀಡುವ ಅಗತ್ಯವೂ ಇರುವುದನ್ನು ಗುರುತಿಸಿ ಅದರಂತೆ ತರಬೇತಿ ಕಾರ್ಯಕ್ರಮಗಳನ್ನು ಸಂಚರಿಸಬೇಕು.

**ವಿಸ್ತೃತ ನೆಲೆಯಲ್ಲಿ ಮಾಹಿತಿ ನೀಡುವಿಕೆ/ಹಂಚಿಕೊಳ್ಳುವಿಕೆ :** ಸಹಕಾರಿ ತತ್ವ 5ರಲ್ಲಿ ತಿಳಿಸಿರುವಂತೆ ಸಹಕಾರಿ ಸಂಘಟನೆಗಳು ಕೇವಲ ಶಿಕ್ಷಣ ಮತ್ತು ತರಬೇತಿಗಳು ಮಾತ್ರವಲ್ಲದೆ, ಮಾಹಿತಿ ನೀಡಿಕೆ ಅಥವ ಮಾಹಿತಿ ಹಂಚಿಕೊಳ್ಳುವಿಕೆಯ ಬಗ್ಗೆಯೂ ಕಾರ್ಯಪ್ರವೃತ್ತರಾಗಬೇಕು.ಮಾಹಿತಿ ನೀಡಿಕೆ/ಹಂಚಿಕೆಯು ಸಹಕಾರಿ ಸಂಸ್ಥೆಗಳ ಪರಿಸ್ಥಿತಿಯನ್ನು ಜನರಿಗೆ ತಿಳಿಸುವುದರ ಜೊತೆಗೆ ಸಹಕಾರಿ ಆಡಳಿತದಲ್ಲಿ ಪಾರದರ್ಶಕತೆಯನ್ನು ಸಾಧ್ಯವಾಗಿಸುವ ಮೂಲಕ ಸಾರ್ವಜನಿಕ ವಲಯದಲ್ಲಿ ಸಹಕಾರಿ ಸಂಸ್ಥೆಗಳ ಬಗ್ಗೆ ಉತ್ತಮ ಅಭಿಪ್ರಾಯ ಮೂಡುವಂತೆ ಮಾಡುವಲ್ಲಿ ಸಹಕರಿಸುತ್ತದೆ.ಈ ನಿಟ್ಟಿನಲ್ಲಿ ಕೆಳಗಿನ ಕೆಲವು ಉಪಕ್ರಮಗಳನ್ನು ಪ್ರಯತ್ನಿಸಬಹುದು.

1. ಪ್ರತಿ ಸಹಕಾರಿ ಸಂಘವು ತನ್ನ ಅಂತರ್ಜಾಲ ತಾಣವನ್ನು (ವೆಬ್‌ಸೈಟ್) ಹೊಂದುವುದು ಅತಿ ಅಗತ್ಯ. ಇದರಿಂದಾಗಿ ಸಾರ್ವಜನಿಕರಿಗೆ ಸಹಕಾರಿ ಸಂಘದ ಬಗ್ಗೆ ಹಲವಾರು ಮಾಹಿತಿಗಳು ಸುಲಭದಲ್ಲಿ ಲಭ್ಯವಾಗುತ್ತವೆ. ಇಂದಿನ ತಂತ್ರಜ್ಞಾನ ಯುಗದಲ್ಲಿ ಇಂತಹ ಜಾಲತಾಣಗಳು ಸಹಕಾರಿ ಸಂಸ್ಥೆಗಳು ಕಾಲಮಾನದ ಅಗತ್ಯಗಳಿಗನುಸಾರವಾಗಿ ಕೆಲಸ ನಿರ್ವಹಿಸುತ್ತಿವೆ ಎನ್ನುವ ಅಭಿಪ್ರಾಯವನ್ನು ಬಲಗೊಳಿಸುತ್ತದೆ.
2. ಜಾಲತಾಣಗಳು ಸದಸ್ಯರೊಡಗಿನ ಸಂವಹನಕ್ಕೂ ಮತ್ತು ಹಲವಾರು ವ್ಯವಹಾರ ಚಟುವಟಿಕೆಗಳಿಗೂ ಉತ್ತಮ ಸಾಧನವಾಗುತ್ತದೆ. ಸದಸ್ಯರಿಗೆ ತಿಳಿಸಬೇಕಾದ ಮಾಹಿತಿಗಳ ವಿವರಗಳನ್ನು ವೆಬ್‌ಸೈಟ್ ನಲ್ಲಿ ಪ್ರಕಟಿಸಿದರೆ, ತಮಗೆ ಅನುಕೂಲವಾದಾಗ ಸದಸ್ಯರು ಸಂಬಂಧಿತ ಮಾಹಿತಿಗಳನ್ನು ಪಡೆಯುವುದು ಸಾಧ್ಯವಾಗುತ್ತದೆ.
3. ಸಹಕಾರಿ ಸಂಘಗಳು ಕಾಲ ಕಾಲಕ್ಕೆ ತಮ್ಮ ಸಂಘದ ವ್ಯವಹಾರ, ಹಣಕಾಸು ಪರಿಸ್ಥಿತಿ, ತಾವು ಒದಗಿಸುತ್ತಿರುವ ವಿವಿಧ ಸೇವೆಗಳು ಮುಂತಾದುವುಗಳನ್ನು ಸಾರ್ವಜನಿಕರ ಅವಗಾಹನೆಗೆ ತರಬೇಕು. ದೊಡ್ಡ ದೊಡ್ಡ ಖಾಸಗಿ ಸಂಸ್ಥೆಗಳು ಪ್ರತಿ ಮೂರು ತಿಂಗಳಿಗೊಮ್ಮೆ ಇಂತಹ ಮಾಹಿತಿಯನ್ನು ತಮ್ಮ ಅಂತರ್ಜಾಲ ಜಾಲತಾಣಗಳ ಮೂಲಕವೂ ಮತ್ತು ಮಾಧ್ಯಮಗಳ ಮೂಲಕವೂ ಜನರಿಗೆ ತಲುಪಿಸುವುದನ್ನು ಕಾಣಬಹುದು. ಇಂತಹ ಪ್ರಯತ್ನಗಳು ಸಹಕಾರಿ ಸಂಸ್ಥೆಗಳಲ್ಲಿಯೂ ಚಾಲ್ತಿಗೆ ಬರಬೇಕು.
4. ಸಹಕಾರಿ ಸಂಸ್ಥೆಗಳು ಇತರ ಸಹಕಾರಿ ಸಂಸ್ಥೆಗಳೊಡನೆ ಮಾಹಿತಿ ವಿನಿಮಯ ಮಾಡಿಕೊಳ್ಳುವುದು ಕೂಡ ಬಹು ಅಗತ್ಯ. ಇದು ಸಹಕಾರಿ ಸಂಸ್ಥೆಗಳೊಡಗಿನ ಸಹಕಾರವನ್ನು ವೃದ್ಧಿಸುತ್ತದೆ ಮತ್ತು ಒಂದು ಸಹಕಾರಿ ಸಂಘವು ಇನ್ನೊಂದು ಸಹಕಾರಿ ಸಂಘದ ಅನುಭವಗಳಿಂದ ಹಲವು ವಿಷಯಗಳನ್ನು ಕಲಿಯುವುದು ಸಾಧ್ಯವಾಗುತ್ತದೆ.
5. ಸರಕಾರಿ ಸಂಸ್ಥೆಗಳು, ರಾಜ್ಯ ಮತ್ತು ರಾಷ್ಟ್ರೀಯ ಮಟ್ಟದ ಸಹಕಾರಿ ಸಂಸ್ಥೆಗಳು ಮತ್ತು ಅಂತಾರಾಷ್ಟ್ರೀಯ ಸಹಕಾರಿ ಸಂಘಟನೆಗಳೊಂದಿಗೆ ಕಾಲದಿಂದ ಕಾಲಕ್ಕೆ ಮಾಹಿತಿಯ ವಿನಿಮಯದಿಂದ ಕೂಡ ಸಹಕಾರಿ ಸಂಘಟನೆಗಳು ಹಲವು ವಿಷಯಗಳನ್ನು ತಿಳಿಯಲು ಮತ್ತು ತಮ್ಮ ಇರುವನ್ನು, ತಮ್ಮ ಅನನ್ಯತೆಯನ್ನು ಇತರರಿಗೆ ತಿಳಿಸಲು ಸಹಕಾರಿಯಾಗುತ್ತದೆ.

ಶಿಕ್ಷಣ, ತರಬೇತಿ ಮತ್ತು ಮಾಹಿತಿ ಇವು ಸಹಕಾರಿ ತತ್ವಗಳ ಭಾಗವಾಗಿದ್ದು, ಸಹಕಾರಿ ಸಂಘಗಳು ನಿರಂತರವಾಗಿ ನಡೆಸಿಕೊಂಡು ಬರಬೇಕಾದ ಚಟುವಟಿಕೆಯಾಗಿದೆ.ಇವುಗಳನ್ನು ಅಗತ್ಯಗಳ ಅನುಸಾರ, ಪೂರ್ಣ ತತ್ವಪರತೆಯಿಂದ, ಸರಿಯಾದ ಮಾರ್ಗ ಮತ್ತು ಸಾಂಸ್ಥಿಕ ಸ್ವರೂಪಗಳಲ್ಲಿ ಮಾಡುವುದು ಬಹು ಮುಖ್ಯ.ಶಿಕ್ಷಣ, ತರಬೇತಿ ಮತ್ತು ಮಾಹಿತಿ ವಿನಿಮಯಗಳು ತಮ್ಮದೇ ನಿರ್ದಿಷ್ಟ ಉದ್ದೇಶಗಳನ್ನು ಹೊಂದಿರುವುದನ್ನು ಮತ್ತು ಇವುಗಳು ಸಹಕಾರಿ ಸಂಸ್ಥೆಗಳ ವಿಭಿನ್ನ ಆಸಕ್ತ ಗುಂಪುಗಳ ಮೇಲೆ ಕೇಂದ್ರೀಕೃತವಾಗಿರುವುದನ್ನು ಮನಗಾಣಬೇಕು.ಹಾಗೆಯೇ ಶಿಕ್ಷಣ, ತರಬೇತಿ ಮತ್ತು ಮಾಹಿತಿ ವಿನಿಮಯಗಳು ಹೆಚ್ಚು ಪರಿಣಾಮಕಾರಿಯಾಗಿ ನಡೆಯಲು ಅಗತ್ಯವಾದ ಸಾಧನಗಳನ್ನು ಮತ್ತು ವಿಧಾನಗಳನ್ನು ಬಳಸುವತ್ತ ಸಹಕಾರಿ ಸಂಸ್ಥೆಗಳು ಕಾರ್ಯಪ್ರವೃತ್ತರಾಗಬೇಕು.

ಕೃಪೆ : ಸಹಕಾರ

# ಸಹಕಾರ ಸಂಸ್ಥೆಗಳ ಉತ್ತಮ ಕಾರ್ಯ ನಿರ್ವಹಣೆಯ ಗುಣಲಕ್ಷಣಗಳು (FEATURES OF GOOD GOVERNANCE)



**ಹೆಚ್.ಎಸ್. ನಾಗರಾಜಯ್ಯ ಕೆಸಿಎಸ್**
ಸಹಕಾರ ಸಂಘಗಳ ಅಪರ ನಿಬಂಧಕರು (ನಿವೃತ್ತ)
ಬೆಂಗಳೂರು

**ಸಹಕಾರ ಕ್ಷೇತ್ರವು ಬೃಹತ್ ಆಗಿ ಬೆಳೆದಿದೆ. ರಾಜ್ಯದಲ್ಲಿ ಸುಮಾರು 46,000 ಹಾಗೂ ದೇಶದಲ್ಲಿ ಸುಮಾರು 8.5ಲಕ್ಷ ಸಹಕಾರ ಸಂಘಗಳಿವೆ. ಗ್ರಾಮ ಮಟ್ಟದಿಂದ ರಾಷ್ಟ್ರಮಟ್ಟದ ವರೆಗೆ ಭಿನ್ನ ಕಾರ್ಯವ್ಯಾಪ್ತಿವುಳ್ಳ ಪ್ರಾಥಮಿಕ, ಮಾಧ್ಯಮಿಕ, ಒಕ್ಕೂಟ ಸಂಸ್ಥೆಗಳಿವೆ. ಸಹಕಾರ ಕ್ಷೇತ್ರವು ಲಕ್ಷಾಂತರ ನೌಕರರು, ಲಕ್ಷಾಂತರ ಸಮಿತಿ ಸದಸ್ಯರು ಹಾಗೂ ಕೋಟ್ಯಂತರ ಸದಸ್ಯರನ್ನು ಒಳಗೊಂಡಿದೆ.**

ಸಹಕಾರ ಸಂಸ್ಥೆಗಳ ಮೂಲ ಉದ್ದೇಶ ಸದಸ್ಯರ ಆರ್ಥಿಕ ಬದುಕನ್ನು ಹಸನು ಗೊಳಿಸುವುದು ಹಾಗೂ ಆರ್ಥಿಕ ಹಿತಾಸಕ್ತಿಯನ್ನು ಸಂರಕ್ಷಿಸುವುದು ಸಹಕಾರ ಸಂಸ್ಥೆಗಳು ಮೂಲತಃ ವ್ಯವಹಾರಿಕ ಕೇಂದ್ರಗಳು ಅವುಗಳು ಆರ್ಥಿಕ ಘಟಕಗಳಾಗಿ ಕಾರ್ಯನಿರ್ವಹಿಸುವುದು ಕಡ್ಡಾಯ ದೇಶದ ಆರ್ಥಿಕ ಚಟುವಟಿಕೆಗಳಲ್ಲಿ ಸಹಕಾರ ಸಂಸ್ಥೆಗಳು ಮತ್ತು ಸಹಕಾರ ಬ್ಯಾಂಕುಗಳ ಪಾಲು ಪ್ರಮುಖ ಹಾಗೂ ಮಹತ್ತರವಾದದ್ದು ಮಹತ್ತರವಾದದ್ದು ಸಹಕಾರ ಸಂಸ್ಥೆಗಳು ಪ್ರತಿಯೊಂದು ಕ್ಷೇತ್ರದಲ್ಲೂ ಹಾಸು ಹೊಕ್ಕಾಗಿದೆ ದೇಶದ ಮಿಶ್ರ ಆರ್ಥಿಕ ನೀತಿಯಲ್ಲಿ ಸಹಕಾರ ಸಂಸ್ಥೆಗಳ ಪಾತ್ರ ಹಿರಿದಾದದ್ದು ಮೇಲಾಗಿ ದೇಶದ ಆರ್ಥಿಕ ಪ್ರಗತಿಯಲ್ಲಿನ ಕೊಡುಗೆ ಗಣನೀಯವಾದದ್ದು. ಆಧುನಿಕ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯ ಸನ್ನಿವೇಶ ಮತ್ತು ಸಂದರ್ಭದಲ್ಲಿ ಸಹಕಾರ ಸಂಸ್ಥೆಗಳು ಮತ್ತು ಬ್ಯಾಂಕುಗಳು ಉತ್ತಮವಾಗಿ ಕಾರ್ಯನಿರ್ವಹಣೆ ಮಾಡಲು ಕೆಳಕಂಡ ಗುಣಲಕ್ಷಣಗಳನ್ನು ಹೊಂದುವುದು ಅವಶ್ಯ ಮತ್ತು ಅಗತ್ಯವೆನಿಸಿದೆ.

**ಪಾರದರ್ಶಕತೆ (transparency) :** ಸಹಕಾರ ಸಂಸ್ಥೆಗಳ ನೀತಿ ನಿರೂಪಣೆಗಳು ನಿಯಮಗಳು ಹಾಗೂ ವ್ಯವಹಾರಗಳು ಪಾರದರ್ಶಕತೆಯಿಂದ ಕೂಡಿರಬೇಕು ಸಂಸ್ಥೆಯ ಕಾರ್ಯ ಯೋಜನೆಗಳು ಸದಸ್ಯರಿಗೆ ಮನವರಿಕೆಯಾಗಿದ್ದು ಅವರ ವಿಶ್ವಾಸ ಮತ್ತು ನಂಬಿಕೆಗೆ ಅರ್ಹವಾಗಿರಬೇಕು ಸಂಸ್ಥೆಯ ಅಧಿಕಾರಿಯ ತರ ಹಾಗೂ ಅಧಿಕಾರಿ ಮತ್ತು ಸಿಬ್ಬಂದಿಗಳ ನಡವಳಿಕೆ ಮತ್ತು ಆಚರಣೆ, ಪಾರದರ್ಶಕತೆಯಿಂದ ಕೂಡಿರುವುದು ಉತ್ತಮ ಕಾರ್ಯ ನಿರ್ವಹಣೆಯ ಚಿಹ್ನೆಯಾಗಿದೆ ಯಾವ ಸಹಕಾರ ಸಂಸ್ಥೆಯಲ್ಲಿ ಪಾರದರ್ಶಕತೆ ಕಾಣುತ್ತವೆಯೋ ಆ ಸಂಸ್ಥೆಗಳು ಶ್ರೇಷ್ಠ ಹಾಗೂ ಉತ್ತಮವಾಗಿ ಕಾರ್ಯನಿರ್ವಹಿಸುತ್ತವೆ ಎಂಬುದು ಸಾಬೀತುಪಡಿಸುತ್ತದೆ ಈ ಅಂಶ ಸಹಕಾರ ಕ್ಷೇತ್ರದಲ್ಲಿ ಕಾರ್ಪೊರೇಟ್ ಕಂಪನಿಗಳ ಸ್ವರೂಪ ಮತ್ತು ಸ್ಪರ್ಶ ಒಳಗೊಳ್ಳುತ್ತದೆ ಈ ಗುಣಲಕ್ಷಣ ಸಹಕಾರ ಸಂಸ್ಥೆಗಳ ಮೇಲಿನ ನಂಬಿಕೆ ವಿಶ್ವಾಸ ವೃದ್ಧಿಸುವುದಲ್ಲದೆ ಸರ್ವತೋಮುಖ ಬೆಳವಣಿಗೆ ಮತ್ತು ವಿಕಾಸಕ್ಕೆ ನಾಂದಿಯಾಗುತ್ತದೆ.

**ಉತ್ತರದಾಯಿತ್ವ (accountability) :** ಸಹಕಾರ ಸಂಸ್ಥೆಗಳು /ಬ್ಯಾಂಕುಗಳು ಉತ್ತರದಾಯಿತ್ವದಿಂದ ಕೂಡಿರಬೇಕು ಸಂಸ್ಥೆಯಲ್ಲಿರುವ ಆಡಳಿತ ಮಂಡಳಿ ಹಾಗೂ ಸಿಬ್ಬಂದಿ ವರ್ಗ ಸದಸ್ಯರಿಗೆ ಸಾರ್ವಜನಿಕರಿಗೆ ಮತ್ತು ಸರ್ಕಾರಕ್ಕೆ ಉತ್ತರದಾಯಿತ್ವ ಹಾಗೂ ಜವಾಬ್ದಾರಿಯಿಂದ ವರ್ತಿಸುವುದು ಕಡ್ಡಾಯವಾಗಿದೆ ಸಹಕಾರ ಸಂಸ್ಥೆಗಳು ಪ್ರಜಾತಂತ್ರದ ವ್ಯವಸ್ಥೆಯಲ್ಲಿ ರಚನೆಯಾಗಿರುವ ಕಾರಣ ವ್ಯಕ್ತಿಗಿಂತ ಪದಾಧಿ ಹುದ್ದೆಯಲ್ಲಿನ ವ್ಯಕ್ತಿ ಉತ್ತರದಾಯಿತ್ವದಿಂದ ನಡೆದುಕೊಳ್ಳುವುದುಸಂಸ್ಥೆಯ ಆಗುಹೋಗುಗಳಿಗೆ ಜವಾಬ್ದಾರಿ ಹೊರಬೇಕಾಗುತ್ತದೆ ಆಗ ಮಾತ್ರ ಸಂಸ್ಥೆ ಉತ್ತರ ದಾಯಿತ್ವ ಹಾಗೂ ಜವಾಬ್ದಾರಿಯಿಂದ ಉತ್ತಮ ಕಾರ್ಯ ನಿರ್ವಹಣೆ ಇಂದಿರಲು ಸಾಧ್ಯವಾಗುತ್ತದೆ ಉತ್ತರದಾಯಿತ್ವ ಮತ್ತು ನಿಖರ ಜವಾಬ್ದಾರಿ ಸಂಸ್ಥೆಯ ಬೆಳವಣಿಗೆಗೆ ಪೂರಕವಾಗುತ್ತದೆ ಸಂಸ್ಥೆಯ ಕಾರ್ಯ ಯೋಜನೆಗಳನ್ನು ಸಫಲಗೊಳಿಸಲು ಕಟಿಬದ್ಧರಾಗಿರುವುದು ಉತ್ತರದಾಯಿತ್ವದ ಸಂಕೇತವಾಗಿದೆ.

**ವೃತ್ತಿಪರತೆ (professionalism) :** ಸಹಕಾರ ಸಂಸ್ಥೆಗಳು / ವೃತ್ತಿಪರತೆಯಿಂದ ಕಾರ್ಯನಿರ್ವಹಿಸುವುದು ಅವಶ್ಯವಾಗಿದೆ ಸಂಸ್ಥೆಯ ವ್ಯವಸ್ಥಾಪನೆಯಲ್ಲಿ ಅಧ್ಯಕ್ಷರು ಉಪಾಧ್ಯಕ್ಷರು ಒಳಗೊಂಡ ಆಡಳಿತ ಮಂಡಳಿ ಹಾಗೂ ಮುಖ್ಯ ಕಾರ್ಯನಿರ್ವಾಹ ಒಳಗೊಂಡ ಸಿಬ್ಬಂದಿ ವರ್ಗ ಈ ಎರಡು ವರ್ಗದವರು ಗರಿಷ್ಠ ಪ್ರಮಾಣದ ವೃತ್ತಿ ನೈಪುಣ್ಯತೆ ಕೌಶಲ್ಯತೆ ಚತುರತೆಯಿಂದ ಇದ್ದಲ್ಲಿ ಮಾತ್ರ ಉತ್ತಮ ಕಾರ್ಯ ನಿರ್ವಹಣೆಯ ಸಾಧ್ಯವಾಗುತ್ತದೆ ಆಡಳಿತ ಮಂಡಳಿ ಸಂಘದ / ಬ್ಯಾಂಕಿನ ಕೇಂದ್ರ ಬಿಂದು ಸಂಸ್ಥೆಯ ಮುಖ್ಯ ಹಾಗೂ ಪ್ರಧಾನ ತೀರ್ಮಾನಗಳು ಠರಾವುಗಳು ನೀತಿ ನಿರೂಪಣೆ ಕೈಗೊಳ್ಳುವ ಅಧಿಕಾರ ದತ್ತ ವಾಗಿರುವುದು ಈ ಘಟಕಕ್ಕೆ ಮಾತ್ರ ಇಂತಹ ತೀರ್ಮಾನಗಳು ಇಂದಿನ ಹಾಗೂ ಭವಿಷ್ಯದ ಸವಾಲುಗಳನ್ನು ಮೆಟ್ಟಿ ನಿಲ್ಲಬೇಕು ಹಾಗೂ ಸಂಸ್ಥೆಯ ಬೆಳವಣಿಗೆಗೆ ಅಡ್ಡಿ ಉಂಟಾಗಬಾರದು. ಸಹಕಾರ ಸಂಸ್ಥೆಗಳು ಮತ್ತು ಬ್ಯಾಂಕುಗಳು ಹಣಕಾಸು ವ್ಯವಹಾರ ನಿರ್ವಹಿಸುವ

ಚಟುವಟಿಕೆಗಳಿಂದ ಕೂಡಿರುವ ಕೇಂದ್ರಗಳು ಆದ್ದರಿಂದ ಆಡಳಿತ ಮಂಡಳಿ ತೀರ್ಮಾನಗಳು ಪಕ್ಕ ಬ್ಯಾಂಕುಗಳ ವೃತ್ತಿ ಆಧಾರಿತವಾಗಿರುವುದು ಸೂಕ್ತ ಮತ್ತು ಸಮಯೋಚಿತವಾಗಿರಬೇಕು ಇಲ್ಲದಿದ್ದಲ್ಲಿ ಈ ಪೈಪೋಟಿ ಯುಗದಲ್ಲಿ ಯಶಸ್ಸು ಮರಿಚಿಕೆಯಾಗುತ್ತದೆ ಆಡಳಿತ ಮಂಡಳಿ ನಿರ್ಣಯಗಳು ದಕ್ಷ ಮತ್ತು ಪರಿಣಾಮಕಾರಿಯಾಗಿರುವುದಲ್ಲದೆ ಶೀಘ್ರ ನಿಖರ ಮತ್ತು ಸ್ಪಷ್ಟವಾಗಿರಬೇಕು ತೀರ್ಮಾನಗಳು ಸಂಸ್ಥೆ/ ಬ್ಯಾಂಕಿನ ಹಿತಾ ದೃಷ್ಟಿ ಹಾಗೂ ಬಹು ಸದಸ್ಯರ ಹಿತಾರಕ್ಷಣೆ, ಕಾನೂನಿನ ಚೌಕಟ್ಟು ಮೀರಬಾರದು. ಸಂಸ್ಥೆಯ ಸಿಬ್ಬಂದಿಗಳು ಸಹ ದಕ್ಷತೆಯಿಂದ ಮತ್ತು ಉತ್ತೇಷ್ಷತೆಯಿಂದ ಕಾರ್ಯನಿರ್ವಹಿಸಿದಲ್ಲಿ ತೀರ್ಮಾನಗಳನ್ನು ಶೀಘ್ರವಾಗಿ ಆಚರಣೆಗೆ ಅಥವಾ ಜಾರಿಗೆ ತಂದಲ್ಲಿ ಮಾತ್ರ ಸಂಸ್ಥೆಯಲ್ಲಿ ಉತ್ತಮ ಮತ್ತು ಶ್ರೇಷ್ಠ ಕಾರ್ಯ ನಿರ್ವಹಣೆ ಕಾಣಲು ಸಾಧ್ಯವಾಗುತ್ತದೆ.

**ಲಾಭ (Profit) :** ಸಹಕಾರ ಸಂಸ್ಥೆಗಳು ನಿರಂತರ ಲಾಭದಲ್ಲಿರುವುದು ಉತ್ತಮ ಕಾರ್ಯನಿರ್ವಹಣೆಯ ಚಿನ್ಹೆಯಾಗಿದೆ ಸಹಕಾರ ಸಂಸ್ಥೆಗಳು ತನ್ನ ಸಿಬ್ಬಂದಿ ವೆಚ್ಚ ಆಡಳಿತ ವೆಚ್ಚ ಮೂಲಭೂತ ಸೌಕರ್ಯ ಕಲ್ಪಿಸಲು ಹಾಗೂ ಷೇರುದಾರರಿಗೆ ಲಾಭಾಂಶ ಡಿವಿಡೆಂಟ್ ನೀಡಲು ಲಾಭಗಳಿಸುವುದು ಅಗತ್ಯವಿದೆ ಸಂಸ್ಥೆಗಳು ಲಾಭಗಳಿಸದಿದ್ದಲ್ಲಿ ಉಳಿಯುವುದು ಹಾಗೂ ಬೆಳವಣಿಗೆ ಕಷ್ಟ ಸಾಧ್ಯವಾದ ಮಾತು ಇಂದಿನ ಪೈಪೋಟಿಗದಲ್ಲಿ ತನ್ನ ಸದಸ್ಯರನ್ನು ಆಕರ್ಷಿಸಲು ಸಂಸ್ಥೆ ಲಾಭದಲ್ಲಿರುವುದು ಅವಶ್ಯವಿದೆ ಆದರೆ ಸಂಸ್ಥೆ ಸದಸ್ಯರನ್ನು ಶೋಷಣೆಯಿಂದ ಲಾಭಗಳಿಸದೆ ವಹಿವಾಟು ದುಪ್ಪಟ್ಟು ಮಾಡುವ ಮೂಲಕ ಲಾಭ ಗಳಿಸುವುದು ಸಹಕಾರ ಸಂಸ್ಥೆಯ ತತ್ವವಾಗಿದೆ ಸಹಕಾರ ಸಂಸ್ಥೆಗಳು ಲಾಭಗಳಿಸುವುದರ ಮೂಲಕ ಗರಿಷ್ಠ ತಪ್ಪಿದಲ್ಲಿ ಕನಿಷ್ಠ ಪ್ರಮಾಣದ ಸದಸ್ಯರಿಗೆ ನೀಡಿದ್ದಲ್ಲಿ ಮಾತ್ರ ಸಂಸ್ಥೆಯ ಬಗ್ಗೆ ಸದಸ್ಯರ ವಿಶ್ವಾಸ ಮತ್ತು ನಂಬಿಕೆ ವೃದ್ಧಿಯಾಗುತ್ತದೆ ಸಂಸ್ಥೆಗಳು ಲಾಭಗಳಿಸಿದ್ದಲ್ಲಿ ಮಾತ್ರ ತನ್ನ ಹಣಕಾಸು ನಿಧಿಗಳನ್ನು ಬರವಣಿಸಲು ಸಹಾಯಕವಾಗುತ್ತದೆ ಮೇಲಾಗಿ ಸಂಸ್ಥೆಗಳು ಲಾಭದಲ್ಲಿದ್ದಲ್ಲಿ ಮಾತ್ರ ಹೊಸ ಆವಿಷ್ಕಾರದ ತಂತ್ರಜ್ಞಾನವನ್ನು ಅಳವಡಿಸಿಕೊಂಡು ಅವುಗಳು ಹೊಲವನ್ನು ಸದಸ್ಯರಿಗೆ ನೀಡಲು ಅನುವಾಗುತ್ತದೆ ಆದ ಕಾರಣ ಸಹಕಾರ ಸಂಸ್ಥೆಗಳು ಲಾಭದಲ್ಲಿದ್ದಲ್ಲಿ ಮಾತ್ರ ಉತ್ತಾರೋತ್ತರ ಬೆಳವಣಿಗೆಗೆ ಮತ್ತು ಸಾಧನೆಗಳಿಗೆ ಕಾರಣವಾಗುತ್ತದೆ.

**ಮಾಹಿತಿ ಮತ್ತು ತಂತ್ರಜ್ಞಾನ (information and technology) :** ಇಂದಿನ ಬದಲಾವಣೆಗೆ ತಕ್ಕಂತೆ ಸಹಕಾರ ಸಂಸ್ಥೆಗಳು /ಬ್ಯಾಂಕುಗಳು ಮಾಹಿತಿ ಮತ್ತು ತಂತ್ರಜ್ಞಾನ ಅಳವಡಿಸಿಕೊಂಡಿದ್ದಲ್ಲಿ ಮಾತ್ರ ಉತ್ತಮ ಕಾರ್ಯ ನಿರ್ವಹಣೆ ಸಾಧ್ಯವಾಗುತ್ತದೆ ಆದ ಕಾರಣ ಸಹಕಾರ ಸಂಸ್ಥೆಗಳು ಶೀಘ್ರ ನಿಖರ ಮತ್ತು ಸ್ಪಷ್ಟ ಸೇವೆ ನೀಡಲು ಮಾಹಿತಿ ಮತ್ತು ತಂತ್ರಜ್ಞಾನ ಪೂರಕವಾಗಿದ್ದು ಉತ್ತಮ ಕಾರ್ಯನಿರ್ವಹಣೆಗೆ ಉತ್ತೇಜಿಸುತ್ತದೆ ಮಾಹಿತಿ ಮತ್ತು ತಂತ್ರಜ್ಞಾನ ಸಹಕಾರ ಸಂಸ್ಥೆಗಳಿಗೆ ಆಧುನಿಕ ಸ್ವರೂಪ ಮತ್ತು ಸ್ಪರ್ಶ ನೀಡುವಲ್ಲಿ ಸಹಕಾರಿಯಾಗಿದೆ ಇದರಿಂದ ಉತ್ತಮ ಮತ್ತು ಶ್ರೇಷ್ಠ ಸಹಕಾರ ಸಂಸ್ಥೆ ಎನಿಸಿಕೊಳ್ಳಲು ಕಾರಣವಾಗಿರುತ್ತದೆ.

**ಲೆಕ್ಕಪರಿಶೋಧನೆ (Audit) :** ಲೆಕ್ಕಪರಿಶೋಧನೆ ಸಹಕಾರ ಸಂಸ್ಥೆಗಳು ಉತ್ತಮವಾಗಿ ಕಾರ್ಯನಿರ್ವಹಣೆ ಮಾಡುವ ಸಾಧನವಾಗಿದೆ (audit is the tool for good governance) ಆಕಾರ ಸಂಸ್ಥೆಗಳು ಲೆಕ್ಕ ಪುಸ್ತಕಗಳು ತೆರೆದ ಪುಸ್ತಕಗಳು ಹಾಗೂ ಇವುಗಳ ನಿರ್ವಹಣೆ ನಿರ್ದಿಷ್ಟ ತತ್ವಗಳ ಅನುಸಾರವಿರುತ್ತದೆ ಮತ್ತು ವಿವೇಚನೆಯುಕ್ತ ಲೆಕ್ಕಪರಿಶೋಧನೆ ಉತ್ತಮ ಕಾರ್ಯ ನಿರ್ವಹಣೆಗೆ ನಾಂದಿಯಾಗಿದೆ ಸಹಕಾರ ಸಂಘಗಳಲ್ಲಿನ ಆಂತರಿಕ ಲೆಕ್ಕಪರಿಶೋಧನೆ ಸಮವರ್ತಿ ಲೆಕ್ಕ ಪರಿಶೋಧನೆ ಶಾಸನಬದ್ಧ ಲೆಕ್ಕಪರಿಶೋಧನೆ ಮತ್ತು ತೆರಿಗೆ ಲೆಕ್ಕಪರಿಶೋಧನೆಗಳು ಆರ್ಥಿಕ ಶಿಸ್ತನ್ನು ಸಂರಕ್ಷಿಸುವಲ್ಲಿ ಸಫಲವಾಗಿವೆ ಆದ ಕಾರಣ ನ್ಯಾಯಯುತ ಮತ್ತು ಯೋಗ್ಯ ಲೆಕ್ಕ ಪರಿಶೋಧನೆ ಉತ್ತಮ ಕಾರ್ಯ ನಿರ್ವಹಣೆಯ ಮಹತ್ವದ ಉಪಕರಣಗಳೆಂದೇ ಭಾವಿಸಲಾಗಿದೆ ಆಡಳಿತ ಮಂಡಳಿ ಸದಸ್ಯರಿಗೆ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಯಾವುದೇ ಶೈಕ್ಷಣಿಕ ಅರ್ಹತೆ ಗೊತ್ತು ಪಡಿಸದ ಕಾರಣ ತೀರ್ಮಾನಗಳ ಪರಿಶೀಲನೆ ಮತ್ತು ಸಮತೋಲನೆ ಅಗತ್ಯವಿದೆ (checks and balances)

**ಮಾನವ ಸಂಪನ್ಮೂಲ (human resources) :** ದಕ್ಷ ಹಾಗೂ ಉತ್ಕೃಷ್ಟ ಮಾನವ ಸಂಪನ್ಮೂಲ ಸಹಕಾರ ಸಂಸ್ಥೆಗಳು ಉತ್ತಮ ಕಾರ್ಯ ನಿರ್ವಹಣೆಯ ಸಂಕೇತವಾಗಿದೆ ದಕ್ಷ ಪ್ರಾಮಾಣಿಕ ಮತ್ತು ಬದ್ಧತೆಯುಳ್ಳ ವೃತ್ತಿಪರ ಸಿಬ್ಬಂದಿ ಸಂಸ್ಥೆಯ ಆಸ್ತಿಯಾಗಿದೆ ಸದರಿ ಸಿಬ್ಬಂದಿಗೆ ಕಾಲಕಾಲಕ್ಕೆ ತರಬೇತಿ ಶಿಕ್ಷಣ ವಿಚಾರ ವಿನಿಮಯ ಮತ್ತು ಜ್ಞಾನದ ಇಂಧನೀಕರಣ ಅತ್ಯವಶ್ಯಕ ಇದರ ಫಲವೇ ಉತ್ತಮ ಕಾರ್ಯ ನಿರ್ವಹಣೆ ಸಿಬ್ಬಂದಿಗಳಿಗೆ ಶ್ವೇತಾ ಶಕ್ತಿಗಿಂತ ಸಂಸ್ಥೆಯು ಮುಖ್ಯವಾದದ್ದು ಸಿಬ್ಬಂದಿಗಳಿಗೆ ಉತ್ತಮ ಕಾರ್ಯ ದಕ್ಷತೆಯ ವಾತಾವರಣ ಹಾಗೂ ಸೇವಾ ಭದ್ರತೆ ಉತ್ತಮ ಕಾರ್ಯ ನಿರ್ವಹಣೆಗೆ ಅವಕಾಶ ಕಲ್ಪಿಸುತ್ತದೆ.

**ಸ್ವಾಟ್ ಅನಾಲಿಸಿಸ್ ವಿಶ್ಲೇಷಣೆ SWOT analysis :** ಸಹಕಾರ ಸಂಸ್ಥೆಯಲ್ಲಿನ ಶಕ್ತಿ (strength) ದುರ್ಬಲತೆ (weakness) ಅವಕಾಶ (opportunity) ಬೆದರಿಕೆ (threat) ಇವುಗಳ ವಿಮರ್ಶೆ ಅತ್ಯಗತ್ಯ ಸಂಸ್ಥೆಯಲ್ಲಿನ ಸದಸ್ಯರ ಬೆಂಬಲ ಅವರ ಸಕ್ರಿಯ ಭಾಗವಹಿಸುವಿಕೆ ಒತ್ತಾಸೆ ಆಗಿರಬೇಕು ಸಂಸ್ಥೆಯಲ್ಲಿನ ಆರ್ಥಿಕ ಕೊರತೆ ಮಾನವ ಸಂಪನ್ಮೂಲ ಕೊರತೆ ಮೂಲಭೂತ ಸೌಕರ್ಯಗಳ ಅಲಭ್ಯತೆ ಮಾಹಿತಿ ಮತ್ತು ತಂತ್ರಜ್ಞಾನ ಆಚರಣೆಯಲ್ಲಿ ಇರದಿರುವುದು ಸಂಸ್ಥೆಗೆ ಕಾಲಕಾಲಕ್ಕೆ ಒದಗಿ ಬರುವ ಸದಾ ಅವಕಾಶಗಳನ್ನು ಗರಿಷ್ಠ ಮಟ್ಟದಲ್ಲಿ ಬಳಸಿಕೊಂಡಲ್ಲಿ ಉತ್ತಮ ಕಾರ್ಯ ನಿರ್ವಹಣೆಗೆ ಅನುವಾಗುತ್ತದೆ ಕೇಂದ್ರ ಸರ್ಕಾರ ರಾಜ್ಯ ಸರ್ಕಾರ ಸ್ಥಳೀಯ ಸರ್ಕಾರ ಹಾಗೂ ವಿವಿಧ ಸರ್ಕಾರದ ಏಜೆನ್ಸಿಗಳಿಂದ ಲಭ್ಯವಿರುವ ಯೋಜನಾ ಕಾರ್ಯಕ್ರಮಗಳ ಆರ್ಥಿಕ ನೆರವನ್ನು ಪಡೆಯುವುದು ಹಾಗೂ ಯೋಜನೆಗಳನ್ನು ಸದಸ್ಯರಿಗೆ ಮತ್ತು ಸಮಾಜಕ್ಕೆ ತಲುಪಿಸಿದಲ್ಲಿ ಉತ್ತಮ ಕಾರ್ಯ ನಿರ್ವಹಣೆಗೆ ಸಾಕ್ಷಿಯಾಗುತ್ತದೆ ಸಹಕಾರ ಸಂಸ್ಥೆಗಳಿಗೆ ವಿವಿಧ ಬಾಹ್ಯ ಸಂಸ್ಥೆಗಳು ಮತ್ತು ಬ್ಯಾಂಕುಗಳಿಂದ ಎದುರಾಗಬಹುದಾದ ಸವಾಲುಗಳು ಮತ್ತು ಬೆದರಿಕೆಗಳನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡಿ ಅವುಗಳ ಪರಿಹಾರಕ್ಕೆ ಮಾರ್ಗೋಪಾಯಗಳನ್ನು ಸಮೀಕ್ಷಿಸುವುದು ಉತ್ತಮ ಕಾರ್ಯ ನಿರ್ವಹಣೆಗೆ ಅಡಿಪಾಯವಾಗುತ್ತದೆ ಸಹಕಾರದ ಮೂಲಕ ಸಮೃದ್ಧಿ ಸಾಧಿಸಲು ದೇಶದ ಬಹುಪಾಲು ಆರ್ಥಿಕ ಚಟುವಟಿಕೆಗಳು ಸಹಕಾರ ಆಧಾರಿತ ಆರ್ಥಿಕ ವ್ಯವಸ್ಥೆಯಾಗಬೇಕು (cooperative based economy) ಇದರಿಂದ ಸಹಕಾರಿ ಸಂಸ್ಥೆಗಳ ಉತ್ತಮ ಕಾರ್ಯ ನಿರ್ವಹಣೆ ಸ್ಥಿರವಾಗಿರುತ್ತದೆ.

# ಸಹಕಾರ ಸಂಘಗಳಲ್ಲಿ ಮಾನವ ಸಂಪನ್ಮೂಲ



ಬಸವೇಗೌಡ
ಸಹಕಾರ ಸಂಘಗಳ ಅಪರ
ನಿಬಂಧಕರು (ನಿ), ಬೆಂಗಳೂರು.




**ಸಹಕಾರ ಕ್ಷೇತ್ರವು ಬೃಹತ್ ಆಗಿ ಬೆಳೆದಿದೆ. ರಾಜ್ಯದಲ್ಲಿ ಸುಮಾರು 46,000 ಹಾಗೂ ದೇಶದಲ್ಲಿ ಸುಮಾರು 8.5ಲಕ್ಷ ಸಹಕಾರ ಸಂಘಗಳಿವೆ. ಗ್ರಾಮ ಮಟ್ಟದಿಂದ ರಾಷ್ಟ್ರಮಟ್ಟದ ವರೆಗೆ ಭಿನ್ನ ಕಾರ್ಯವ್ಯಾಪ್ತಿವುಳ್ಳ ಪ್ರಾಥಮಿಕ, ಮಾಧ್ಯಮಿಕ, ಒಕ್ಕೂಟ ಸಂಸ್ಥೆಗಳಿವೆ. ಸಹಕಾರ ಕ್ಷೇತ್ರವು ಲಕ್ಷಾಂತರ ನೌಕರರು, ಲಕ್ಷಾಂತರ ಸಮಿತಿ ಸದಸ್ಯರು ಹಾಗೂ ಕೋಟ್ಯಂತರ ಸದಸ್ಯರನ್ನು ಒಳಗೊಂಡಿದೆ.**

**Financial Resources may be the lifeblood of a company, but human resources are the brains**

**- Rob Silzer**

ಒಂದು ಸಂಘ ಅಥವಾ ಸಂಸ್ಥೆಯು ಉದ್ದೇಶಗಳಿಗೆ ಅನುಗುಣವಾಗಿ ಆರ್ಥಿಕ ಚಟುವಟಿಕೆಗಳನ್ನು ನಡೆಸಬೇಕಾದರೆ ಬಂಡವಾಳವು ಅತ್ಯಗತ್ಯವಾಗಿರುತ್ತದೆ. ಬಂಡವಾಳ ಎಂದ ಕೂಡಲೇ, ಸಾಮಾನ್ಯವಾಗಿ, ಹಣದ ಬಗ್ಗೆ ಮಾತನಾಡಲಾಗುತ್ತದೆ. ಆದರೆ, ಒಂದು ಸಂಸ್ಥೆಯ ಯಶಸ್ಸಿಗೆ ಕೇವಲ ಹಣವಷ್ಟೇ ಅಲ್ಲದೆ ಬೇರೆ ವಿಧದ ಬಂಡವಾಳಗಳೂ ಇದ್ದು, ಅವು ಸಹ ಪ್ರಮುಖವಾಗಿರುತ್ತವೆ. ಸಾಮಾನ್ಯವಾಗಿ ಪ್ರಸ್ತಾಪಿಸುವಂತ ಬಂಡವಾಳಗಳೆಂದರೆ, ಆರ್ಥಿಕ ಬಂಡವಾಳ (Financial Capital) – ಇದು ಹಣಕಾಸಿಗೆ ಸಂಬಂಧಿಸಿದ್ದು, ಬಂಡವಾಳ ಸರಕುಗಳಾದ ಕಟ್ಟಡ, ಯಂತ್ರೋಪಕರಣ, ಇತ್ಯಾದಿಯನ್ನು ಕೊಂಡುಕೊಳ್ಳುವುದಕ್ಕೆ, ಆರ್ಥಿಕ ವ್ಯವಹಾರಗಳನ್ನು ನಿರ್ವಹಿಸುವುದಕ್ಕೆ ಬಳಸಲಾಗುತ್ತದೆ. ಮೂಲಗಳು – ನಗದು, ಈಕ್ವಿಟಿ, ಸಾಲಗಳು.

**ನೈಸರ್ಗಿಕ ಬಂಡವಾಳ (Natural Capital) –** ಸಂಸ್ಥೆಯ ಕಾರ್ಯದಲ್ಲಿ ಬಳಸುವ ನೈಸರ್ಗಿಕ ಸಂಪನ್ಮೂಲಗಳಾದ ಭೂಮಿ, ಖನಿಜ ವಸ್ತುಗಳು, ನೀರು ಮತ್ತು ಗಾಳಿಯನ್ನು ಒಳಗೊಂಡ ಪರಿಸರ ವ್ಯವಸ್ಥೆ.

**ಮಾನವ ಬಂಡವಾಳ (Human Capital) –** ಸಂಸ್ಥೆಯ ಲಾಭದಾಯಕ ಮುನ್ನಡೆಗೆ ನೆರವಾಗುವಂತ ಉದ್ಯೋಗಿಗಳ ಜ್ಞಾನ, ಕೌಶಲ್ಯ, ಸಾಮರ್ಥ್ಯ, ಅನುಭವ, ಇತ್ಯಾದಿಯನ್ನು ಮಾನವ ಬಂಡವಾಳವೆಂದು ಪರಿಗಣಿಸಲಾಗುತ್ತದೆ. ಇದು ಸಂಘ ಅಥವಾ ಸಂಸ್ಥೆಯ ಯಶಸ್ಸಿಗೆ ಮಹತ್ವದ ಕೊಡುಗೆಯನ್ನು ನೀಡುತ್ತದೆ.

**ಸಾಮಾಜಿಕ ಬಂಡವಾಳ (Social Capital) –** ಇದು ಹೆಚ್ಚಾಗಿ ಗೋಚರಿಸದ ಸಾಮಾಜಿಕ ಸಂಬಂಧಗಳ ಆಸ್ತಿಯಾಗಿದ್ದು, ಜನರು ಪರಸ್ಪರ ಹೊಂದಿರುವ ಸಂಬಂಧಗಳಿಗೆ ಅನ್ವಯಿಸುತ್ತದೆ. ಸಂಸ್ಥೆಯ ಹೊರಗೆ ಮತ್ತು ಒಳಗೆ ಕೆಲಸ ಮಾಡುವವರ ವೈಯಕ್ತಿಕ ಮತ್ತು ಜಾಲಬಂಧ ಸಂಬಂಧಗಳು ಪ್ರಗತಿಗೆ ನೆರವಾಗುತ್ತವೆ. ವಿಶ್ವಾಸ, ಸಂವಹನ, ಪರಸ್ಪರ ಅರಿವು, ವ್ಯವಸ್ಥಾಪನ ಸಾಮರ್ಥ್ಯ, ಈ ಎಲ್ಲಾ ಸಂಬಂಧಗಳು ಸಂಸ್ಥೆಯ ಬೆಳವಣಿಗೆಗೆ ಕೊಡುಗೆ ನೀಡುವಂತ ಸಾಮಾಜಿಕ ಬಂಡವಾಳವಾಗಿರುತ್ತವೆ.

ಇತ್ಯಾದಿ, ಪ್ರಯೋಜನಕಾರಿಯಾದ, ಹಣಕಾಸು ಮತ್ತು ಹಣಕಾಸೇತರ, ಸ್ಪಷ್ಟವಾಗಿ ಗೋಚರಿಸುವ ಹಾಗೂ ಗೋಚರಿಸದ ಬಂಡವಾಳಗಳಿರುತ್ತವೆ. ಇವೆಲ್ಲವೂ ಸಂಸ್ಥೆಯ ಅಪೇಕ್ಷಿತ ಆರ್ಥಿಕ ವ್ಯವಹಾರಗಳು

ಪರಿಣಾಮಕಾರಿಯಾಗಿ ನಡೆಯುವುದಕ್ಕೆ ಬೇಕಾಗುವ ಬಂಡವಾಳಗಳಾಗಿದ್ದು, ಪ್ರಗತಿಯನ್ನು ಸಾಧಿಸಲು ಕಾಪಾಡಿಕೊಳ್ಳಬೇಕಾಗಿರುತ್ತದೆ.

ಸಹಕಾರ ಸಂಘಗಳು ವ್ಯಾಪಾರ ವ್ಯವಹಾರ ನಡೆಸುವ ವಾಣಿಜ್ಯ ಸಂಸ್ಥೆಗಳು. ಇವುಗಳ ಮುಖ್ಯ ಧ್ಯೇಯೋದ್ದೇಶವು ಸದಸ್ಯರಿಗೆ ಬೈಲಾ ನಿಯಮಾನುಸಾರ ಯೋಗ್ಯ ಸೇವೆಗಳನ್ನು ಒದಗಿಸುವುದಾಗಿರುತ್ತದೆ. ಹೀಗಾಗಿ ಸಂಘಗಳು ಪರಿಣಾಮಕಾರಿಯಾದ ಸೇವೆಗಳನ್ನು ಒದಗಿಸಿ ಲಾಭದಾಯಕವಾಗಿ ಮುನ್ನಡೆಯಬೇಕಾದರೆ ಆರ್ಥಿಕ, ನೈಸರ್ಗಿಕ, ಮಾನವ, ಸಾಮಾಜಿಕ, ಇತ್ಯಾದಿ ಸೂಕ್ತ ಬಂಡವಾಳಗಳು ಬೇಕಾಗಿರುತ್ತವೆ. ಇತರೆಲ್ಲಾ ಬಂಡವಾಳಗಳು ಫಲದಾಯಕವಾಗಿ ಬಳಕೆಯಾಗಿ ಉತ್ಪಾದಕತೆ ಹೆಚ್ಚಬೇಕಾದರೆ ಮಾನವ ಬಂಡವಾಳವು ಮಹತ್ವದಿಂದ ಕೂಡಿರುತ್ತದೆ. ಯಾವುದೇ ಕ್ಷೇತ್ರದ ಸಂಸ್ಥೆಯಾಗಿರಲಿ, ಅದರ ಉದ್ಯೋಗಿಗಳ ಶಿಕ್ಷಣ, ಕೌಶಲ್ಯ, ತಾಂತ್ರಿಕ ಕೌಶಲ್ಯ, ಬುದ್ಧಿಶಕ್ತಿ, ಸೃಜನಶೀಲತೆ, ಅನುಭವ, ಸಮಸ್ಯೆಗಳನ್ನು ಪರಿಹರಿಸುವ ಜಾಣ್ಮೆ, ಮಾನಸಿಕ ಸ್ಪಷ್ಟತೆ, ಸಾಮರ್ಥ್ಯ – ಇದೆಲ್ಲವೂ ಮಾನವ ಬಂಡವಾಳಕ್ಕೆ ಸೇರಿದ ಆಸ್ತಿಗಳಾಗಿರುತ್ತವೆ. ಜೊತೆಗೆ, ಉದ್ಯೋಗಿಗಳ ಕರ್ತವ್ಯ ನಿಷ್ಠೆ, ಸಮಯಪಾಲನೆ, ಬದ್ಧತೆ, ವಿಶ್ವಾಸ, ಪ್ರಾಮಾಣಿಕತೆಯಂತ ಮೌಲ್ಯಗಳು ಸಹ ಅಗತ್ಯವಿರುತ್ತವೆ. ಉದ್ಯೋಗಕ್ಕೆ ತೆಗೆದುಕೊಂಡಾಗ ಇವೆಲ್ಲವೂ ಇರುವುದಿಲ್ಲ. ಆದರೆ, ಸರಿಯಾದ ಶಿಕ್ಷಣ ಮತ್ತು ತರಬೇತಿಯಿಂದ ಸಾಧ್ಯವಾಗುತ್ತದೆ. ಉದ್ಯೋಗಿಗಳಿಗೆ ರಚನಾತ್ಮಕವಾಗಿ ವಿನಿಯೋಗಿಸಿದಷ್ಟು ಸಂಸ್ಥೆಯ ಉತ್ಪಾದಕತೆ ಮತ್ತು ಯಶಸ್ಸು ಹೆಚ್ಚುತ್ತದೆ. ಮಾನವ ಬಂಡವಾಳವು ಗೋಚರಿಸದ ಆಸ್ತಿಯಗಿದ್ದು, ಸಂಸ್ಥೆಯ ಆಸ್ತಿ ಜವಾಬ್ದಾರಿ ತಃಖ್ತೆಯಲ್ಲಿ ಸೇರಿಸಲಾಗದು. ಆದರೆ, ಇದು ಆರ್ಥಿಕ ಅಭಿವೃದ್ಧಿಗೆ ಹೊಂದಿರುವ ಸಂಬಂಧವನ್ನು ಸ್ಪಷ್ಟವಾಗಿ ಗ್ರಹಿಸಬಹುದು.



ಸಾಮಾನ್ಯವಾಗಿ ಒಂದು ಸಂಸ್ಥೆಯ ಮಾನವ ಶಕ್ತಿಗೆ (Manpower) ಸಂಬಂಧಿಸಿದ ವಿಷಯಗಳನ್ನು ‘ಮಾನವ ಸಂಪನ್ಮೂಲ’ (Human Resource - HR) ವಿಭಾಗವು ನೋಡಿಕೊಳ್ಳುತ್ತದೆ. ನೇಮಕಾತಿ, ಶಿಕ್ಷಣ ಮತ್ತು ತರಬೇತಿ ಸರಿಯಾದ ವ್ಯಕ್ತಿಯನ್ನು ಸರಿಯಾದ ಜಾಗಕ್ಕೆ ನೇಮಿಸುವುದು, ವೇತನ ಮತ್ತು ಭತ್ಯೆಗಳು, ಪರಿಹಾರ ನೀಡುವುದು, ಸಮಸ್ಯೆಗಳನ್ನು ಪರಿಹರಿಸುವುದು, ಕಾನೂನಿಗೆ ಸಂಬಂಧಿಸಿದ ವಿಷಯಗಳು, ಇತ್ಯಾದಿ ಸಂಬಂಧಿತ ಕಾರ್ಯಗಳನ್ನು ನಿರ್ವಹಿಸುವುದಕ್ಕೆ ‘ಮಾನವ ಸಂಪನ್ಮೂಲ ವ್ಯವಸ್ಥಾಪನೆ’ (Human Resource Management - HRM) ಎಂದು ಕರೆಯಲಾಗುತ್ತದೆ. ಸಂಸ್ಥೆಯ ಗುರಿ ಸಾಧನೆಗೆ ಯಾವ ರೀತಿಯ ಮಾನವ ಸಂಪನ್ಮೂಲ ಅಗತ್ಯವಿದೆ. ಪಡೆಯುವುದು ಹೇಗೆ, ಉಪಯೋಗ ಮಾಡಿಕೊಳ್ಳುವುದು ಹೇಗೆ ಹಾಗೂ ಇದನ್ನೆಲ್ಲಾ ನಿರ್ವಹಿಸುವುದು ಹೇಗೆ ಎಂಬಿತ್ಯಾದಿ ಆಚರಣೆಗಳು ಮಾನವ ಸಂಪನ್ಮೂಲ ವ್ಯವಸ್ಥಾಪನೆಯ ವ್ಯಾಪ್ತಿಗೆ ಬರುತ್ತವೆ.

ಸಂಸ್ಥೆಯ ಗುರಿ ಸಾಧನೆಗೆ ಅಗತ್ಯವಿರುವಂತ ಉದ್ಯೋಗಿಗಳ ಕೌಶಲ್ಯ, ಜ್ಞಾನ, ಸಾಮರ್ಥ್ಯ, ದಕ್ಷತೆಯನ್ನು ಶಿಕ್ಷಣ, ತರಬೇತಿ, ಕಾರ್ಯಾಗಾರ, ಸಮ್ಮೇಳನ ಮುಂತಾದ ವಿಧಾನಗಳ ಮೂಲಕ ಅಭಿವೃದ್ಧಿಗೊಳಿಸುವುದು ‘ಮಾನವ ಸಂಪನ್ಮೂಲ ಅಭಿವೃದ್ಧಿ’ (Human Resource Development - HRD)ಯ ಕಾರ್ಯವಾಗಿದ್ದು, ಇದು HRMನ ಒಂದು ವಿಭಾಗವಾಗಿರುತ್ತದೆ. ಸಂಸ್ಥೆಯ ಮಾನವ ಸಂಪನ್ಮೂಲ ವಿಭಾಗದಲ್ಲಿರುವ ನಿಪುಣರು ಸಂಬಂಧಿಸಿದ ಕಾರ್ಯಗಳನ್ನು ವ್ಯವಸ್ಥಾನುಸಾರವಾಗಿ ನಿರ್ವಹಿಸುತ್ತಾರೆ. ಮಾನವ ಸಂಪನ್ಮೂಲ ನಿರ್ವಹಣೆ ಮತ್ತು ಅಭಿವೃದ್ಧಿಯ ವಿಷಯವು ಕಳೆದ ಕೆಲವು ದಶಕಗಳಿಂದ ಹೆಚ್ಚಿನ ಪ್ರಾಧನ್ಯತೆಯನು ಪಡೆದಿರುವುದರ ಜೊತೆಗೆ, ಬೆಳವಣಿಗೆಯನ್ನು ಹೊಂದುತ್ತಿದೆ.

ಸಹಕಾರ ಕ್ಷೇತ್ರವು ಬೃಹತ್ ಆಗಿ ಬೆಳೆದಿದೆ. ರಾಜ್ಯದಲ್ಲಿ ಸುಮಾರು 46,000 ಹಾಗೂ ದೇಶದಲ್ಲಿ ಸುಮಾರು 8.5ಲಕ್ಷ ಸಹಕಾರ ಸಂಘಗಳಿವೆ. ಗ್ರಾಮ ಮಟ್ಟದಿಂದ ರಾಷ್ಟ್ರಮಟ್ಟದ ವರೆಗೆ ಭಿನ್ನ ಕಾರ್ಯವ್ಯಾಪ್ತಿವುಳ್ಳ ಪ್ರಾಥಮಿಕ, ಮಾಧ್ಯಮಿಕ, ಒಕ್ಕೂಟ ಸಂಸ್ಥೆಗಳಿವೆ. ಸಹಕಾರ ಕ್ಷೇತ್ರವು ಲಕ್ಷಾಂತರ ನೌಕರರು, ಲಕ್ಷಾಂತರ ಸಮಿತಿ ಸದಸ್ಯರು ಹಾಗೂ ಕೋಟ್ಯಂತರ ಸದಸ್ಯರನ್ನು ಒಳಗೊಂಡಿದೆ. ಇಂತಹ ಬೃಹತ್ ಮಾನವಶಕ್ತಿ ಹಾಗೂ ಆರ್ಥಿಕ ಶಕ್ತಿಯನ್ನು ಹೊಂದಿರುವ ಸಹಕಾರ ಕ್ಷೇತ್ರದಲ್ಲಿ ಮಾನವ ಸಂಪನ್ಮೂಲ ವ್ಯವಸ್ಥಾಪನೆ ಮತ್ತು ಅಭಿವೃದ್ಧಿ ಹೇಗಿದೆ? ಇಂದಿನ ಮಾರುಕಟ್ಟೆ ಆರ್ಥಿಕ ವ್ಯವಸ್ಥೆಯಲ್ಲಿನ ಸವಾಲುಗಳನ್ನು ಎದುರಿಸಲು ಸಮಗ್ರವಾದ ಮಾನವ ಸಂಪನ್ಮೂಲ ಯೋಜನೆ ಮತ್ತು ಗುರಿ ಇದೆಯೇ? ಸಹಕಾರ ಮಾನವ ಶಕ್ತಿಯ ನಿರ್ಮಾಣದ ದಿಕ್ಕು ಹೇಗೆ ಸಾಗಿದೆ? ಎಂಬಿತ್ಯಾದಿ ಪ್ರಶ್ನೆಗಳು ಸಹಜವಾಗಿ ಉದ್ಭವಿಸುತ್ತವೆ. ಈ ಪ್ರಶ್ನೆಗಳ ಬಗ್ಗೆ ಸೂಕ್ಷ್ಮವಾಗಿ ವಾಸ್ತವಿಕ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಪರಿಶೀಲಿಸಿದಾಗ ಸಹಕಾರದಲ್ಲಿ, ಸಾಮಾನ್ಯವಾಗಿ

**ಒಟ್ಟು ಸಂಘಗಳ ಪೈಕಿ ಸುಮಾರು ಶೇ.74ರಷ್ಟು ಪ್ರಾಥಮಿಕ ಮತ್ತು ಮಾಧ್ಯಮಿಕ ಸಂಘಗಳಿದ್ದು, ಇವುಗಳಲ್ಲಿರುವ ಸಿಬ್ಬಂದಿ ಸಂಖ್ಯೆಯು ಕಡಿಮೆ ಇರುತ್ತದೆ. ಹೀಗಾಗಿ ಈ ಸಂಸ್ಥೆಗಳು ತಮ್ಮದೇ ಆದ ಪರಿಣಾಮಕಾರಿಯಾದ ಮಾನವ ಸಂಪನ್ಮೂಲ ಅಭಿವೃದ್ಧಿ ಯೋಜನೆಯನ್ನು ರೂಪಿಸಿಕೊಳ್ಳುವುದು ಕಷ್ಟವಾಗುವುದರಿಂದ, ರಾಜ್ಯ ಸಹಕಾರ ಮಹಾಮಂಡಳ ಮತ್ತು NCCTಯ ಜೊತೆಗೆ, ಸಂಬಂಧಿಸಿದ ಒಕ್ಕೂಟಗಳು ತಮ್ಮ ಉತ್ತರದಾಯಿತ್ವವನ್ನು ಅರ್ಥ ಮಾಡಿಕೊಳ್ಳಬೇಕಾಗಿದೆ. ಕೆಳಹಂತದ ಸಂಸ್ಥೆಗಳ ಪ್ರಗತಿ ಮತ್ತು ಗುಣಮಟ್ಟ ಹೆಚ್ಚಿದಾಗ ಸಹಜವಾಗಿ ಮೇಲಿನ ಹಂತದ ಸಂಸ್ಥೆಗಳ ಆರ್ಥಿಕ ಮೌಲ್ಯ, ಸದೃಢತೆ ಮತ್ತು ವಿಸ್ತಾರವು ಹೆಚ್ಚುತ್ತದೆ. ಹೆಚ್ಚಿನ ಉದ್ಯೋಗಿಗಳನ್ನು ಹೊಂದಿರುವ ಸಕ್ಕರೆ ಕಾರ್ಖಾನೆಗಳು, ಪತ್ತಿನ ಸಂಘಗಳು, ಜಿಲ್ಲಾ ಕೇಂದ್ರ ಮತ್ತು ಅಪೆಕ್ಸ್ ಬ್ಯಾಂಕ್‌ಗಳು ಸಹಕಾರ ಹೈನುಗಾರಿಕೆ ಒಕ್ಕೂಟಗಳು, ರಾಜ್ಯ ಸಹಕಾರ ಮಹಾಮಂಡಳ, ಮಾರಾಟ ಮಹಾಮಂಡಳ, ಇತ್ಯಾದಿ ಸಂಸ್ಥೆಗಳು ಮಾನವ ಸಂಪನ್ಮೂಲ ಅಭಿವೃದ್ಧಿಯ ಬಗ್ಗೆ ರಚನಾತ್ಮಕ ಯೋಜನೆ ಮತ್ತು ಹಣ ಹೂಡಿಕೆಯ ಅಗತ್ಯವಿರುತ್ತದೆ.**

ಮಾನವ ಬಂಡವಾಳಕ್ಕೆ ಮಹತ್ವದ ಸ್ಥಾನವನ್ನು ನೀಡಿರುವುದು ಕಂಡು ಬರುವುದಿಲ್ಲ. ಹೆಚ್ಚಿನ ಪ್ರಕರಣಗಳಲ್ಲಿ ಯೋಜನಾರಹಿತ ನಡೆ, ನಿರ್ಲಕ್ಷ್ಯತನ ಮತ್ತು ಅಜ್ಞಾನವನ್ನು ಗುರ್ತಿಸಬಹುದು. ದೊಡ್ಡ ಸಂಸ್ಥೆಗಳು ಮತ್ತು ಒಕ್ಕೂಟಗಳು ತಮ್ಮ ಉದ್ಯೋಗಿಗಳ ಮತ್ತು ಸಮಿತಿಯ ಮಾನವ ಸಂಪನ್ಮೂಲ ಅಭಿವೃದ್ಧಿಯ ಜೊತೆಗೆ ಸದಸ್ಯ ಸಂಘಗಳ ಅಭಿವೃದ್ಧಿಯ ಕಡೆಗೂ ಗಮನ ನೀಡಬೇಕಾಗಿದೆ.

ಒಟ್ಟು ಸಂಘಗಳ ಪೈಕಿ ಸುಮಾರು ಶೇ.74ರಷ್ಟು ಪ್ರಾಥಮಿಕ ಮತ್ತು ಮಾಧ್ಯಮಿಕ ಸಂಘಗಳಿದ್ದು, ಇವುಗಳಲ್ಲಿರುವ ಸಿಬ್ಬಂದಿ ಸಂಖ್ಯೆಯು ಕಡಿಮೆ ಇರುತ್ತದೆ. ಹೀಗಾಗಿ ಈ ಸಂಸ್ಥೆಗಳು ತಮ್ಮದೇ ಆದ ಪರಿಣಾಮಕಾರಿಯಾದ ಮಾನವ ಸಂಪನ್ಮೂಲ ಅಭಿವೃದ್ಧಿ ಯೋಜನೆಯನ್ನು ರೂಪಿಸಿಕೊಳ್ಳುವುದು ಕಷ್ಟವಾಗುವುದರಿಂದ, ರಾಜ್ಯ ಸಹಕಾರ ಮಹಾಮಂಡಳ ಮತ್ತು NCCT ಯ ಜೊತೆಗೆ, ಸಂಬಂಧಿಸಿದ ಒಕ್ಕೂಟಗಳು ತಮ್ಮ ಉತ್ತರದಾಯಿತ್ವವನ್ನು ಅರ್ಥ ಮಾಡಿಕೊಳ್ಳಬೇಕಾಗಿದೆ. ಕೆಳಹಂತದ ಸಂಸ್ಥೆಗಳ ಪ್ರಗತಿ ಮತ್ತು ಗುಣಮಟ್ಟ ಹೆಚ್ಚಿದಾಗ ಸಹಜವಾಗಿ ಮೇಲಿನ ಹಂತದ ಸಂಸ್ಥೆಗಳ ಆರ್ಥಿಕ ಮೌಲ್ಯ, ಸದೃಢತೆ ಮತ್ತು ವಿಸ್ತಾರವು ಹೆಚ್ಚುತ್ತದೆ. ಹೆಚ್ಚಿನ ಉದ್ಯೋಗಿಗಳನ್ನು ಹೊಂದಿರುವ ಸಕ್ಕರೆ ಕಾರ್ಖಾನೆಗಳು, ಪತ್ತಿನ ಸಂಘಗಳು, ಜಿಲ್ಲಾ ಕೇಂದ್ರ ಮತ್ತು ಅಪೆಕ್ಸ್ ಬ್ಯಾಂಕ್‌ಗಳು ಸಹಕಾರ ಹೈನುಗಾರಿಕೆ ಒಕ್ಕೂಟಗಳು, ರಾಜ್ಯ ಸಹಕಾರ ಮಹಾಮಂಡಳ, ಮಾರಾಟ ಮಹಾಮಂಡಳ, ಇತ್ಯಾದಿ ಸಂಸ್ಥೆಗಳು ಮಾನವ ಸಂಪನ್ಮೂಲ ಅಭಿವೃದ್ಧಿಯ ಬಗ್ಗೆ ರಚನಾತ್ಮಕ ಯೋಜನೆ ಮತ್ತು ಹಣ ಹೂಡಿಕೆಯ ಅಗತ್ಯವಿರುತ್ತದೆ.

ಸಹಕಾರದಲ್ಲಿ 'ಸಮಿತಿ ಮಾನವ ಬಂಡವಾಳ' (Board Human Capital) ಅಷ್ಟೇ ಪ್ರಾಮುಖ್ಯತೆಯಿಂದ ಕೂಡಿರುತ್ತದೆ. ಸಂಘದಲ್ಲಿ ಆಡಳಿತ ಮತ್ತು ನಿರ್ಣಯ ಕೈಗೊಳ್ಳುವ ಅಧಿಕಾರವುಳ್ಳ ಸಮಿತಿ ಸದಸ್ಯರ ಜ್ಞಾನ, ಕೌಶಲ್ಯ, ಸಾಮರ್ಥ್ಯ, ದಕ್ಷತೆ ಹೆಚ್ಚಿದಷ್ಟು ಸಂಘಗಳ ಕಾರ್ಯನಿರ್ವಹಣೆಯು ಸುಧಾರಿಸುತ್ತದೆ. ಅಲ್ಲದೆ, ಸಮಿತಿಯ ಸಾಮಾನ್ಯ ಸದಸ್ಯರು ಮತ್ತು ಸಮಾಜದೊಡನೆ ಜೋಡಣೆ ಹಾಗೂ ಪ್ರಭಾವ ಉಳ್ಳವರಾದ್ದರಿಂದ, ಅವರುಗಳು ಸಮಗ್ರತೆಯಿಂದ ಜವಾಬ್ದಾರಿಯನ್ನು ನಿರ್ವಹಿಸಿದಾಗ ಸಂಸ್ಥೆಗಳಲ್ಲಿ ಶಿಸ್ತು ಮತ್ತು ಆರ್ಥಿಕ ಪ್ರಗತಿ ಹೆಚ್ಚುತ್ತದೆ.

ಸಂಸ್ಥೆಗಳ ಮಾನವ ಸಂಪನ್ಮೂಲಗಳ ಅಭಿವೃದ್ಧಿಯಲ್ಲಿ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳ ಹಾಗೂ ತರಬೇತುದಾರರ ಪಾತ್ರವು ಮುಖ್ಯವಾಗಿರುತ್ತದೆ. ಇಂದಿನ ಆಧುನಿಕ ಯುಗದಲ್ಲಿ ಪರಿಣಾಮ ಉಂಟು ಮಾಡುವಂತ ಪರಿಸರ ಮತ್ತು ಮೂಲಭೂತ ಸೌಕರ್ಯಗಳ ಅಗತ್ಯವಿರುತ್ತದೆ. ತರಬೇತುದಾರರಲ್ಲಿ ಪ್ರೇರಣೆ ನೀಡುವಂತ ಕೌಶಲ್ಯ, ಜ್ಞಾನ, ಸಮರ್ಪಣೆ ಮತ್ತು ಕಠಿಣ ಪರಿಶ್ರಮವು ಹೆಚ್ಚಾಗಿ ಬೇಕಾಗುತ್ತದೆ. ಇದರ ಅಭಾವ ಉಂಟಾದರೆ ಅಥವಾ ಗಂಭೀರತೆ ಇಲ್ಲದಿದ್ದರೆ ಅಥವಾ ವಾರ್ಷಿಕ ಕಾರ್ಯಕ್ರಮಗಳ ಗುರಿ ಸಾಧನೆಗಷ್ಟೇ ಕೇಂದ್ರಿಕರಿಸಿದರೆ ನಿಜವಾದ ಫಲಿತಾಂಶವು ಅನುತ್ಪಾದಕವಾಗುತ್ತದೆ. ಈ ವಿಷಯಗಳಲ್ಲಿ ಇಲಾಖೆಯು ಅಸಡ್ಡೆ ವಹಿಸಿದರೆ ಸಹಕಾರದಲ್ಲಿ ಮಾನವ ಸಂಪನ್ಮೂಲ ಅಭಿವೃದ್ಧಿಯು ಹಿನ್ನಡೆಯಾಗುತ್ತದೆ.

ಸಹಕಾರದಲ್ಲಿ ಸರಿಯಾದ ಮಾನವ ಸಂಪನ್ಮೂಲ ಯೋಜನೆ ಮತ್ತು ವ್ಯವಸ್ಥಾಪನೆ ಹಾಗೂ ಅಭಿವೃದ್ಧಿ ಇಲ್ಲದಿದ್ದರೆ ಅದರ ಪರಿಣಾಮದಿಂದ ಬೆಳವಣಿಗೆಯು ಕುಗ್ಗುತ್ತದೆ ಮತ್ತು ಗುಣಮಟ್ಟ ಕೆಡುತ್ತದೆ. ಅರ್ಧ ಜ್ಞಾನದಿಂದ ಹಾನಿ ಹೆಚ್ಚುತ್ತದೆ. ಉದ್ಯೋಗಿಗಳ ಕೊರತೆ ಅಥವಾ ಅಗತ್ಯಕ್ಕಿಂತ ಹೆಚ್ಚು ಅಥವಾ ಬಳಕೆ ಆಗದಿದ್ದರೆ – ಇದೆಲ್ಲದರ ಪರಿಣಾಮವು ಸಂಸ್ಥೆಯ ಭವಿಷ್ಯಕ್ಕೆ ಅಪಾಯ ಉಂಟು ಮಾಡುತ್ತದೆ. ಆದುದ್ದರಿಂದ, ಮಾನವ ಬಂಡವಾಳಕ್ಕೆ ಆದ್ಯತೆ ನೀಡುವುದರಿಂದ ಆರ್ಥಿಕ ಉತ್ಪಾದಕತೆಯು ಹೆಚ್ಚಿ ಲಾಭದಾಯಕ ಮುನ್ನಡೆ ಸಾಧ್ಯವಾಗುತ್ತದೆ.

The only waste of Human resources is letting them go unsed.

- Mark Victor Hanson

# ಸಹಕಾರ ಚಳುವಳಿಯ ಈ ಕಾಲ ಘಟ್ಟದಲ್ಲಿ ಪತ್ತಿನ ಸಹಕಾರ ಸಂಘಗಳ ವ್ಯವಸ್ಥೆ



ಶಶಿಧರ ಎಲೆ
ಸಹಕಾರ ಸಂಘಗಳ ಅಪರ
ನಿಬಂಧಕರು (ನಿವೃತ್ತ)
ಬೆಂಗಳೂರು

**ಇದು ಕನಿಷ್ಟ ಶೇ 9. ಎಂದು ನೀರೀಕ್ಷಿಸಲಾಗಿದೆ. ಈ ಸಮರ್ಪಕ ಬಂಡವಾಳ ಹೊಂದಬೇಕಾದರೆ ಸಂಘದ ಜವಾಬ್ದಾರಿ ಕಡೆಯಲ್ಲಿನ ಸಂಗತಿಗಳು, ಸಂಪನ್ಮೂಲಗಳೂ ಆದ ಪಾವತಿಯಾದ ಷೇರು ಬಂಡವಾಳವು ಅಧಿಕವಾಗಿರಬೇಕಾಗುತ್ತದೆ. ಇದರ ಹೆಚ್ಚಳಕ್ಕಾಗಿ ಸಂಘವು ಅವಶ್ಯ ತಂತ್ರಗಾರಿಕೆಯನ್ನು ಅನುಸರಿಸಬೇಕಾಗುತ್ತದೆ. ಮೂಲವಾಗಿ ಷೇರು ಬಂಡಾಳದ ಮೊತ್ತ ಕಡಿಮೆ ಇದ್ದಲ್ಲಿ ಉಪನಿಯಮ ತಿದ್ದುಪಡಿಯೊಂದಿಗೆ ಅದನ್ನು ಅಧಿಕಗೊಳಿಸುವುದು, ಸದಸ್ಯತ್ವವನ್ನು ಹೆಚ್ಚಿಸುವುದು. ಸಾಲ ವಿತರಿಸುವಲ್ಲಿ ತಪ್ಪದೇ ಹೆಚ್ಚುವರಿ ಷೇರು ಸಂಗ್ರಹಿಸುವುದು.**

ಭಾರತದ ಸಹಕಾರ ಚಳುವಳಿ ಆರಂಭವಾದದ್ದೇ 'ಪತ್ತಿನ ಸಹಕಾರ ಸಂಘಗಳ 'ಸ್ಥಾಪನೆ ಮೂಲಕ, ಆದುದರಿಂದ 'ಸಹಕಾರ ' ಮತ್ತು 'ಪತ್ತು' (ಸಾಲ) ಅವಿಭಾಜ್ಯ ಅಂಗಗಳಾಗಿ, 'ಒಂದೇ ನಾಣ್ಯದ ಎರಡು ಮುಖಗಳೇ' ಎಂಬಂತೆ ಇಂದಿಗೂ ಮುಂದುವರಿಯುತ್ತಿದೆ ಎಂದರೆ ತಪ್ಪಾಗಲಾರದು. ಐರೋಪ್ಯ ರಾಷ್ಟ್ರಗಳಲ್ಲಿ ಕೈಗಾರಿಕೆ ಕ್ರಾಂತಿಯ ಫಲವಾಗಿ , ಕಾರ್ಮಿಕರ ಕಲ್ಯಾಣಕ್ಕಾಗಿ 'ರಾಕ್ ಡೇಲ್' ಅಗ್ರಗಾಮಿಗಳಿಂದ 'ಗ್ರಾಹಕ' 'ಬಳಕೆದಾರರ' ಸಹಕಾರ ಸಂಘ ಸ್ಥಾಪನೆಯಾಗಿ ಒಂದು ಚಳುವಳಿಯ 'ಆಂದೋಲನ'ದ ರೂಪವನ್ನು ಪಡೆಯಿತು. ಜರ್ಮನಿ ಮತ್ತು ಇತರೆ ಐರೋಪ್ಯ ರಾಷ್ಟ್ರಗಳಲ್ಲಿ ರೈತರು 'ರಾಫಿಸನ್' ಮಾದರಿಸಹಕಾರ ಸಂಘಗಳನ್ನು ಆರಂಭಿಸಿದರು. ಜರ್ಮನಿಯಲ್ಲಿ ನಗರ ಮತ್ತು ಅರೆ ನಗರ ಪ್ರದೇಶಗಳಲ್ಲಿ ನೆಲೆಸಿದ್ದ ಕುಶಲ ಕರ್ಮಿಗಳು, ವ್ಯಾಪಾರಸ್ಥರು 'ಹರ್ಮನ್ ಷ್ಯೂಲ್ಜ್' ಎಂಬ ನ್ಯಾಯದೀಶ ರೊಬ್ಬರ ಪ್ರೇರಣೆಯಿಂದ ತಮ್ಮ ಆರ್ಥಿಕ ಅವಶ್ಯ ಪೂರೈಕೆಗಾಗಿ' ಪತ್ತಿನ ಸಹಕಾರ ಸಂಘಗಳ'ನ್ನು ಆರಂಭಿಸಿದರು. ತಮ್ಮ ಷೇರು ಬಂಡವಾಳ ಮತ್ತು ಠೇವಣಿಗಳನ್ನು ಸಂಗ್ರಹಿಸಿ ಅವಶ್ಯವಿದ್ದವರಿಗೆ ಬಡ್ಡಿ ಸಹಿತ ಸಾಲ ವಿತರಣೆ ಆರಂಭಿಸಿದರು. ಇವುಗಳನ್ನು' ಷ್ಯೂಲ್ಜ್' ಮಾದರಿ ಸಹಕಾರ ಸಂಘಗಳೆಂದು ಕರೆಯಲಾಯಿತು.

ಭಾರತದಲ್ಲಿ ಖಾಸಗಿ ಲೇವಾದೇವಿದಾರರಿಂದ ರೈತರು ಶೋಷಣೆಗೆ ಒಳಗಾಗುತ್ತಿದ್ದು ಒಂದು ರೀತಿಯ ' ರೈತರ ದಂಗೆ' ಪ್ರವೃತ್ತಿ ಭಾರತದಲ್ಲಿ ಕಂಡು ಬಂದಿದ್ದರಿಂದ ಇದರ ಪರಿಹಾರೋಪಾಯ ಕಂಡು ಹಿಡಿಯಲು ಅಂದಿನ (19 ನೇ ಶತಮಾನದ ಆದಿ 20ನೇ ಶತಮಾನದ ಆರಂಭ ) ಮದ್ರಾಸ್ವಾಂತ್ಯದಲ್ಲಿ ಬ್ರಿಟಿಷ್ ಸರ್ಕಾರ 'ಫ್ರೆಡ್ರಿಕ್ ನಿಕೋಲ್ಸನ್' ಎಂಬ ಅಧಿಕಾರಿಯನ್ನು ಐರೋಪ್ಯ ರಾಷ್ಟ್ರಗಳಿಗೆ ಕಳುಹಿಸಿ ಅಲ್ಲಿನ 'ಸಹಕಾರ ಚಳುವಳಿ' ಬಗ್ಗೆಮಾಹಿತಿ, ವರದಿ ಪಡೆಯಿತು. ಉತ್ತರ ಪ್ರದೇಶದಲ್ಲಿ 'ಡೂಪರ್ ನೆಕ್ಸ' ಎಂಬ ಅಧಿಕಾರಿಯನ್ನು ನೇಮಿಸಿ ವರದಿ ಪಡೆಯಿತು. ಇವುಗಳನ್ನು ಗಣನೆಗೆ ತೆಗೆದುಕೊಂಡ 'ಸರ್ ಎಡ್ವರ್ಡ್ ಲಾ' ಸಮಿತಿ ಒಂದು ವರದಿಯನ್ನು ನೀಡಿತು. ಇದರ ಆಧಾರದ ಮೇರೆಗೆ 'ಭಾರತದ ಪತ್ತಿನ ಸಹಕಾರ ಕಾಯ್ದೆ 1904' ಜಾರಿಗೆ ಬಂತು. ಈ ಕಾಯ್ದೆಯನ್ವಯ ಭಾರತಾದ್ಯಂತ ಗ್ರಾಮೀಣ ಪ್ರದೇಶಗಳಲ್ಲಿ 'ಸೇವ ಸಹಕಾರ ಸಂಘಗಳು' ಮತ್ತು ನಗರ ಪ್ರದೇಶಗಳಲ್ಲಿ 'ಪತ್ತಿನ ಸಹಕಾರ ಸಂಘಗಳು' ಆರಂಭ ಗೊಂಡವು. ಕರ್ನಾಟಕದಲ್ಲಿ ಗದಗ ಜಿಲ್ಲೆಯ 'ಕಣಗಿನಹಾಳ'ದಲ್ಲಿ ಪ್ರಪ್ರಥಮ ಸಹಕಾರ ಸಂಘ 1905ರಲ್ಲಿ ಸ್ಥಾಪನೆಯಾಗಿದ್ದನ್ನು ಗುರುತಿಸಲಾಗಿದೆ. ಇದರ ಪ್ರಥಮ ಅಧ್ಯಕ್ಷರಾದ, ಸಹಕಾರದ ಬಗ್ಗೆ ಬದ್ಧತೆ ತೋರಿದ 'ಶ್ರೀ ಸಿದ್ದನಗೌಡ ಸಂಣ ರಾಮನಗೌಡ ಪಾಟೀಲ'ರವರನ್ನು ಕರ್ನಾಟಕದ ಸಹಕಾರ ಪಿತಾಮಹ ಎಂದು ಗುರುತಿಸಲಾಗಿದೆ. ಅಂದಿನ ಗ್ರಾಮೀಣ ಪ್ರದೇಶದ ಸೇವಾ ಸಹಕಾರ ಸಂಘಗಳು ಮತ್ತು ಮುಂದುವರೆದ ಗ್ರಾಮೀಣ ಸಹಕಾರ ಚಳುವಳಿ ಸರ್ಕಾರದ ಅವಲಂಭಿತವಾಗಿ ಬೆಳವಣಿಗೆಯಾಗಿರುವುದನ್ನು ಕಾಣುತ್ತಲಿದ್ದೇವೆ. ಆದರೆ ನಗರ ಮತ್ತು ಅರೆ ನಗರ ಪ್ರದೇಶಗಳಲ್ಲಿ ಸರ್ಕಾರ ಅವಲಂಭಿತವಾಗದೇ ತಮ್ಮದೇ ಆದ ಸಂಪನ್ಮೂಲಗಳನ್ನು ಸಂಗ್ರಹಿಸಿ ಸ್ವಾವಲಂಭನೆಯಿಂದ, ಸ್ವತಂತ್ರವಾಗಿ 'ಷ್ಯೂ ಜ್' 'ಮಾದರಿ ಸಹಕಾರ ಸಂಘಗಳು ಬೆಳವಣಿಗೆ ಯಾಗಿರುವುದನ್ನು ಕಾಣುತ್ತಲಿದ್ದೇವೆ. ಇದಕ್ಕೆ ಕಾರಣ ಈ ಪ್ರದೇಶದಲ್ಲಿದ್ದ ಜನಗಳ ತಿಳುವಳಿಕೆ, ಜ್ಞಾನ, ಸಹಕಾರದ ಅರಿವು, ಇದರಿಂದ ಆಗುವ ಪ್ರಯೋಜನಗಳ ಬಗ್ಗೆ ಸುಲಭವಾಗಿ ಗ್ರಹಿಸಿದ್ದು ಅಲ್ಲದೇ ಅವರಲ್ಲಿ ಲಭ್ಯ ಸಂಪನ್ಮೂಲಗಳು. ಅದರಲ್ಲಿಯೂ ಈ ಚಳುವಳಿಯು ಅತ್ಯಂತ ಯಶಸ್ವಿಯಾಗಿ ಗುಜರಾತ್, ಮಹರಾಷ್ಟ, ಮತ್ತು ಕರ್ನಾಟಕದಲ್ಲಿ ಅತ್ಯಂತ ಯಶಸ್ವಿಯಾಗಿ ಬೆಳೆದು ಬಂದಿರುವುದನ್ನು ಕಾಣುತ್ತಲಿದ್ದೇವೆ.

ಈ ಸಹಕಾರ ಸಂಘಗಳು ಸಮಾನ ಮನಸ್ಕರು, ಸಮಾನ ಚಿಂತಕರು, ಸಮಾನ ಆರ್ಥಿಕತೆ, ಸಹಕಾರ ಮೌಲ್ಯವಾದ ಸಮಾನತೆ ಮತ್ತು ಐಕ್ಯತೆ ಅಥವ ಒಗ್ಗಟ್ಟಿನಿಂದ ಕೂಡಿದ ಸಮೂಹ ಗಳಲ್ಲಿ ಅತ್ಯಂತ ಯಶಸ್ವಿಯಾಗಿ ಸಂಘಟಿತ ವಾಗಿರುವುದನ್ನು ಕಾಣುತ್ತೇವೆ. ಈ ಸಹಕಾರ ಸಂಘಗಳ ಯಶಸ್ವಿಗೆ ಇದೂ ಒಂದು ಕಾರಣ ಎಂದರೆ ತಪ್ಪಾಗಲಾರದು. ಅನೇಕ ಆರಂಬಿಕವಾಗಿ ಸಹಕಾರ ಸಂಘಗಳಾಗಿದ್ದವು, ಮುಂದೆವ್ಯವಹಾರ ಗಾತ್ರವನ್ನು ಹಿಗ್ಗಿಸಿ ಕೊಂಡು ಪ್ರಾಥಮಿಕ (ಪಟ್ಟಣ) ಸಹಕಾರ ಬ್ಯಾಂಕ್ ಗಳಾಗಿ ಪರಿವರ್ತಿತ ವಾಗಿವೆ. ಅನೇಕ ಸಹಕಾರ ಸಂಘಗಳು ಭಾರತದಲ್ಲಿ ಸಹಕಾರ ಚಳುವಳಿ ಆರಂಭಗೊಂಡ ಸಮಯದಲ್ಲಿ ಸ್ಥಾಪನೆಯಾದ ಸಹಕಾರ ಸಂಘಗಳು ಈಗಲೂ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿದ್ದು 'ಶತಮಾನೋತ್ಸವ' ಆಚರಿಸಿವೆ. 125ನೇ ವಾರ್ಷಿಕೋತ್ಸವ ಸಂಭ್ರಮಾಚರಣೆಯ ಹೊಸ್ತಿಲಲ್ಲಿವೆ. ಇದಕ್ಕೆ ಕಾರಣ 'ಸಹಕಾರ ತತ್ವ'ಗಳ ಪಾಲನೆ

ಮತ್ತು ಸಂಘದ ಚಟುವಟಿಕೆಯಲ್ಲಿ ಸದಸ್ಯರ ನಿರಂತರ ಪಾಲ್ಗೊಳ್ಳುವಿಕೆ. ಹೀಗಾಗಿ ಸಹಕಾರ ಸಂಘಗಳು ಪೀಳಿಗೆಯಿಂದ ಪೀಳಿಗೆಗೆ ಮುಂದುವರಿಯುತ್ತಾ ಬಂದಿದೆ. 'ಈ ಕಾಲಘಟ್ಟದಲ್ಲಿ' ಈ ವ್ಯವಸ್ಥೆಯ ಮುಂದುವರಿಕೆ ನಮ್ಮ ಮುಂದಿರುವ ಪ್ರಶ್ನೆ. 90ರ ದಶಕದಿಂದ ಭಾರತದ ಆರ್ಥಿಕತೆ ಯು ಒಂದು' ದ್ವೀಪ' ವಾಗದೆ ಜಗತ್ತಿನ ಆರ್ಥಿಕತೆಯೊಂದಿಗೆ ಒಂದಾಗಿ 'ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣ'ದ ಭಾಗವಾಗಿ ಮೂರು ಟ್ರಿಲಿಯನ್ ಆರ್ಥಿಕತೆಯಿಂದ ಐದು ಟ್ರಿಲಿಯನ್ ಆರ್ಥಿಕತೆ ಯತ್ತ ಸಾಗುತ್ತಿದೆ. ಈ 'ಸಂಕ್ರಮಣ' ಕಾಲದಲ್ಲಿ 'ಸಹಕಾರ ಚಳುವಳಿ' ಸ್ಪರ್ಧೆಯನ್ನು ಎದುರಿಸಲಾಗದೆ ನಲುಗಿ ಹೋಗಿರುವುದನ್ನು ಕಾಣುತ್ತ ಇದ್ದೇವೆ, ಅನುಭವಿಸ ಇರುತ್ತೇವೆ. ಆದರೂ ಬಡ ಮತ್ತು ಮಧ್ಯಮ ವರ್ಗದವರಿಗೆ 'ಆಶಾಕಿರಣ' ಪತ್ತಿನ ಸಹಕಾರ ಸಂಘಗಳು ಎಂದರೆ ಅತಿಶಯೋಕ್ತಿಯಲ್ಲ. ಖಾಸಗಿ ಲೇವಾದೇವಿದಾರರೂ ಏನೇ ನಿರ್ಬಂಧಗಳಿದ್ದರೂ ಅತೀವ ಬಡ್ಡಿ, (ಮೀಟರ್ ಬಡ್ಡಿ) ಹೊರೆ ಹೊರೆಸಿ ಶೋಷಣೆ ಮಾಡುತ್ತಿರುತ್ತಾರೆ. ಖಾಸಗಿ, ವಾಣಿಜ್ಯ ಬ್ಯಾಂಕುಗಳು ಭದ್ರತೆ, ಮತ್ತು, ಅತಿ ಹೆಚ್ಚು ವ್ಯವಹರಿಸುವವರ ಕಡೆಗೆ ಗಮನ ಹರಿಸುತ್ತಾರೆ. ಇದಕ್ಕೆ ಪರಿಹಾರ ವೆಂದರೇ ನಮ್ಮದೇ ಆದ ಪ್ರಜಾಸತ್ತಾತ್ಮಕ, ಸಾಮಾಜಿಕ ನ್ಯಾಯ ದೊಡನೆ ಆರ್ಥಿಕ ಬೆಳವಣಿಗೆಗೆ ಕಾರಣ ವಾದ ನಮ್ಮ ಪತ್ತಿನ ಸಹಕಾರ ಸಂಘಗಳು.

ಕರ್ನಾಟಕದಲ್ಲಿ 5500ಕ್ಕೂ ಮೀರಿ ಈ ಸಹಕಾರ ಸಂಘಗಳು ಕಾರ್ಯನಿರ್ವಹಿಸುತ್ತಿವೆ. ಇವುಗಳ ಯಶಸ್ಸಿಗೆ ಇಲ್ಲಿನ ಸದಸ್ಯರ ಮತ್ತು ಅವುಗಳಲ್ಲಿ, 'ನಾಯಕತ್ವ' ವಹಿಸಿರುವ ಆಡಳಿತ ಮಂಡಳಿ.ಪ್ರಜ್ಞಾವಂತ ಸದಸ್ಯರು, ಜವಾಬ್ದಾರಿಯುತ, ಸದಸ್ಯರಿಗೆ ತಮ್ಮ ಹೊಣೆಗಾರಿಕೆ ಇದೆ,ತಮಗೆ ಅವರ ಉತ್ತರದಾಯಿತ್ವವಿದೆ, ತಾವು ಅವರ ಆಸೆ, ಆಕಾಂಕ್ಷೆ, ನಿರೀಕ್ಷೆಗೆ ತಕ್ಕಂತೆ ಕಾರ್ಯ ನಿರ್ವಹಿಸುತ್ತಿದ್ದೇವೆ ಎಂದು ಮೂಡಿಸಿರುವ ಭರವಸೆ. ಆದರೆ ಕೆಲವೇ ಕೆಲವು ಸಹಕಾರ ಸಂಘಗಳಲ್ಲಿ ಆಗಿರುವ 'ಹಗರಣ'ಗಳು ಇಡೀ ಸಹಕಾರ ವ್ಯವಸ್ಥೆಗೆ ಕಳಂಕ ತಂದಿರುವುದು, ಅದರ ವ್ಯಾಪಕ ಮಾಧ್ಯಮಗಳ ಪ್ರಚಾರ, ಸಾಮಾಜಿಕ ಮಾಧ್ಯಮಗಳಲ್ಲಿನ ಪ್ರಸಾರ ಉತ್ತಮ ವಾಗಿ ಕಾರ್ಯನಿರ್ವಹಿಸುತ್ತಿರುವ ಸಹಕಾರ ಸಂಘಗಳ ಮೇಲೂ ದುಷ್ಪರಿಣಾಮ ಬೀರುವುದನ್ನು ಕಾಣುತ್ತಿದ್ದೇವೆ. ಈ ಕಾಲಘಟ್ಟದಲ್ಲಿ ಸದಸ್ಯರ ನಂಬಿಕೆ ವಿಶ್ವಾಸ ಉಳಿಸಿಕೊಳ್ಳಬೇಕಾದ್ದು ಅನಿವಾರ್ಯ ಮತ್ತು ಅವಶ್ಯಕ.ನೌಕರರ ಪತ್ತಿನ ಸಹಕಾರ ಸಂಘಗಳಾಗ ಬಹುದು. ಅಥವ ಇತರೆ ಪತ್ತಿನ ಸಹಕಾರ ಸಂಘಗಳಾಗ ಬಹುದು ಕೆಲವೊಂದು ಆರ್ಥಿಕ ಶಿಸ್ತನ್ನು ಪಾಲಿಸ ಬೇಕಾಗುತ್ತದೆ. ಇದರಿಂದ ಸಹಕಾರ ಸಂಘವನ್ನು ಲಾಭದಾಯವಾಗಿ ನಡೆಸಿ ಸದಸ್ಯರಿಗೆ 'ಡಿವಿಡೆಂಡ್' (ಲಾಭಾಂಶ) ಘೋಷಣೆ ಯನ್ನು ಪ್ರತಿವರ್ಷ ಮಾಡಬಹುದಾಗಿದೆ. ಈ ಸಹಕಾರ ಸಂಘಗಳು 'ಬ್ಯಾರಿಕಿಂಗ್' ಪರಿಧಿಯಲ್ಲಿ ಬಾರದಿದ್ದರೂ ಮಾಡುತ್ತಿರುವ ವ್ಯವಹಾರವು 'ಬ್ಯಾಂಕಿಂಗ್' ಚಟುವಟಿಕೆಯೇ ಆಗಿರುತ್ತದೆ. ಠೇವಣಿ ಸಂಗ್ರಹಿಸುತ್ತಿದ್ದೇವೆ. ಆದರೆ ಸಾರ್ವಜನಿಕ ರಿಂದ ಲ್ಲ, ಸದಸ್ಯರಿಂದ ಮಾತ್ರ. ಠೇವಣಿಯನ್ನು ಸಾಲವಾಗಿ ವಿತರಿಸುತ್ತದ್ದೇವೆ, ಮತ್ತು ಹೂಡಿಕೆಗಳಲ್ಲಿ ತೊಡಗಿಸುತ್ತಿದ್ದೇವೆ. ಹೂಡಿಕೆ ಮತ್ತು ಸಾಲ ಮುಂಗಡ ಗಳ ಮೇಲೆ ಗಳಿಸುವ 'ಬಡ್ಡಿ'ಯೇ ಪ್ರಮುಖ ಆಧಾಯ. ಠೇವಣಿಗಳು ಮತ್ತು ಒಂದು ಸಮಯ ಇತರೆಡೆಯಿಂದ ತಂದ ಸಾಲವಿದ್ದಲ್ಲಿ ಅದರ ಮೇಲೆ ಪಾವತಿಸುವ ಬಡ್ಡಿಯೇ ಪ್ರಮುಖ ಖರ್ಚು. ಇದರ ಅಂತರವೇ ಗರಿಷ್ಟ ಲಾಭ ಇದರಲ್ಲಿ ಸಂಘವು ವ್ಯವಸ್ಥಾಪನ ವೆಚ್ಚ ಸರಿಯಾಗಿಸಿ ಉಳಿಕೆಯೇ ನಿವ್ವಳ ಲಾಭ ವಾಗುತ್ತದೆ. ನಿವ್ವಳ ಲಾಭ ಗಳಿಸದೆಯೇ ಸಹಕಾರ

ಸಂಘ ನಡೆಸಲಾಗುವುದಿಲ್ಲ. ಇದನ್ನು ಅರ್ಥ ಮಾಡಿಕೊಳ್ಳಲು ಸಂಘದ ಆಸ್ತಿ – ಜವಾಬ್ದಾರಿ ತಖ್ತೆಯ ಪ್ರತಿ ಅಂಶವನ್ನು ವಿಶ್ಲೇಷಿಸಿ ಅದರ ಆಗು ಹೋಗುಗಳ ಬಗ್ಗೆ ಅರಿಯ ಬೇಕಾಗಿರುತ್ತದೆ.

**ಷೇರು ಬಂಡವಾಳ :** ಇದು ಸಂಘದ ಮೂಲ ಬಂಡವಾಳ. ಪ್ರತಿ ಸದಸ್ಯ ಕನಿಷ್ಠ ಒಂದು ಷೇರು ಖರೀದಿಸುವುದು ಕಡ್ಡಾಯ. ಷೇರು ಬಂಡವಾಳ ವೆಚ್ಚ ರಹಿತ ಬಂಡವಾಳ. ನಿವ್ವಳ ಲಾಭದಲ್ಲಿ.

'ಲಾಭಾಂಶ' (ಡಿ ವಿಡೆಂಡ್) ಘೋಷಣೆ ಆದ ನಂತರ ಪಾವತಿಸಲಾಗುತ್ತದೆ. ಇದು 'ಸ್ವಂತ ಬಂಡವಾಳ'ದ ಭಾಗ. ಇದನ್ನು ಅಧಿಕ ಗೊಳಿಸಿಕೊಳ್ಳುವುದು ಅಗತ್ಯ. ಇದರಿಂದ ನಿಧಿಗಳ ಮೇಲಿನ ವೆಚ್ಚವನ್ನು ತಗ್ಗಿಸಬಹುದು. ತೊಡಕು ತೂಕ ಸಹಿತ ಆಸ್ತಿಗೆ ಬಂಡವಾಳದ ಅನುಪಾತ (ಸಮರ್ಪಕ ಬಂಡವಾಳ) ಹೆಚ್ಚಿಸಿ ಕೊಳ್ಳಲು ಅನುಕೂಲವಾಗುತ್ತದೆ. ಪಾವತಿಯಾದ ಷೇರು ಅಧಿಕ ಗೊಳಿಸಲು ಕೆಲವು ಮಾರ್ಗೋಪಾಯಗಳನ್ನು ಅನುಸರಿಸಬೇಕಾಗುತ್ತದೆ. ಸದಸ್ಯತ್ವದ ಹೆಚ್ಚಳ, ಷೇರಿನ ಮೌಲ್ಯ ಏರಿಸುವಿಕೆ (ಉಪನಿಯಮ ತಿದ್ದುಪಡಿ ಮೂಲಕ), ಸಾಲ ನೀಡುವಲ್ಲಿ ಹೆಚ್ಚುವರಿ ಷೇರು ಸಂಗ್ರಹಣೆ (ಶೇ–5–10)'

**ಹೆಚ್ಚು ಸಾಲ ನೀಡಿಕೆ. ನಿಧಿಗಳು :** ಸಂಘದ ನಿವ್ವಳ ಲಾಭ ವಿಲೇವಾರಿಯಿಂದ ನಿಧಿಗಳನ್ನು ಸೃಷ್ಟಿಸಲಾಗುತ್ತದೆ. ಸಹಕಾರ ಕಾಯ್ದೆ, ಉಪನಿಯಮ ರೀತಿ ಶೇ.25ಕ್ಕೆ ಕಡಿಮೆ ಇಲ್ಲದಂತೆ ಆಪದ್ಧನ (ಮೀಸಲು) ನಿಧಿ ತೆಗೆದಿರಿಸತಕ್ಕದ್ದು. ಯಾವುದೇ ಋಣಭಾರ ವಿಲ್ಲದ ನಿಧಿಗಳು ಸ್ವಂತ ಬಂಡವಾಳದ ಭಾಗವಾಗುತ್ತದೆ. ನಿಧಿಗಳು ನಿವ್ವಳ ಲಾಭ ವಿಂಗಡನೆಯಿಂದ ಸೃಷ್ಟಿಯಾಗಿದ್ದು, ವೆಚ್ಚ ರಹಿತ ಬಂಡವಾಳವಾಗಿರುತ್ತದೆ. ಶೇ.25ಕ್ಕೆ ಕಡಿಮೆ ಇಲ್ಲದಂತೆ ಎಂದು ಕಾಯ್ದೆ ಹೇಳುವಾಗ ಅದಕ್ಕಿಂತ ಹೆಚ್ಚು ತೆಗೆದಿರುವುವಲ್ಲಿ ಯಾವುದೇ ನಿರ್ಬಂಧವಿಲ್ಲ. ಆದುದರಿಂದ ಅದಕ್ಕಿಂತ ಅಧಿಕ ತೆಗೆದಿರಿಸುವುದು ವಿವೇಚನಾಯುತ ನಡೆಯಾಗುತ್ತದೆ. ಇದರಿಂದ ನಿಧಿಗಳ ಮೇಲಿನ ವೆಚ್ಚವನ್ನು ಕಡಿತಗೊಳಿಸಬಹುದು. ಸ್ವಂತ ಬಂಡವಾಳದ ಹೆಚ್ಚಳ ದಿಂದ ಸಮರ್ಪಕ ಬಂಡವಾಳವನ್ನು ಅಧಿಕ ಗೊಳಿಸಿ ಕೊಳ್ಳಬಹುದು. ನಿಧಿಗಳನ್ನು ಪ್ರತ್ಯೇಕವಾಗಿ ಹೂಡಿಕೆ ಮಾಡಿ, ಇತರೆಡೆಗೆ ಖರ್ಚು ಮಾಡದೇ ಇರುವುದು ಸಮಂಜಸ.

**ಠೇವಣಿಗಳು :** ಠೇವಣಿಗಳು ಪತ್ತಿನ ಸಹಕಾರ ಸಂಘದ ಪ್ರಮುಖ ಸಂಪನ್ಮೂಲ. ಠೇವಣಿಗಳು ವೆಚ್ಛ ಸಹಿತ ಬಂಡವಾಳ. ಇದು ಸ್ವಂತ ಬಂಡವಾಳ ವಲ್ಲ, ಇತರರಿಂದ ಪಡೆದ ಬಂಡವಾಳ. ಇದರ ಮೇಲಿನ ವೆಚ್ಚವನ್ನು ನಿಯಂತ್ರಣದಲ್ಲಿರಿಸಿಕೊಳ್ಳುವುದು ಅತಿ ಅಗತ್ಯ. ಇದರ ಮೇಲಿನ ವೆಚ್ಛ ಹೆಚ್ಚಳ ವಾದಲ್ಲಿ ನಿಧಿಗಳ ಮೇಲಿನ ವೆಚ್ಚ ಅಧಿಕ ಗೊಳ್ಳುತ್ತದೆ. ಗಳಿಕೆಯಲ್ಲಿನ ಅಂತರ ಕುಗ್ಗುತ್ತದೆ. ಆದುದರಿಂದ ಕಡಿಮೆ ವೆಚ್ಚದ ಠೇವಣಿಗಳಾದ (ಕಾಸಾ – ಕರೆಂಟ್ ಅಕೌಂಟ್ ಮತ್ತು ಸೇವಿಂಗ್ಸ್ ಅಕೌಂಟ್) ಚಾಲ್ತಿ ಖಾತೆ ಮತ್ತು ಉಳಿತಾಯ ಖಾತೆಗಳಲ್ಲಿ ನ ಠೇವಣಿ ಹೆಚ್ಚು ಇರುವಂತೆ ನೋಡಿಕೊಳ್ಳುವುದು. ಇವು ಬೇಡಿಕೆ ಠೇವಣಿಗಳು ಎನಿಸಿಕೊಳ್ಳುತ್ತವೆ. ನಿರಖು, ನಿಶ್ಚಿತ (ಫಿಕ್ಸಡ್) ಠೇವಣಿಗಳು ಅವಧಿ ಠೇವಣಿಗಳು ಎನಿಸಿಕೊಳ್ಳುತ್ತವೆ. ಇದರ ಮೇಲೆ ಹೆಚ್ಚು ಬಡ್ಡಿ ಧರ ನೀಡಲಾಗುತ್ತದೆ. ಇದರಿಂದ ಠೇವಣಿಗಳ ಮೇಲಿನ ವೆಚ್ಚ, ತನ್ಮೂಲಕ ನಿಧಿಗಳ ಮೇಲಿನ ವೆಚ್ಚ ಅಧಿಕ ಗೊಳುತ್ತದೆ. ಠೇವಣಿಗಳ

ಮೇಲೆ ಬಡ್ಡಿ ನಿಗದಿಸುವಲ್ಲಿ ಆಡಳಿತ ಮಂಡಳಿವಿವೇಚನಯುತವಾಗಿ ವರ್ತಿಸಬೇಕಾಗುತ್ತದೆ. ಠೇವಣಿಗಳ ಮಿಶ್ರಣದಲ್ಲಿ ಕಡಿಮೆ ವೆಚ್ಚದ ಠೇವಣಿ ಅಧಿಕವಿರುವಂತೆ, ಮತ್ತು ಹೆಚ್ಚಿನ ವೆಚ್ಚದ ಠೇವಣಿ ಕಡಿಮೆ ಇರುವಂತೆ ನೋಡಿಕೊಳ್ಳಬೇಕು. ಬ್ಯಾಂಕಿಂಗ್ ಸಂಸ್ಥೆಗಳಲ್ಲಿ ಸಮಯ ಮತ್ತು ಬೇಡಿಕೆ ಜವಾಬ್ದಾರಿ ನುಸಾರ ಶೇ.03ರ ಠೇವಣಿಗಳನ್ನು ನಗದು ಅಥವಾ ಬ್ಯಾಂಕ್ ಶಿಲ್ಕು ಆಗಿ (ನಗದು ಮೀಸಲು ಅನುಪಾತ – ಕ್ಯಾಶ್ ರಿಸರ್ವ ರೇಶಿಯೋ – ಸಿ.ಆರ್.ಆರ್) ಆಗಿ ಮತ್ತು ಶೇ 25 ನ್ನು ಶಾಸನ ಬದ್ಧ ದ್ರವ್ಯ ಆಸ್ತಿ (ಸ್ಟಾಚುಯರಿ ಲಿಕ್ವಿಡ್ ರೇಶಿಯೋ) ಆಗಿ ಹೂಡಿಕೆ (ನಿಶ್ಚಿತ ಠೇವಣಿ, ಸರ್ಕಾರಿ ರಕ್ಷಾ ಪತ್ರಗಳು) ಮಾಡಿರ ಬೇಕು. ಈ ರೂಢಿಗಳನ್ನು 'ಪತ್ತಿನ ಸಹಕಾರ ಸಂಘಗಳಲ್ಲಿ' ಅನು ಸರಿಸುವುದು ಒಳ್ಳೆಯದು. ಇದರಿಂದ ಠೇವಣಿದಾರರಿಗೆ ಅವಶ್ಯಕತೆಗನುಸಾರ' ಬೇಡಿಕೆ ಅನುಸಾರ ಹಿಂತಿರುಗಿಸಲು ಸಾಧ್ಯವಾಗುತ್ತದೆ. ಇದರಿಂದ ಠೇವಣಿದಾರರ (ಸದಸ್ಯರ) ವಿಶ್ವಾಸ ಗಳಿಸಲು ಸಾಧ್ಯ. ಎಲ್ಲ ಠೇವಣಿಗಳನ್ನು ಸಾಲದಲ್ಲಿ ತೊಡಗಿಸಿದಾಗ ಠೇವಣಿಗೆ ಬೇಡಿಕೆ ಬಂದಾಗ ಹಿಂತಿರುಗಿಸಲು ದ್ರವ್ಯ ಆಸ್ತಿ ಇರುವುದಿಲ್ಲ. ಇದರಿಂದ ಸದಸ್ಯರ (ಠೇವಣಿದಾರರ) ವಿಶ್ವಾಸ ವನ್ನು ಕಳೆದುಕೊಳ್ಳುತ್ತೇವೆ. ಅಲ್ಪಾವಧಿ ಠೇವಣಿಗಳು ನಮ್ಮಲ್ಲಿದ್ದಲ್ಲಿ ಅಲ್ಪಾವಧಿ ಸಾಲಗಳನ್ನು ನೀಡಬೇಕು. ದೀರ್ಘಾವಧಿ ಠೇವಣೆಗಳಿದ್ದಲ್ಲಿ ದೀರ್ಘಾವಧಿ ಸಾಲಗಳನ್ನು ನೀಡಬೇಕು. ಇದರಿಂದ ನಗದು ಒಳಹರಿವು ಮತ್ತು ಹೊರ ಹರಿವನ್ನು ಸಮತೋಲನ ಗೊಳಿಸಬಹುದು. ಇಲ್ಲದಿದ್ದಲ್ಲಿ ಠೇವಣಿದಾರರ ವಿಶ್ವಾಸವನ್ನು ಕಳೆದುಕೊಳ್ಳಬೇಕಾಗುತ್ತದೆ.ಇದಕ್ಕೆ ಆಸ್ತಿ ಜವಾಬ್ದಾರಿ ನಿರ್ವಹಣೆ ಎನ್ನಲಾಗುತದೆ. ಪತ್ತಿನ ಸಹಕಾರ ಸಂಘಗಳ ಮೇಲಿನ ಠೇವಣಿಗೆ ವಿಮೆ ಇರುವುದಿಲ್ಲ. ಇದಕ್ಕಾಗಿ ಪ್ರತ್ಯೇಕ ವಿಮಾ ಯೋಜನೆ ಅನುಷ್ಠಾನದ ಬಗ್ಗೆ ಆಲೋಚಿಸ ಬೇಕಿದೆ.

**ಪಡೆದ ಸಾಲಗಳು :** ಅನೇಕ ಪತ್ತಿನ ಸಹಕಾರ ಸಂಘಗಳು ಅದರಲ್ಲಿಯೂ ನೌಕರರ ಪತ್ತಿನ ಸಹಕಾರ ಸಂಘಗಳು ಇತರೆ ಬ್ಯಾಂಕ್/ಜಿ. ಕೇ. ಸ. ಬ್ಯಾಂಕ್ ನಿಂದ ನಗದು ಪತ್ತಿನ ಮಿತಿ ಪಡೆದು ಸದಸ್ಯರಿಗೆ ಸಾಲವಿತರಿಸುತ್ತಿವೆ. ಪಡೆದ ಸಾಲದ ಮೇಲಿನ ಬಡ್ಡಿ ಮತ್ತು ನೀಡಿದ ಸಾಲದ ಮೇಲಿನ ಅಂತರ ಲಾಭವಾಗುತ್ತದೆ. ಪಡೆದ ಸಾಲದ ಮೇಲೆ ವಿಧಿಸುವ ಷರತ್ತುಗಳನ್ನು ತಪ್ಪದೇ ಪಾಲಿಸಬೇಕು. ನೀಡಿದ ಸಾಲವನ್ನುಸಕಾಲದಲ್ಲಿ ವಸೂಲಿ ಮಾಡಿ ಬ್ಯಾಂಕಿಗೆ ಹಿಂತಿರುಗಿಸ ಬೇಕು. ಇಲ್ಲವಾದಲ್ಲಿ ಸಂಘವು ನಷ್ಟ ಅನುಭವಸುವ ಸಂಭವವಿರುತ್ತದೆ.

**ನಗದು/ ಬ್ಯಾಂಕ್ ಶಿಲ್ಕು :** ಆದಷ್ಟು ಕಡಿಮೆ ಪ್ರಮಾಣದಲ್ಲಿ ಆದರೆ ಅಗತ್ಯತೆ ಇರುವಷ್ಟು ಇರಿಸಿ ಕೊಳ್ಳಬೇಕು. ಇದರಿಂದ ಗಳಿಕೆ ಇರುವುದಿಲ್ಲ. ಅಲ್ಲದೆ ವಿಮೆ ಮುಂತಾದ ಸೌಲಭ್ಯಗಳನ್ನು ಹೊಂದಬೇಕು. ಇವುಗಳಿಗೆ ವೆಚ್ಚವನ್ನೂ ಮಾಡಬೇಕಾಗುತ್ತದೆ.

**ಹೂಡಿಕೆಗಳು :** ಅತಿ ಎಚ್ಚರದಿಂದ ಗಳಿಕೆ ಬರುವಂತ ಹೂಡಿಕೆಗಳಲ್ಲಿ ತೊಡಗಿಸಬೇಕು. ಡಿವಿಡೆಂಡ್, ಬಡ್ಡಿ ಬರುವಂತಹ ಹೂಡಿಕೆಗಳನ್ನು ಮಾಡಬೇಕು. ಆದಷ್ಟೂ ತೊಡಕು ರಹಿತವಾಗಿರುವಂತೆ ಹೂಡಿಕೆ ಮಾಡಬೇಕು. ಸುರಕ್ಷತಾ ಮತ್ತು ಎಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಬೇಕು.

**ಸಾಲಗಳು ಮತ್ತು ಮುಂಗಡಗಳು :** ಇದು ವೇ ಪತ್ತಿನ ಸಹಕಾರ ಸಂಘದ ಪ್ರಮುಖ ಆಸ್ತಿ. ಈ ಆಸ್ತಿಯ ಆರೋಗ್ಯ ಸಂಘದ ಆರೋಗ್ಯದ ಧ್ಯೋತಕ. ಸಾಲ ನೀಡುವಲ್ಲಿ ನಿಯಮಗಳನ್ನು ಪಾಲಿಸುವುದು.ಸಾಲವಸೂಲಾತಿ ಅಥವ ಮರುಪಾವತಿ ಸಾಲ ನೀಡಿಕೆಯಲ್ಲಿ ಪಾಲಿಸುವ ಪ್ರಾಮಾಣಿಕತೆ, ಮತ್ತು ನಿಷ್ಠೆಯನ್ನು ಬಹುತೇಕ ಅವಲಂಭಿಸಿರುತ್ತದೆ. ಒಂದು ಪತ್ತಿನ ಸಹಕಾರ ಸಂಘದಲ್ಲಿ 'ಸಾಲಗಾರ' ಕೂಡ' ಠೇವಣಿದಾರ 'ಸದಸ್ಯನಷ್ಟೇ ಪ್ರಮುಖ ಎಂಬುದನ್ನು ಮರೆಯಲಾಗದು. ಸಾಕಷ್ಟು ಸಾಲ, ಸಕಾಲದಲ್ಲಿ ಸಾಲ ನೀಡಿದಲ್ಲಿ ಸಾಲ ಮರುಪಾವತಿ (ವಸೂಲಾತಿ) ಅದು ಕಷ್ಟಕರ ವಾಗುವುದಿಲ್ಲ. ಇದರಲ್ಲಿ ಏರು ಪೇರು ಆದರೆ ಸಾಲ ವಸೂಲಾತಿ ಕಷ್ಟವಾಗುತ್ತದೆ ಮತ್ತು ಸಂಘವು ನಷ್ಟವನ್ನು ಅನುಭವಿಸುತ್ತದೆ. ಪತ್ತಿನ ಸಹಕಾರ ಸಂಘಗಳಲ್ಲಿ ಆಸ್ತಿಯ ವಿಂಗಡನೆ ರೂಡಿಯಲಿಲ್ಲ. ಇತರೆ ಪತ್ತಿನ ವಲಯದಲ್ಲಿ ಇದು ರೂಡಿಯಲ್ಲಿದೆ.ಅಲ್ಲದೆ ಅದರ ಶ್ರೇಣಿ ಅನುಸಾರ ಲಾಭನಷ್ಟ ತನ್ನೆಯಲ್ಲಿ ನಿವ್ವಳ ಲಾಭ ಪೂರ್ವದಲ್ಲಿ ಅದಕ್ಕಾಗಿ 'ಅವಕಾಶ' ಕಲ್ಪಿಸಲಾಗುತ್ತದೆ. ಅದೇ ರೂಡಿಯನ್ನು ಪತ್ತಿನ ಸಹಕಾರ ಸಂಘಗಳಲ್ಲಿ ಅನುಸರಿಸಿದರೆ ಸಂಘದ ಆರೋಗ್ಯವನ್ನು ಕಾಪಾಡಿಕೊಳ್ಳಬಹುದು. ಸಕಾಲದಲ್ಲಿ ಸಾಲ ವಸೂಲಾತಿ ಮತ್ತು ಸಾಲ ವಿತರಣೆಯಿಂದ ಸಂಘದ ವ್ಯವಹಾರವನ್ನು ವಿಸ್ತರಿಸ ಕೊಳ್ಳಬಹುದು. ಯಾವುದೇ ಒಂದೇ ವಿಧದ ಸಾಲ ವಿತರಿಸುವ ಬದಲಿಗೆ ವೈವಿಧ್ಯಮಯ ಸಾಲಗಳನ್ನು ವಿತರಿಸುವುದು ಉತ್ತಮ ಕ್ರಮ. ಒಂದು ವಲಯ ಕೊಂದರೆ ಗೀಡಾದರೂ ಮತ್ತೊಂದು ವಲಯ ಸಂಘವನ್ನು ಕಾಪಾಡುತ್ತದೆ.

**ಇತರೆ ಚಟುವಟಿಕೆಗಳು :** ಅನೇಕ ಸಹಕಾರ ಸಂಘಗಳ ಕ.ರಾ. ಪ.ಸ.ಸಂ. ಮಹಾಮಂಡಳ, ಸ್ಟಾಕ್ ಹೋಲ್ಡಿಂಗ್ ಕಾರ್ಪೊರೇಷನ್ ಆಫ್ ಇಂಡಿಯಾ ಒಡಂಬಡಿಕೆ ಯೊಂದಿಗೆ ಇ–ಸ್ಟಾಂಪ್ ವಿತರಣೆ ಮಾಡುತ್ತಿದ್ದು ಆಧಾಯ ಗಳಿಸುತ್ತಿವೆ. ಇತರೆ ಬ್ಯಾಂಕ್ ಗಳ ಸಹಯೋಗ ದೊಂದಿಗೆ , ಆರ್. ಟಿ.ಜಿ.ಎಸ್. ನೆಫ್ಟ, ಸೌಲಭ್ಯ ಒದಗಿಸುತ್ತಿವೆ. ಸಮರ್ಪಕ ಬಂಡವಾಳ: (ತೂಕ ಸಹಿತ ಆಸ್ತಿ ಗೆ ಸ್ವಂತ ಬಂಡವಾಳದ ಅನುಪಾತ - Capital to risk weighted asset ratio-CRAR): ಪತ್ತಿನ ಸಹಕಾರ ಸಂಘ ವಲಯ ಹೊರತು ಪಡಿಸಿ ಇತರೆ ವಲಯಗಳಲ್ಲಿ ಸಂಸ್ಥೆ ಯ ಆರೋಗ್ಯದ ಅರಿವಿಗೆ ಇದನ್ನು ಲೆಕ್ಕ ಹಾಕಲಾಗುತ್ತಿದೆ. ಇದು ಕನಿಷ್ಟ ಶೇ 9 ಇರಬೇಕೆಂದು ನಿರೀಕ್ಷಿಸಲಾಗಿದೆ. ಈ ರೂಢಿ ಪದ್ಧತಿ ಈ ವಲಯದಲ್ಲಿ ಬಂದರೆ ಒಳ್ಳೆಯದು. ಇದರಿಂದ ಸದಸ್ಯರಿಗೆ ಉತ್ತಮ ಮಾಹಿತಿ ಒದಗಿಸಿದಂತಾಗುತ್ತದೆ.

ಕರ್ನಾಟಕದಲ್ಲಿ ಪತ್ತಿನ ಸಹಕಾರ ಸಂಘಗಳು ತಮ್ಮದೇ ಮಹಾ ಮಂಡಳ ರಚಿಸಿಕೊಂಡಿದ್ದು, ಮಹಾ ಮಂಡಳವು ಈ ಸಂಘಗಳ ಸಮತೋಮುಖ ಅಭಿವದ್ಧಿಗೆ ಶ್ರಮಿಸುತ್ತಿರುವುದು ಶ್ಲಾಘನೀಯ.

ಮಹಾಮಂಡಳವು ಶಿಕ್ಷಣ, ತರಬೇತಿ, ಪ್ರಚಾರದ ಮೂಲಕ ಈ ಸಹಕಾರ ಸಂಘಗಳ ಬಲವರ್ಧನೆಗೆ ಕಾರಣವಾಗಿರುತ್ತದೆ. ಇದರಿಂದ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಲಕ್ಷಾಂತರ ಜನರಿಗೆ ಉದ್ಯೋಗಸೃಷ್ಟಿ ಮತ್ತು ಆರ್ಥಿಕ ಬೆಳವಳಿಗೆಗೆ ಕಾರಣವಾಗಿರುವುದು ಹೆಮ್ಮೆಯ ವಿಷಯವಾಗಿದೆ. 'ಸಣ್ಣದು ಸುಂದರ' ಮತ್ತು ಇದರ ಒಕ್ಕೂಟ ವ್ಯವಸ್ಥೆಯಿಂದ ಸದಸ್ಯರ ಆರ್ಥಿಕ ಪ್ರಗತಿಗೆ ಕಾರಣವಾಗಿರುವುದು

ಶ್ಲಾಘನೀಯ ಮತ್ತು ಈ ವ್ಯವಸ್ಥೆ ಆರ್ಥಿಕ ಪ್ರಗತಿಯೊಡನೆ ಸಾಮಾಜಿಕ ನ್ಯಾಯಕ್ಕೆ ಇದು ಅತ್ಯುತ್ತಮ ಮಾದರಿಯಾಗಿರುತ್ತದೆ. ಈ ಕಾಲಘಟ್ಟದಲ್ಲಿ ಮತ್ತು ಮುಂದೆಯೂ ಈ ವ್ಯವಸ್ಥೆ ಪ್ರಸ್ಥುತತೆ ಉಳಿಸಿಕೊಳ್ಳುವುದರಲ್ಲಿ ಸಂಶಯವಿಲ್ಲ. ಹಣ ಎಂಬುದು ಗೊಬ್ಬರ ವಿದ್ದಂತೆ, ಗುಡ್ಡೆ ಹಾಕಿಟ್ಟರೆ ದುರ್ನಾತ ಬೀರುತ್ತದೆ. ಹರಡಿದರೆ ಬೆಳೆಯುತ್ತಾ ಹೋಗುತ್ತದೆ.

**– ಜೆ.ಆರ್.ಡಿ. ಟಾಟಾ.**

# ಕರ್ನಾಟಕ ರಾಜ್ಯದಲ್ಲಿ ಪತ್ತಿನ ಸಹಕಾರ ಸಂಘಗಳ ಪಾತ್ರ



ಲಕ್ಷ್ಮೀಪತಯ್ಯ, ಕೆ.ಸಿ.ಎಸ್.,
ಜಂಟಿ ನಿಬಂಧಕರು ಹಾಗೂ
ಕಾರ್ಯದರ್ಶಿ,
ರಾಜ್ಯ ಸಹಕಾರ ಮಹಾಮಂಡಳ
ನಿ., ಬೆಂಗಳೂರು

**ಪತ್ತಿನ ಸಹಕಾರ ಸಂಘಗಳು ಪ್ರಜಾಸತಾತ್ಮಕ ಸಂಸ್ಥೆಗಳಾಗಿದ್ದು ಒಬ್ಬ ಸದಸ್ಯ ಒಂದು ಮತ ಆಗಿದ್ದು ಚುನಾಯಿತ ಆಡಳಿತ ಮಂಡಳಿ ಜವಾಬ್ದಾರಿಯುತವಾಗಿ ಕರ್ತವ್ಯ ನಿರ್ವಹಿಸಬೇಕಾಗಿರುತ್ತದೆ. ಆಡಳಿತದಲ್ಲಿ ವ್ಯವಸ್ಥಾಪನೆಯಲ್ಲಿ ಉತ್ತಮ ಆಡಳಿತ ಸೂತ್ರಗಳನ್ನೇ ಪಾಲಿಸಬೇಕು, ನಿರ್ಧಾರಗಳು ಪಾರದರ್ಶಕತೆ ನಿಸ್ಪಕ್ಷಪಾತ ನಿರ್ಧಾರಗಳನ್ನು ತೆಗೆದುಕೊಳ್ಳುವಂತಿರಬೇಕು. ಅನೇಕ ದುರುಪಯೋಗ ಪ್ರಕರಣಗಳು ಸದಸ್ಯರ ಠೇವಣಿದಾರರ ಹಿತಾಸಕ್ತಿ ಕಾಪಾಡುವಲ್ಲಿ ವಿಫಲವಾಗದಂತೆ ನೋಡಿಕೊಳ್ಳಬೇಕು.**

ಭಾರತದಲ್ಲಿ ಸಹಕಾರ ಚಳುವಳಿ ಆರಂಭವಾದದ್ದು ರೈತರಿಗೆ ಸಹಕಾರ ಸಂಘಗಳ ಮೂಲಕ ಕೃಷಿ ಸಾಲಗಳನ್ನು ನೀಡಿ ಲೇವಾದೇವಿದಾರರಿಂದ ಆಗುತ್ತಿದ್ದ ಶೋಷಣೆಯಿಂದ ಅವರನ್ನು ಮುಕ್ತಿಗೊಳಿಸಬೇಕೆಂಬ ಉದ್ದೇಶದಿಂದ ಹೀಗಾಗಿ, ಆರಂಭದಲ್ಲಿ ಕೃಷಿ ಪತ್ತಿನ ಸಹಕಾರ ಸಂಘಗಳಿಗೆ ಹೆಚ್ಚಿನ ಪ್ರೋತ್ಸಾಹ ದೊರೆಯಿತು.

ಕೃಷಿಯೇತರ ಪತ್ತಿನ ಸಂಘಗಳು ಎಂದರೆ ಕೃಷಿ ಹೊರತಾದ ಉದ್ದೇಶಗಳಿಗೆ ಸಾಲ ಸೌಲಭ್ಯಗಳನ್ನು ನೀಡುವ ಸಹಕಾರ ಸಂಘಗಳು. ಇವು ಪ್ರಾಥಮಿಕ ಸಹಕಾರ ಸಂಸ್ಥೆಗಳಾಗಿರುತ್ತವೆ. ಪಟ್ಟಣ ಮತ್ತು ನಗರ ಪ್ರದೇಶಗಳ ಬಡ ಮತ್ತು ಮಧ್ಯಮ ವರ್ಗದ ಜನರಿಗೆ ವಾಣಿಜ್ಯ ಬ್ಯಾಂಕುಗಳಿಂದ ಸಾಲದ ಭದ್ರತೆ, ಸಾಲದ ವಸೂಲಾತಿ ಸಮಸ್ಯೆ ಇತ್ಯಾದಿ ಸಮಸ್ಯೆಗಳ ಆಧಾರದ ಮೇಲೆ ಸಾಲಗಳು ದೊರೆಯುತ್ತಿರಲಿಲ್ಲ. ಇಂತಹ ಸಂದರ್ಭದಲ್ಲಿ ಪಟ್ಟಣ ಮತ್ತು ನಗರ ಪ್ರದೇಶಗಳ ಬಡವರು, ಮಧ್ಯಮ ವರ್ಗದವರು, ವರ್ತಕರು, ವೇತನದಾರರು, ಕುಶಲ ಕರ್ಮಿಗಳು, ಇತ್ಯಾದಿ ಜನರಿಗೆ ಸಾಲದ ಅಗತ್ಯತೆ ಮತ್ತು ಬೇಡಿಕೆ ಉಂಟಾದ ಹಿನ್ನೆಲೆಯಲ್ಲಿ ಜರ್ಮನಿಯ ಷೂಲ್ಸ್ ಮಾದರಿಯ ಪತ್ತಿನ ಸಹಕಾರ ಸಂಘಗಳನ್ನು ಸ್ಥಾಪಿಸಲು ಪ್ರೋತ್ಸಾಹ ನೀಡಲಾಯಿತು. ಕ್ರಮೇಣವಾಗಿ ಭಾರತದ ಪಟ್ಟಣ ಮತ್ತು ನಗರ ಪ್ರದೇಶಗಳಲ್ಲಿ ಕೃಷಿಯೇತರ ಪತ್ತಿನ ಸಹಕಾರ ಸಂಘಗಳು ಸ್ಥಾಪನೆಯಾದವು.

ಕರ್ನಾಟಕದಲ್ಲಿ 1904 ರಲ್ಲಿ ಸಹಕಾರ ಕಾಯ್ದೆ ಜಾರಿಗೆ ಬಂದಿತು. ಇದರ ಪರಿಣಾಮದಿಂದಾಗಿ ಗ್ರಾಮೀಣ ಭಾಗದಲ್ಲಿ ವ್ಯವಸಾಯ ಸೇವಾ ಸಹಕಾರ ಸಂಘಗಳು ಹಾಗೂ ನಗರ ಪ್ರದೇಶದಲ್ಲಿ ಪತ್ತಿನ ಸಹಕಾರ ಸಂಘಗಳು ಸ್ಥಾಪನೆಯಾಗುವ ಮೂಲಕ ಜನಸಾಮಾನ್ಯರ ಆರ್ಥಿಕ ಸ್ವಾವಲಂಬನೆಗೆ ದಾರಿಯಾದವು. ಅಂದರೆ, ಕರ್ನಾಟಕದ ನೆಲ ಸಹಕಾರಿ ಸಂಘಗಳ ಸ್ಥಾಪನೆಗೆ ಯೋಗ್ಯ ಪ್ರಯೋಗಾಲಯವಾಗಿದೆ. ಆದ್ದರಿಂದಲೇ ಕರ್ನಾಟಕಕ್ಕೆ ಭಾರತದ ಸಹಕಾರಿ ಆಂದೋಲನದ ತೊಟ್ಟಿಲು ಎಂದು ಕರೆಯಲಾಗುತ್ತಿದೆ. ಕೃಷಿ ಪತ್ತು ಮತ್ತು ಕೃಷಿಯೇತರ ಪತ್ತು ಪ್ರಾರಂಭವಾಯಿತು. ಬೆಂಗಳೂರಿನಲ್ಲಿ ಮೊದಲನೆಯದಾಗಿ ಪತ್ತಿನ ಸಹಕಾರ ಸಂಘವು ಸ್ಥಾಪನೆಯಾಗುವ ಮೂಲಕ ಪತ್ತಿನ ಸಹಕಾರ ವಲಯದ ಬೆಳವಣಿಗೆಗೆ ನಾಂದಿಹಾಡಿತು. ಹೀಗೆ ಪ್ರಾರಂಭವಾದ ಪತ್ತಿನ ಸಹಕಾರ ಸಂಘಗಳು ಇಂದು ಬ್ಯಾಂಕಿಂಗ್ ಚಟುವಟಿಕೆಗಳನ್ನು ತನ್ನ ಗ್ರಾಹಕರಿಗೆ ನೀಡುವ ಮೂಲಕ ಕರ್ನಾಟಕದ ಸಹಕಾರಿ ಆಂದೋಲನದಲ್ಲಿ ತನ್ನದೇ ಆದ ಸ್ಥಾನವನ್ನು ಹೊಂದಿವೆ.

ನಗರ ಪ್ರದೇಶದ ಅಬಲವರ್ಗದವರ ಆರ್ಥಿಕ ಸೌಲಭ್ಯಗಳ ಪೂರೈಕೆಯಲ್ಲಿ ಪತ್ತಿನ ಸಹಕಾರ ಸಂಘಗಳು ಬಹಳ ಮಹತ್ವದ ಪಾತ್ರವನ್ನು ನಿರ್ವಹಿಸಿಕೊಂಡು ಬರುತ್ತಿವೆ. ಸಾರ್ವಜನಿಕರ ಹಿತಾಸಕ್ತಿಗಾಗಿ ಅವರ ಆರ್ಥಿಕ ಸ್ವಾವಲಂಬನೆಯ ಯಶಸ್ಸಿನೊಂದಿಗೆ ಸಮಾಜದ ಪ್ರಗತಿಯೂ ಸಹ ಈ ಸಂಸ್ಥೆಗಳ ಉದ್ದೇಶವಾಗಿದೆ. ಆರ್ಥಿಕ ಸಬಲೀಕರಣದ ಮೂಲಕ ಆರ್ಥಿಕ ಮತ್ತು ಸಾಮಾಜಿಕ ಪರಿವರ್ತನೆ ಮಾಡುವುದು ಸಹಕಾರದ ಮೂಲ ಉದ್ದೇಶ. ಇದು ಪ್ರಜಾಪ್ರಭುತ್ವದ ಪರಿವರ್ತನೆಗೆ ಪೂರಕ ಅನಿಸಿದೆ. ಇದರಿಂದ ಸಾರ್ವಜನಿಕ ವಲಯ ಮತ್ತು ಖಾಸಗಿ ಕ್ಷೇತ್ರ ಹಾಗೂ ಸಹಕಾರಿ ಕ್ಷೇತ್ರದ ಪೈಪೋಟಿಯನ್ನು ಎದುರಿಸಲು ಸಾಧ್ಯವಾಗುತ್ತದೆ ಹಾಗೂ ಅತಿ ಸಣ್ಣ ಹಿಡುವಳಿದಾರರು, ಸಣ್ಣ ವ್ಯಾಪಾರಿಗಳು, ಚಿಲ್ಲರೆ ಮಾರಾಟಗಾರರು ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ, ಔದ್ಯೋಗಿಕವಾಗಿ ಮುಂದುವರೆಯಲು ಸಾಧ್ಯವಾಗುತ್ತದೆ.

ಕರ್ನಾಟಕ ರಾಜ್ಯದಲ್ಲಿ ಪತ್ತಿನ ಸಹಕಾರ ಸಂಘಗಳು ಉತ್ತಮವಾದ ಸೇವೆ ನೀಡುವಲ್ಲಿ ಯಶಸ್ಸನ್ನು ಸಾಧಿಸಿದೆ. ಇನ್ನೂ ಪತ್ತಿನ ಸಹಕಾರ ವಲಯವು ಸಹಕಾರ ಚಳುವಳಿಯ ಪ್ರಮುಖ ಅಂಗವಾಗಿದ್ದು, ವಿಶೇಷತೆಯನ್ನು ಪಡೆದುಕೊಂಡಿದೆ ಸಹಕಾರ ನಿಜ ಅರ್ಥದಲ್ಲಿ ಸ್ವತಂತ್ರ ಸ್ವಾವಲಂಭಿ, ಸ್ವಾಯತ್ತತೆಯ ಮೂಲಕ ಪತ್ತಿನ ವಲಯ ಉತ್ತಮವಾದ ಸೇವೆಯನ್ನು ಸದಸ್ಯರುಗಳಿಗೆ ನೀಡುವ ಮೂಲಕ ಸದಸ್ಯರುಗಳ ಆರ್ಥಿಕ ನೆರವು ನೀಡಿ ಅವರಿಗೆ ಸ್ವಾವಲಂಭಿ ಬದುಕು ಕಟ್ಟಿಕೊಳ್ಳಲು ನೆರವಾಗಿದೆ. ಅನ್ಯರನ್ನು ಅವಲಂಭಿಸದೆ ತಮ್ಮ ಸದಸ್ಯರಿಂದಲೇ

ಠೇವಣಿಗಳನ್ನು ಸಂಗ್ರಹಿಸಿ ಸಾಲ ಸೌಲಭ್ಯ ನೀಡಿ ಆರ್ಥಿಕ ಚೇತರಿಕೆಗೆ ದೊಡ್ಡ ಕೊಡುಗೆ ನೀಡುತ್ತಿದೆ. ಈಗಾಗಲೇ ನಮ್ಮ ರಾಜ್ಯದಲ್ಲಿ ಸುಮಾರು 5500 ಪತ್ತಿನ ಸಹಕಾರ ಸಂಘಗಳು ಕಾರ್ಯನಿರ್ವಹಿಸುತಿದ್ದು, ಇವುಗಳಲ್ಲಿ ಹಲವು ಸಂಘಗಳು ಉತ್ತಮ ಸಾಧನೆ ಮಾಡುವ ಮೂಲಕ ರಾಜ್ಯದಲ್ಲಿ ಮಾದರಿ ಸಹಕಾರ ಸಂಘಗಳಾಗಿ ಗುರುತಿಸಿಕೊಂಡಿವೆ.

ಪತ್ತಿನ ಸಹಕಾರ ಸಂಘಗಳು ಸಾಲ ಸೌಲಭ್ಯದಿಂದ ಸಮಾಜದ ಮಧ್ಯಮ ವರ್ಗದ ಜನರು ನೌಕರಿ ಮಾಡುವವರು, ಸಣ್ಣಪುಟ್ಟ ಕೈಗಾರಿಕೆ ನಡೆಸುವವರು ಆರ್ಥಿಕವಾಗಿ ಚೈತನ್ಯ ಪಡೆದಿದ್ದಾರೆ. ಹೀಗೆ ಪತ್ತಿನ ವಲಯ ಹಲವು ವರ್ಗದವರಿಗೆ ಆರ್ಥಿಕವಾಗಿ ನೆರವಾಗಲು ನೆರವಾಗುತ್ತಿವೆ.

**ಪತ್ತಿನ ಸಹಕಾರ ಸಂಘಗಳು ತನ್ನ ವ್ಯವಹಾರಕ್ಕೆ ಬೇಕಾಗುವ ಬಂಡವಾಳವನ್ನು ಈ ಕೆಳಕಂಡಂತೆ ಸಂಗ್ರಹಿಸಲಾಗುತ್ತಿದೆ**

- ಸದಸ್ಯರಿಂದ ಪಾವತಿಯಾದ ಷೇರು ಹಣ, ಷೇರು ಶುಲ್ಕ ಮತ್ತು ಪ್ರವೇಶ ಧನ
- ಸರ್ಕಾರದಿಂದ ಪಡೆದ ಷೇರು ಹಣ
- ಕಾಯ್ದಿಟ್ಟ ನಿಧಿ ಹಾಗೂ ಇತರೆ ನಿಧಿಗಳು
- ಸದಸ್ಯರಿಂದ ಮತ್ತು ಸಾರ್ವಜನಿಕರಿಂದ ಪಡೆದ ವಿವಿಧ ಠೇವಣಿಗಳು.



1990ರ ದಶಕದ ಪ್ರಾರಂಭದಿಂದಲೇ ಭಾರತದಲ್ಲಿ ಹಣಕಾಸು ಕ್ಷೇತ್ರದ ಸುಧಾರಣೆಗಳನ್ನು ಜಾರಿಗೊಳಿಸಲಾಯಿತು. ಇದು ದೇಶದ ಸರ್ವೋತ್ತಮ ಅಭಿವೃದ್ಧಿಗೆ ಅನುಕೂಲಕರ ವಾತಾವರಣವನ್ನು ಸೃಷ್ಟಿಸಲು ಸಹಾಯಕವಾಗಿತ್ತು. ಪತ್ತಿನ ಸಹಕಾರ ಸಂಘಗಳಿಗೆ ತಮ್ಮ ವ್ಯವಸ್ಥಿತ ವೈಫಲ್ಯವನ್ನು, ಅಪಾಯಗಳನ್ನು ತಪ್ಪಿಸುವುದಕ್ಕಾಗಿ ಈ ಕೆಳಗಿನ ವಿವೇಕದ ಸೂತ್ರಗಳನ್ನು ಅಳವಡಿಸಲು ಶಿಫಾರಸ್ಸು ಮಾಡಲಾಯಿತು.

- ಅವಶ್ಯವಿರುವಷ್ಟು ಸಮರ್ಪಕ ಬಂಡವಾಳೀಕರಣ
- ಸಮಂಜಸವಾದ ಲೆಕ್ಕಚಾರ ವಿಧಾನಗಳನ್ನು ಅಳವಡಿಸಿಕೊಳ್ಳುವುದು.
- ಸಾಲ ಸಂಘದ ನೈಜ್ಯವಾದ ಹಣಕಾಸು ಸ್ಥಿತಿಗತಿಯನ್ನು ವರದಿ ಮಾಡುವುದು.
- ಪರಿಣಾಮಕಾರಿ ಮೇಲುಸ್ತುವಾರಿ ನಡೆಸುವುದು.

ಸಾಲ ಪತ್ತಿನ ಕ್ಷೇತ್ರದಲ್ಲಿ ವಸೂಲಾಗದ ಸಾಲಗಳು ವಿಷ ವರ್ತುಲವೊಂದನ್ನು ಹುಟ್ಟು ಹಾಕುತ್ತವೆ. ಇದರಿಂದ ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಈ ನಿಟ್ಟಿನಲ್ಲಿ ಪತ್ತಿನ ಸಹಕಾರ ಸಂಘಗಳು ನಿಯಾಮಾನುಸಾರದಿಂದ ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾಗುತ್ತದೆ.

ಕರ್ನಾಟಕದಲ್ಲಿ ಈಗಾಗಲೇ ಸುಮಾರು 5500 ಪತ್ತಿನ ಸಹಕಾರ ಸಂಘಗಳು ಕಾರ್ಯನಿರ್ವಹಿಸುತ್ತಿದ್ದು, ಅಂದಾಜು 49 ಲಕ್ಷ ಸದಸ್ಯತ್ವವನ್ನು ಹೊಂದಿವೆ. 114799 ಕೋಟಿ ರೂ. ಠೇವಣಿಯನ್ನು ಹೊಂದುವ ಮೂಲಕ 222482 ಕೋಟಿ ರೂ. ಸಾಲವನ್ನು ನೀಡುವುದರ ಮೂಲಕ ಸಣ್ಣ ಉದ್ದಿಮೆ, ಕೈಗಾರಿಕೆ, ಕರಕುಶಲ ಕಾರ್ಯಗಳಿಗೆ ಸೇರಿದಂತೆ ಅನೇಕ ರೀತಿಯ ಆರ್ಥಿಕ ಸೌಲಭ್ಯಗಳನ್ನು ಈ ಸಂಸ್ಥೆಗಳು ಪೂರೈಸುವ ಮೂಲಕ ಸಹಕಾರ ಚಳವಳಿಯ ತತ್ವ ಹಾಗೂ ಆದರ್ಶಗಳಿಗೆ ಅನುಗುಣವಾಗಿ ಕಾರ್ಯನಿರ್ವಹಿಸುವಲ್ಲಿ ಯಶಸ್ವಿಯಾಗಿವೆ.

ಕರ್ನಾಟಕ ರಾಜ್ಯ ಪತ್ತಿನ ಸಹಕಾರ ಸಂಘವು ಈ ನಿಟ್ಟಿನಲ್ಲಿ ಉತ್ತಮ ಕಾರ್ಯನಿರ್ವಹಿಸುತ್ತಿದ್ದು ಹೆಚ್ಚಿನ ಲಾಭಾಂಶದಲ್ಲಿ ತನ್ನ ಉದ್ದೇಶಗಳನ್ನು ಪೂರೈಸುತ್ತಾ ಬಂದಿದೆ.

ಪತ್ತಿನ ಸಹಕಾರ ಸಂಘಗಳನ್ನು ಇನ್ನು ಹೆಚ್ಚಿನ ಅಭಿವೃದ್ಧಿಗೊಳಿಸುವಲ್ಲಿ ಈ ಕೆಳಗಿನ ಕೆಲವು ಪ್ರಮುಖ ಅಂಶಗಳನ್ನು ಗುರುತಿಸಬಹುದು.

**ಪತ್ತಿನ ಸಹಕಾರ ಸಂಘಗಳು ಪ್ರಜಾಸತಾತ್ಮಕ ಸಂಸ್ಥೆಗಳು :**

ಪತ್ತಿನ ಸಹಕಾರ ಸಂಘಗಳು ಪ್ರಜಾಸತಾತ್ಮಕ ಸಂಸ್ಥೆಗಳಾಗಿದ್ದು ಒಬ್ಬ ಸದಸ್ಯ ಒಂದು ಮತ ಆಗಿದ್ದು ಚುನಾಯಿತ ಆಡಳಿತ ಮಂಡಳಿ ಜವಾಬ್ದಾರಿಯುತವಾಗಿ ಕರ್ತವ್ಯ ನಿರ್ವಹಿಸಬೇಕಾಗಿರುತ್ತದೆ. ಆಡಳಿತದಲ್ಲಿ ವ್ಯವಸ್ಥಾಪನೆಯಲ್ಲಿ ಉತ್ತಮ ಆಡಳಿತ ಸೂತ್ರಗಳನ್ನೇ ಪಾಲಿಸಬೇಕು, ನಿರ್ಧಾರಗಳು ಪಾರದರ್ಶಕತೆ ನಿಸ್ಪಕ್ಷಪಾತ ನಿರ್ಧಾರಗಳನ್ನು ತೆಗೆದುಕೊಳ್ಳುವಂತಿರಬೇಕು. ಅನೇಕ ದುರುಪಯೋಗ ಪ್ರಕರಣಗಳು ಸದಸ್ಯರ ಠೇವಣಿದಾರರ ಹಿತಾಸಕ್ತಿ ಕಾಪಾಡುವಲ್ಲಿ ವಿಫಲವಾಗದಂತೆ ನೋಡಿಕೊಳ್ಳಬೇಕು. ಎಲ್ಲಾ ರೀತಿ ಆಡಳಿತಕ್ಕಿಂತ ಪ್ರಜಾಪ್ರಭುತ್ವ ಅತ್ಯಂತ ಉತ್ತಮವಾದರೂ ಅದರಲ್ಲಿ ಸ್ವಹಿತಾಸಕ್ತಿ ಅಪ್ರಮಾಣಿಕ ಭ್ರಷ್ಟಚಾರಗಳ ಸುಳಿವು ನೀಡದಂತೆ ನೋಡಿಕೊಳ್ಳಬೇಕು ಇದರಿಂದ ಸಮಾನತೆಯನ್ನು ಕಾಣಬೇಕು. ಇದೆ ಸಹಕಾರದ ಒಂದು ಪ್ರಮುಖ ಮೌಲ್ಯ.

**ಪತ್ತಿನ ಸಹಕಾರ ಸಂಘಗಳಲ್ಲಿ ಆಧುನೀಕರಣ :** ಇತ್ತೀಚಿನ ದಿನಗಳಲ್ಲಿ ಉದಾರೀಕರಣ, ಖಾಸಗೀಕರಣ, ಜಾಗತೀಕರಣದಿಂದಾಗಿ ಆರ್ಥಿಕ ನೀತಿಯನ್ನು ಅನುಸರಿಸಿ ಸಹಕಾರ ಕ್ಷೇತ್ರವು ನಾಗಾಲೋಟದಿಂದ ಸಾಗುತ್ತಿದೆ.

ಮೂರು ಟ್ರಿಲಿಯನ್ ಪಾಲರ್ ಆರ್ಥಿಕತೆಯಿಂದ ಐದು ಟ್ರಿಲಿಯನ್ ಆರ್ಥಿಕತೆಯತ್ತ ಸಾಗುತ್ತಿದೆ. ಈ ಸಾಧ್ಯತೆ ಆಗುತ್ತಿರುವುದು ರಾಷ್ಟ್ರದ ಎಲ್ಲಾ ಭಾಗಿದಾರರು ಆಧುನಿಕತೆಯನ್ನು ಅಳವಡಿಸಿಕೊಂಡಿರುವುದರಿಂದ ಎಂದರೆ ತಪ್ಪಾಗಲಾರದು. ಈ ನಿಟ್ಟಿನಲ್ಲಿ ಪತ್ತಿನ ಸಹಕಾರ ಸಂಘಗಳು ಮೂಲಭೂತಸೌಕರ್ಯಗಳನ್ನು ಯಾತ್ರಿಕತೆ ಮಾಹಿತಿ ತಂತ್ರಜ್ಞಾನದ ಅಳವಡಿಕೆಯಿಂದ ಆಧುನಿಕರಣದಿಂದ ಸದೃಢವಾಗಿ ನಿಲ್ಲಬೇಕು ಮತ್ತು ಹೆಚ್ಚಿನ ಮಟ್ಟದಲ್ಲಿ ಅಳವಡಿಸಿಕೊಳ್ಳಬೇಕಾಗಿದೆ.

**ಪತ್ತಿನ ಸಹಕಾರ ಸಂಘಗಳಲ್ಲಿ ಬಂಡವಾಳದ ಕೊರತೆ :** ಯಾವುದೇ ವ್ಯವಹಾರ ಮಾಡಲು ಬಂಡವಾಳ ಅತಿಮುಖ್ಯ. ಸಹಕಾರ ಸಂಘಗಳಲ್ಲಿ ಸ್ವಂತ ಬಂಡವಾಳದ ಕೊರತೆ ಇದ್ದು ಬೇರಡೆಯಿಂದ ತಂದ ಸಾಲ ಅಥವಾ ಠೇವಣಿಗಳನ್ನೇ ಅವಲಂಭಿಸಿರುತ್ತದೆ. ಇದರಿಂದ ಸಹಕಾರ ಸಂಘದ ಫಲಾನುಭವಿಗಳು ವಂಚಿತರಾಗುತ್ತಾರೆ. ಬಂಡವಾಳ ವೃದ್ಧಿಗೆ ತೆಗೆದುಕೊಳ್ಳಬೇಕಾದ ಕ್ರಮಗಳನ್ನು ಶಿಸ್ತಿನಿಂದ ಪಾಲಿಸಬೇಕಾಗುತ್ತದೆ.

**ಮಾಹಿತಿ ಸಂಗ್ರಹಣ ಕೇಂದ್ರ :** ಪತ್ತಿನ ಸಹಕಾರ ಸಂಘಗಳಲ್ಲಿ ಪ್ರಮುಖವಾಗಿ ಮಾಹಿತಿ ಸಂಗ್ರಹಣಾ ಕೇಂದ್ರವನ್ನು ಸ್ಥಾಪಿಸಬೇಕಾಗುತ್ತದೆ. ಯಾವುದೇ ಸಂಘ ಸಂಸ್ಥೆಯ ವಿಷಯವನ್ನು ಅಂಕಿ–ಅಂಶಗಳನ್ನು ತ್ವರಿತವಾಗಿ ಪೂರೈಸಲು ಈ ಸಂಗ್ರಹಣವು ಸಹಾಯವಾಗುತ್ತದೆ.

**ಉತ್ತಮ ತರಬೇತಿ, ಶಿಕ್ಷಣ ಅಳವಡಿಕೆ :** ಪ್ರತಿಯೊಂದು ಪತ್ತಿನ ಸಹಕಾರ ಸಂಘದ ಸದಸ್ಯರು, ಆಡಳಿತ ಮಂಡಳಿ, ಮುಖ್ಯಕಾರ್ಯನಿರ್ವಹಣಾಧಿಕಾರಿ, ಅಧ್ಯಕ್ಷರು, ಸಿಬ್ಬಂದಿ ವರ್ಗದವರು ಪ್ರಮುಖವಾಗಿ ಉತ್ತಮ ತರಬೇತಿ ಶಿಕ್ಷಣವನ್ನು ಹೊಂದಿರಬೇಕು. ಬದಲಾವಣೆಯ ಅಂಕಿ–ಅಂಶಗಳನ್ನು ನೀತಿ–ನಿಯಮಗಳನ್ನು ತಿದ್ದುಪಡಿ ಮಾಡಿರುವ ಕಾನೂನುಗಳನ್ನು ಅರಿತವಾಗಿರಬೇಕು. ಪ್ರಮುಖ ಶೈಕ್ಷಣಿಕ ಸಹಕಾರ ಕೇಂದ್ರಗಳಲ್ಲಿ ದೊರೆಯುವ ತರಬೇತಿ ಶಿಕ್ಷಣಗಳ ಬಗ್ಗೆ ಅರಿವು ಮೂಡಿಸುವಂತಾಗಬೇಕು.

**ಕಾರ್ಪೋರೇಟ್ ಆಡಳಿತ ನಿರ್ವಹಣೆ :** ಇತ್ತೀಚಿನ ಸಾಮಾಜಿಕ, ಆರ್ಥಿಕ ಮಾಹಿತಿ ಮತ್ತು ತಂತ್ರಜ್ಞಾನದ ಬದಲಾವಣೆಯ ಸನ್ನಿವೇಶದಲ್ಲಿ ಸಹಕಾರ ಕ್ಷೇತ್ರದಲ್ಲಿ ಕಾರ್ಪೋರೇಟ್ ಆಡಳಿತ ನಿರ್ವಹಣೆ ಗುಣ ಲಕ್ಷಣಗಳನ್ನು ಈ ರೀತಿ ಹೊಂದಿವೆ.

- ಪಾರದರ್ಶಕತೆ
- ಉತ್ತರದಾಯಿತ್ವ
- ವೃತ್ತಿಪರತೆ
- ಲಾಭ
- ಲೆಕ್ಕಪರಿಶೋಧನೆ
- ಮಾಹಿತಿ ಮತ್ತು ತಂತ್ರಜ್ಞಾನ
- ಪ್ರಮಾಣಿಕತೆ ಮತ್ತು ಬದ್ಧತೆ
- ದಕ್ಷ ಮಾನವ ಸಂಪನ್ಮೂಲಗಳು

ಈ ಮೇಲಿನ ಗುಣಲಕ್ಷಣಗಳನ್ನು ಪತ್ತಿನ ಸಹಕಾರ ಸಂಘಗಳು ತ್ವರಿತವಾಗಿ ಅಳವಡಿಸಿಕೊಳ್ಳಬೇಕಾಗುತ್ತದೆ.

ಸಹಕಾರ ಕ್ಷೇತ್ರವನ್ನು ಬಲಪಡಿಸಿ ಸಮಗ್ರ ಅಭಿವೃದ್ಧಿಗಾಗಿ ನೂತನ ಸಹಕಾರ ನೀತಿಯನ್ನು ರಚಿಸಲಾಗುತ್ತಿದೆ. ಅದಕ್ಕೆ ಎಲ್ಲಾ ಸಹಕಾರಿ ಸಂಸ್ಥೆಗಳ ಸಹಕಾರ ಅವಶ್ಯಕವಾಗಿದೆ. ಕರ್ನಾಟಕ ರಾಜ್ಯದಲ್ಲಿ ಸಹಕಾರ ಕ್ಷೇತ್ರ ಅದರಲ್ಲೂ ವಿಶೇಷವಾಗಿ ಪತ್ತಿನ ಸಹಕಾರ ಸಂಘಗಳು ಉತ್ತಮ ಸಾಧನೆಯನ್ನು ಮಾಡಿದ್ದು, ಇಲ್ಲಿ ಹಿರಿಯ ಸಹಕಾರಿಗಳ ಪ್ರಯತ್ನ, ಮಾರ್ಗದರ್ಶನ ಉತ್ತಮ ಸಲಹೆ ಇರುವುದರಿಂದ ಸಹಕಾರ ನೀತಿಯ ರಚನೆಗೆ ಅನುಕೂಲವಾಗಿದೆ.

ಪತ್ತಿನ ಸಹಕಾರ ಸಂಘಗಳು ಎದುರಿಸುತ್ತಿರುವ ಸಮಸ್ಯೆಯನ್ನು ಕೂಡ ಅವಲೋಕಿಸಿ ಸಹಕಾರ ನೀತಿಯನ್ನು ರಚಿಸಲಾಗುತ್ತಿದೆ. ಸಹಕಾರ ವಿಷಯದಲ್ಲಿ ಅಧ್ಯಯನ ಮಾಡಿದವರಿಗೆ ಆಧ್ಯತೆಯ ಮೇರೆಗೆ ಸಹಕಾರ ಸಂಘಗಳ ನೇಮಕಾತಿಯಲ್ಲಿ ಮೀಸಲಾತಿ ನೀಡುವುದರಿಂದ ಸಹಕಾರ ವಲಯದಲ್ಲಿ ವೃತ್ತಿಪರತೆಯ ಜೊತೆಗೆ ಬೆಳವಣಿಗೆಗೆ ಪೂರಕವಾದ ವಾತಾವರಣವು ಸೃಷ್ಟಿಯಾಗಲಿದೆ. ಈ ನಿಟ್ಟಿನಲ್ಲಿ ಪತ್ತಿನ ಸಹಕಾರ ಸಂಘಗಳು ಸಹಕಾರ ನೀತಿಯನ್ನು ಅಳವಡಿಸಿ ಹೆಚ್ಚಿನ ಅಭಿವೃದ್ಧಿಗೆ ಉತ್ತೇಜನ ನೀಡಬೇಕಾಗುತ್ತದೆ.


ಪತ್ತಿನ ಸಹಕಾರ ಸಂಘಗಳು ಸದಸ್ಯರಿಂದಲೇ ಠೇವಣಿ ಸಂಗ್ರಹಿಸಿ ಸ್ವಂತ ಸಂಪನ್ಮೂಲಗಳನ್ನು ಕ್ರೂಡೀಕರಿಸಿಕೊಂಡಿರುವ ಸಹಕಾರ ಸಂಸ್ಥೆಯಾಗಿದ್ದು, ಆರ್ಥಿಕ ಸ್ವಾವಲಂಬನೆಗೆ ಹೆಚ್ಚಿನ ಮಹತ್ವವನ್ನು ನೀಡುತ್ತಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಸಹಕಾರ ಕ್ಷೇತ್ರದ ಬಲವರ್ಧನೆಗೆ ವಿಶೇಷ ಯೋಜನೆಗಳನ್ನು ರೂಪಿಸುವುದು ಆಶಾದಾಯಕ ಬೆಳವಣಿಗೆಯಾಗಿದೆ. ಈ ಯೋಜನೆಗಳು ಸಹಕಾರ ಸಂಸ್ಥೆಗಳ ಬಲವರ್ಧನೆಗೆ ಪೂರಕವಾಗಿದೆ. ಸಹಕಾರ ಬಲಗೊಳ್ಳಲು ಅಗತ್ಯವಾದ ವಾತಾವರಣ ಸಹಕಾರ ಕ್ಷೇತ್ರದಿಂದ ನಿರ್ಮಾಣವಾಗಬೇಕಾಗಿದೆ.

ಇಂತಹ ಸಹಕಾರ ಸಂಸ್ಥೆಗಳ ಬಲವರ್ದನೆಗಾಗಿಯೇ ಸ್ಥಾಪನೆಯಾದ ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಮಹಾಮಂಡಳ ಇದರ ಮುಖ್ಯ ಉದ್ದೇಶ ಪತ್ತಿನ ಸಹಕಾರ ಸಂಘಗಳ ಅಭಿವೃದ್ಧಿಗಾಗಿ ಶಿಕ್ಷಣ, ತರಬೇತಿ ಹಾಗೂ ಪ್ರಚಾರ ಕಾರ್ಯಗಳನ್ನು ಮಾಡುವುದಾಗಿದೆ.

ಈ ಮಹಾಮಂಡಳವು ಬಿ.ಎಲ್. ಲಕ್ಕೇಗೌಡರಿಂದ 2004 ರಲ್ಲಿ ಪ್ರಾರಂಭವಾದ ಸಂಸ್ಥೆಯು ಪತ್ತಿನ ಸಹಕಾರ ಸಂಸ್ಥೆಗಳ ಬಲವರ್ಧನೆಗಾಗಿ ಕಳೆದ 18 ವರ್ಷಗಳಿಂದ ಶ್ರಮಿಸುತ್ತಿದ್ದು, ಪ್ರಸ್ತುತ ಸಂಸ್ಥೆಯ ಅಧ್ಯಕ್ಷರಾಗಿ ಶ್ರೀಮತಿ ಲಲಿತಾ ಜಿ.ಟಿ. ದೇವೇಗೌಡ ಅವರು ಕಾರ್ಯನಿರ್ವಹಿಸುತ್ತಿದ್ದಾರೆ. ಇವರ ಉತ್ತಮ ಮಾರ್ಗದರ್ಶನದಲ್ಲಿ ಇಂದು ಸಂಸ್ಥೆಯು ತನ್ನದೇ ಆದ ಸ್ವಂತ ಕಟ್ಟಡ ಉದ್ಘಾಟನಾ ಸಮಾರಂಭವನ್ನು ಇದೇ ತಿಂಗಳ 24 ರಂದು ನೆರವೇರಿಸುವ ಮೂಲಕ ಪತ್ತಿನ ಸಹಕಾರ ಸಂಘಗಳ ಬಲವರ್ಧನೆಗೆ ನಾಂದಿಯಾಗಲಿದೆ.

# ನನ್ನ ಸಹಕಾರಿ ಕ್ಷೇತ್ರದ ಗುರು ಬಿ.ಎಲ್. ಲಕ್ಕೇಗೌಡರು – ಎಸ್.ಟಿ. ಸೋಮಶೇಖರ್





ಶ್ರೀ ಬಿ.ಎಲ್. ಲಕ್ಕೇಗೌಡರು ಪದವೀಧರ ಕ್ಷೇತ್ರದಿಂದ ವಿಧಾನ ಪರಿಷತ್‌ಗೆ 1988ರಲ್ಲಿ ಸ್ಪರ್ಧಿಯಾಗಿದ್ದಾಗ ನನ್ನಂಥ ಪದವೀಧರರನ್ನು ಪತ್ತೆ ಹಚ್ಚುವ ಸಂದರ್ಭದಲ್ಲಿ ಅವರ ಪರಿಚಯವಾಯಿತು. ಅಲ್ಲಿಯವರೆಗೆ ಅವರ ವ್ಯಕ್ತಿತ್ವದ ವಾಗಲಿ ಅವರ ಸಮಾಜ ಸೇವೆ ಸಹಕಾರ ಸಂಘಗಳಲ್ಲಿನ ಅಮೂಲ್ಯ ಸೇವೆಯಾಗಲಿ ನನಗೆ ತಿಳಿದಿರಲಿಲ್ಲ. ಅವರು ವಿಶೇಷ ಜಿಲ್ಲಾಧಿಕಾರಿಗಳಾಗಿದ್ದು ರಾಜಕಾರಣಕ್ಕಾಗಿ ಸ್ವಯಂ ನಿವೃತ್ತಿ ಪಡೆದರು ಎಂಬುದನ್ನು ತಿಳಿದಿದ್ದ ನನಗೆ ಸರ್ಕಾರಿ ಅಧಿಕಾರಿಗಳು ವೈಟ್ ಕಾಲರ್ ಸಂಸ್ಕೃತಿಯಲ್ಲಿ ಬೆಳೆದು ಬಂದು ಅಧಿಕಾರ ಅನುಭವಿಸಿ ನಂತರ ರಾಜಕೀಯಕ್ಕೆ ಲಗ್ಗೆ ಹಾಕುತ್ತಾರೆಂಬ ಸಾಮಾನ್ಯ ಅಭಿಪ್ರಾಯ ಗೌಡರ ಬಗ್ಗೆ ನನಗಿತ್ತು.

ಆದರೆ ಅವರು ಒಬ್ಬ ಅಪರೂಪದ ವ್ಯಕ್ತಿ, ಸರಳ, ಸಜ್ಜನರು ಎಂಬ ವಿಚಾರ ನನ್ನ ಅರಿವಿಗೆ ಬಂದದ್ದು ಅವರ ಪ್ರಥಮ ಭೇಟಿಯಲ್ಲಿ. ಅವರು ಸರ್ಕಾರಿ ಅಧಿಕಾರಿ ಆಗಿ ಮಂಡ್ಯ, ಹಾಸನ ಜಿಲ್ಲೆಗಳಲ್ಲಿ ಮಾಡಿದ ಕೆಲಸಗಳು ಬೆಂಗಳೂರಿನಲ್ಲಿ ಕಟ್ಟಿ ಬೆಳೆಸಿದ ಸಂಘ–ಸಂಸ್ಥೆಗಳು ಇವೆಲ್ಲಾ ಸಾಧನೆಗಳ ಮೈಲುಗಲ್ಲುಗಳನ್ನು ಕೇಳಿ ಕಂಡು ಅವರ ಅಭಿಮಾನಿಯಾದೆ. ಇಂತಹ ಒಬ್ಬ ವ್ಯಕ್ತಿ ಪರಿಚಯವಾದದ್ದು ನನಗೆ ಹೆಮ್ಮೆ ತರುವ ವಿಚಾರವಾಯಿತು. ಇವರಂತಹವರು ವಿಧಾನ ಪರಿಷತ್‌ಗೆ ಆಯ್ಕೆಯಾದರೆ ಒಳ್ಳೆಯದು ಅವರಿಂದ ಮತ್ತಷ್ಟು ಸಮಾಜಸೇವೆಯಾಗುತ್ತದೆ ಎಂಬ ಹಿನ್ನೆಲೆಯಲ್ಲಿ ಪದವೀಧರರ ಕ್ಷೇತ್ರದಿಂದ ಅವರು ಆಯ್ಕೆಯಾಗಲೆಂದು ನಾನು ನನ್ನ ಸ್ನೇಹಿತರು ಹೆಚ್ಚಿನ ಶ್ರಮ ತೆಗೆದುಕೊಂಡೆವು. ಆ ಚುನಾವಣೆಯಲ್ಲಿ ಬಹಳ ಕಡಿಮೆ ಮತಗಳಿಂದ ಗೌಡರು ಸೋತರು. ಸೋತರು ಖಿನ್ನರಾಗದ ಗೌಡರು ಮತ್ತೆ ನಮ್ಮಂತಹ ಪದವೀಧರರನ್ನು ಒಟ್ಟಿಗೆ ಸೇರಿಸಿ ಬೆಂಗಳೂರು ಜಿಲ್ಲೆಗಳ ಪದವೀಧರರ ಪತ್ತಿನ ಸಹಕಾರಿ ಸಂಘ ಸ್ಥಾಪನೆಯ ತಮ್ಮ ಆಶಯವನ್ನು ವ್ಯಕ್ತಪಡಿಸಿ ಶೀಘ್ರವಾಗಿ ಆರಂಭಿಸುವ ಅಚಲವಾದ ನಿರ್ಧಾರ ತೆಗೆದುಕೊಂಡು ನನ್ನನ್ನೇ ನೇಮಿಸಿದರು. 1989ರಲ್ಲಿ ಸಂಸ್ಥಾಪಕ ಕಾರ್ಯದರ್ಶಿಯನ್ನಾಗಿ ನನ್ನನ್ನೇ ನೇಮಿಸಿದರು. ಗೌಡರಲ್ಲಿ ವಿಶೇಷ ಗುಣವೇನೆಂದರೆ ಹಿಡಿದ ಕೆಲಸವನ್ನು ಪಟ್ಟು ಹಿಡಿದು ಬೇಗನೆ ಮುಗಿಸುವುದು. ಯಾವುದೇ ಕೆಲಸವಾಗಲಿ ಉತ್ತಮವಾಗಿ ಪ್ರಮಾಣಿಕವಾಗಿರಬೇಕು. ಅಲ್ಲಿಂದ ನನಗೆ ಸಹಕಾರ ಸಂಘದಲ್ಲಿ ಅವರ ಮಾರ್ಗದರ್ಶನದಲ್ಲಿ ದುಡಿಯುವ ಅವಕಾಶ ದೊರೆಯಿತು. ಗೌಡರಿಗೂ ನನಗೂ ಈ ರೀತಿ ಸಹಕಾರ ಕ್ಷೇತ್ರದ ಬಾಂಧವ್ಯ ಬರಬರುತ್ತಾ ಗಟ್ಟಿಯಾಯಿತು. 1992ರಲ್ಲಿ ಗೌಡರು ಭಾರತ್ ಹೌಸಿಂಗ್ ಆಪರೇಟಿವ್ ಸೊಸೈಟಿಗೆ ಅವರ ನೇತೃತ್ವದಲ್ಲಿ ನಿರ್ದೇಶಕ ಸ್ಥಾನಕ್ಕೆ ಸ್ಪರ್ಧಿಸುವಂತೆ ಅವಕಾಶ ದೊರಕಿಸಿ ಕೊಟ್ಟರು. ನಿರ್ದೇಶಕನಾಗಿ ಆಯ್ಕೆಯಾದ ಪ್ರಥಮ ಬಾರಿಗೆ ಅವರು ನನ್ನನ್ನು ಗೌರವ ಕಾರ್ಯದರ್ಶಿಯನ್ನಾಗಿ ಎರಡನೇ ಬಾರಿಗೆ ಆಯ್ಕೆಯಾದ ಮೇಲೆ ಅಧ್ಯಕ್ಷನಾಗಿ ಸೇವೆ ಸಲ್ಲಿಸಲು ಅವಕಾಶ ಕಲ್ಪಿಸಿದರು. ಭಾರತ್ ಹೌಸಿಂಗ್ ಕೋಆಪರೇಟಿವ್ ಸೊಸೈಟಿಯಲ್ಲಿ ನಾನು ವ್ಯವಸ್ಥಿತವಾಗಿ ಕಾರ್ಯನಿರ್ವಹಿಸಲು ಅವರು ಪ್ರತಿ ಸಂದರ್ಭದಲ್ಲಿ ಸಲಹೆ ಸಹಕಾರ ನೀಡುತ್ತಲೇ ಬಂದಿದ್ದಾರೆ. 1995ರಲ್ಲಿ ಅವರ ನೇತೃತ್ವದ ಪ್ರತಿಷ್ಠಿತ ಭಾರತ್ ಕೋ ಆಪರೇಟಿವ್ ಬ್ಯಾಂಕಿನ ಚುನಾವಣೆಯಲ್ಲಿ ನನ್ನನ್ನು ಅಭ್ಯರ್ಥಿ ಆಗಲು ಹೇಳಿ ನಾಮಪತ್ರ ಹಾಕಿಸಿ ಆಯ್ಕೆಯಾಗುವಂತೆ ವಾತಾವರಣ ಸೃಷ್ಟಿಸಿದರು. ಈ ಸಂಗತಿಗಳನ್ನು ಏಕೆ ಹೇಳುತ್ತೇನೆಂದರೆ, ನಮ್ಮಂತ ಯುವಕರಲ್ಲಿ ಸೂಕ್ತವಾಗಿರುವ ಕಾರ್ಯಕ್ರಮವನ್ನು ಎಚ್ಚರಿಸುವ ಸ್ಫೂರ್ತಿಯಿಂದ ಮುನ್ನುಗ್ಗುವ ಛಲವನ್ನು ಅವರು ಇಂತಹ ಅವಕಾಶದ ಮೂಲಕ ಕಲ್ಪಿಸಿ ನಮ್ಮಂತವರ ಮೇಲೆ ಜವಾಬ್ದಾರಿ ಹೇರುತ್ತಾರೆ. ಈ ಕಾರಣಗಳಿಂದ ನನ್ನಂಥವರು ಮತ್ತು ಇನ್ನೂ ಅನೇಕರು ಸಹಕಾರ ಕ್ಷೇತ್ರದಲ್ಲಿ ಸೇವೆ ಸಲ್ಲಿಸಲು ಇಂದು ಸಾಧ್ಯವಾಗಿದೆ. ಈ ಸಹಕಾರಿ ಕ್ಷೇತ್ರಕ್ಕೆ ಬರುವ ಮುನ್ನ ನಾನು ಗೌಡರ ಬಗ್ಗೆ ಗೌರವ ಬೆಳೆಸಿಕೊಂಡು ಅಭಿಮಾನಿಯಾಗಿ ಇದ್ದೆ, ನಾನು ಸಹಕಾರಿ ಕ್ಷೇತ್ರದಲ್ಲಿ ಜವಾಬ್ದಾರಿ ವಹಿಸಿಕೊಳ್ಳುವಲ್ಲಿ ಅವರು ನನ್ನ ಮೇಲೆ ಭರವಸೆ ಇಟ್ಟು ಈ ಕ್ಷೇತ್ರದಲ್ಲಿ ದುಡಿಯಲು ಅವಕಾಶ ಕಲ್ಪಿಸಿ ಕೊಟ್ಟಿದ್ದಾರೆ. ನೀವು ಅವರಲ್ಲಿ ಹೋಗಿ ಯಾವುದೇ ಸಂದರ್ಭದಲ್ಲಿ ಆಡಳಿತ ಮಂಡಳಿಗಳಲ್ಲಿ ನಿರ್ದೇಶಕನಾಗಿಸಿ ಪದಾಧಿಕಾರಿ ಮಾಡಿ ಎಂಬ ಆಸೆಯನ್ನು ವ್ಯಕ್ತಪಡಿಸಿದ್ದಿಲ್ಲ. ಆದರೆ ಹೇಳಿದಂತೆ ನಡೆದುಕೊಂಡ ತೃಪ್ತಿ ಮಾತ್ರ ನನಗಿದೆ. ಸಹಕಾರ ಕ್ಷೇತ್ರದ ಬಾಂಧವ್ಯ ಹೇಗಾಯಿತು ಎಂದು ಹೇಳಲು ಈ ಸಂಗತಿಗಳನ್ನು ಹೇಳಬೇಕಾಯಿತು. ಇಂತಹ ಸೇವಾ ಕ್ಷೇತ್ರಕ್ಕೆ ಕಾಲಿಟ್ಟ ಮೇಲೆ ಬಡವರಿಗೆ, ಉದ್ಯಮ ವರ್ಗದವರಿಗೆ, ಯುವಕರಿಗೆ ಕೈಲಾದ ಮಟ್ಟಿಗೆ ಸಹಾಯ ಮಾಡುವ ಆತ್ಮವಿಶ್ವಾಸ ನನಗೆ ಬಂದಿದೆ. ಇದಕ್ಕೆ ಕಾರಣ ಬಿ.ಎಲ್. ಲಕ್ಕೇಗೌಡರು ಅಂದರೆ ನನ್ನ ಮೂಲಕ ಯಾರಿಗಾದರೂ ಸಹಾಯವಾದರೆ, ಅವೆಲ್ಲ ಗೌಡರಿಂದ ಎನ್ನುವ ಭಾವನೆ ನನ್ನಲ್ಲಿದೆ. ಮನುಷ್ಯನಾದವನಿಗೆ ಏನಾದರೂ ಸೇವೆ ಮಾಡಲು ಆಸೆಗಳು ಇದ್ದೇ ಇರುತ್ತೆ. ಆ ಮನಸ್ಸು ಇರುವವರು ಯಾವುದಾದರೂ ಮಾರ್ಗದಲ್ಲಿ ಸೇವೆ ಮಾಡುತ್ತಾರೆ. ಇಂತಹ ಅಲ್ಪಸ್ವಲ್ಪ ಭಾವನೆ ನನ್ನಲ್ಲಿದ್ದುದ್ದಕ್ಕೆ ಸ್ಫೂರ್ತಿಯಾದವರು. ಇದೇ ರೀತಿ ಬಿ.ಎಲ್.ಲಕ್ಕೆಗೌಡರು ಬಹಳ ಜನರನ್ನು ರೂಪಿಸುತ್ತಲೇ ಇದ್ದಾರೆ. ಅವರ ಪ್ರಾಮಾಣಿಕತೆ, ದಕ್ಷತೆಗಳು ಮಾದರಿಯಾಗಿರಬೇಕು. ಗೌಡರು ಬಹಳ ಸೂಕ್ಷ್ಮ. ಎಲ್ಲವನ್ನು ತರ್ಕ ಬದ್ಧವಾಗಿ ಮಾಡುತ್ತಾರೆ ನೋಡುತ್ತಾರೆ.

ಇಂತಹ ಉದಾತ್ತ ವ್ಯಕ್ತಿ ಸಮಾಜಕ್ಕಾಗಿ ಹಗಲಿರುಳು ಶ್ರಮಿಸುತ್ತಿರುವವರು. ಅವರು ಕಟ್ಟಿ ಬೆಳೆಸಿರುವ ಸಂಘ ಸಂಸ್ಥೆಗಳು ಆರೋಗ್ಯಕರವಾಗಿವೆ. ತಲೆಯಲ್ಲಿ ಮತ್ತಷ್ಟು ಯೋಜನೆಗಳನ್ನು ಹಾಕಿಕೊಂಡು ಸಮಾಜಕ್ಕಾಗಿ ಆ ಸಂದರ್ಭದಲ್ಲಿ ಅವರು ಒಬ್ಬ ತಪಸ್ವಿ ಅಥವಾ ಕರ್ಮ ಯೋಗಿ. ಇಂತಹ ಸೇವೆಯನ್ನು ಸ್ಮರಿಸುವುದು ನಮ್ಮ ಆದ್ಯ ಕರ್ತವ್ಯ. ಈ ನಿಟ್ಟಿನಲ್ಲಿ ಈ ಅಭಿನಂದನಾ ಸಮಿತಿ ರೂಪಿಸಿ ಹಿರಿಯರ ಕಿರಿಯರ ಸಲಹೆ ಸಹಕಾರ ಪಡೆದು ಅಮೂಲ್ಯ ಗ್ರಂಥವನ್ನು ಅವರಿಗೆ ಅರ್ಪಿಸಿ ಆತ್ಮೀಯವಾಗಿ ಸನ್ಮಾನಿಸುವ ಅವಕಾಶ ನನಗೆ ಸಿಕ್ಕಿದ್ದು ಹೆಮ್ಮೆಯ ಸಂಗತಿ ಒಂದು ಅಮೂಲ್ಯ ಕೆಲಸ ಮಾಡಿದ ತೃಪ್ತಿ ನನಗೆ ಹಾಗೂ ನನ್ನ ಮಿತ್ರರಿಗೆ.

**ಸಂಗ್ರಹ : ಕೃಪೆ : ಕರ್ಮಯೋಗಿ, ಶ್ರೀ ಬಿ.ಎಲ್. ಲಕ್ಕೇಗೌಡರ ಅಭಿನಂದನಾ ಗ್ರಂಥ**

